ಪಂಚಮ

ಸಂಪುಟ : 8 ಜನವರಿ 1984 ಬೆಲೆ 1–00 ಸಂಚಿಕೆ : 1

ಪ್ರಾಮಾಣಿಕತೆಯ ತಪ್ಪಿಗೆ........



ಈ ಚಿತ್ರದಲ್ಲಿ ನಗುತ್ತಿರುವ ಮದ್ದೂರಿನ ಪ್ರಾಮಾಣಿಕ ಅಬಕಾರಿ ಅಧಿಕಾರಿ ವೆಂಕಟನಾರಾಯಣ ಈಗ ಬದುಕಿಲ್ಲ. ಡಿಸೆಂಬರ್ 17 ರಂದು ಕಾಣೆಯಾದ ಇವರು ಮಾರನೆ ದಿನ ಬಾವಿಯೊಂದರಲ್ಲಿ ಹೆಣವಾಗಿ ತೇಲುತ್ತಿದ್ದರು! ಹೆಣದ ತಲೆಯ ಎಡಭಾಗ ಜಜ್ಜಿಹೋಗಿತ್ತು. ಎಡಗಡೆಯ ಕಣ್ಣುಗುಡ್ಡೆ ಹೊರಕ್ಕೆ ಬಂದಿತ್ತು. ಪ್ಯಾಂಟು ರಕ್ತಮಯವಾಗಿತ್ತು.

ಈತ ಪ್ರಾಮಾಣಿಕ ಅಸ್ಪೃಶ್ಯ ಅಧಿಕಾರಿಯಾದ್ದರಿಂದ ಅಬಕಾರಿ ಇಲಾಖೆಯ ಕಳ್ಳರೆಲ್ಲರ ದ್ವೇಷಕ್ಕೆ ಒಳಗಾಗಿದ್ದರು ಅಲ್ಲದೆ ಮೇಲ್ಜಾತಿಯ ಹೆಂಗಸೊಂದಿಗೆ ಲೈಂಗಿಕ ಸಂಬಂಧ ಇಟ್ಟುಕೊಂಡು ಜಾತಿ ಕಟ್ಟುಗಳನ್ನೆಲ್ಲ ಮುರಿದು ಮೇಲ್ಜಾತಿಯ ಕಣ್ಣುರಿಗೆ ಕಾರಣರಾಗಿದ್ದರು. (ವಿವರಕ್ಕೆ 5 ನೇ ಪುಟ ನೋಡಿರಿ)

ಇಂಥ ಕೊಲೆಯನ್ನೂ ಆತ್ಮಹತ್ಯೆ ಎಂದು ಮುಚ್ಚಿಹಾಕಲು ಸ್ಥಳೀಯ ಪೋಲೀಸರು ವ್ಯವಸ್ಥಿತ ಸನ್ನಾಹ ನಡೆಸಿದ್ದಾರೆ. ಸ್ವತಃ ವೆಂಕಟನಾರಾಯಣರ ಹತ್ತಿರದ ಸಂಬಂಧಿಕರಾದ ಪ್ರಖ್ಯಾತ ದಲಿತ ವಕೀಲ ಶ್ರೀ ಎಸ್. ಸಿ. ಬಿಳಿಗಿರಿರಂಗಯ್ಯನವರು ಮೇಲ್ಜಾತಿಯ ಹಣದ ಹೇಲಿಗೆ ಕೈಯೊಡ್ಡಿ ಈ ಸನ್ನಾಹದಲ್ಲಿ ಪಾಲುಗೊಂಡಿದ್ದಾರೆ. ದಲಿತ ಸಂಘರ್ಷ ಸಮಿ

ಆತ್ಮಹತ್ಯೆ ಎಂಬ ಹೆಸರಿನ ಭೀಕರ ಕೊಲೆಗಳು

ಪರಿಹಾರ ಕೇಳಿದ ತಪ್ಪಿಗೆ........

1983ರ ಅಕ್ಟೋಬರ್ ಹತ್ತರಂದು ರಾತ್ರಿ ಕೋಲಾರದ ಕೂಟೇರಿಯಲ್ಲಿ ಮುನಿಯಪ್ಪ ಎಂಬ ದಲಿತನ ಕೊಲೆಯಾಗಿದೆ. ಕೊಲೆಯ ಹಿಂದಿನ ಕಾರಣ ಇಂತಿದೆ. ದಲಿತರ ಒಂದೆಕರೆ ರಾಗಿ ಬೆಳೆಯನ್ನು ಭೂಮಾಲೀಕರ ದನಗಳು ನಾಶಪಡಿಸಿದ್ದರ ಹಿನ್ನೆಲೆಯಲ್ಲಿ ಪಂಚಾಯಿತಿ ನ್ಯಾಯ ನಡೆದು ನಾಲ್ಕು ಖಂಡುಗ ರಾಗಿಯನ್ನು ಪರಿಹಾರವಾಗಿ ನೀಡುವುದೆಂಬ ತೀರ್ಮಾನದೊಂದಿಗೆ ರಾಜಿಯಾಯಿತು. ದನಗಳನ್ನು ಬಿಡಿಸಿಕೊಂಡ ಜಮೀನ್ದಾರರು ರಾಗಿ ಕೊಡುವ ಬಗ್ಗೆ ಖಂಡತುಂಡವಾಗಿ ನಿರಾಕರಿಸಿದರು. ಮತ್ತು ನ್ಯಾಯ ಕೇಳಿದ ದಲಿತ ಮುನಿಯಪ್ಪನನ್ನು ಪಂಚಾಯತಿ ಸದಸ್ಯರ ಎದುರಿನಲ್ಲೇ ಎದೆಗೆ ಗುದ್ದಿ, ದೊಣ್ಣೆಗಳಿಂದ ಹೊಡೆದು ಕ್ರೂರರೀತಿಯಲ್ಲಿ ಕೊಲೆ ಮಾಡಿದ್ದಾರೆ. ಕೊಲೆ ಮಾಡಿಸಿದ ಭೂಮಾಲೀಕ ಮುನಿವೆಂಕಟಪ್ಪ ಯಾವ ತಪ್ಪೂ ಮಾಡದವನಂತೆ ತಿರುಗಾಡುತ್ತಿದ್ದಾನೆ.

ತಿಯಂಥ ಪ್ರಗತಿಪರ ಸಂಘಟನೆಗಳು ಇಂಥ ಬಿಳಿಗಿರಿ ರಂಗಯ್ಯನವರ ಬಟ್ಟೆಬಿಚ್ಚಿ ಕರ್ನಾಟಕದ ಬೀದಿ ಬೀದಿಗಳಲ್ಲಿ ಮೆರವಣಿಗೆ ಮಾಡಿ ಕೊಲೆಯಾದ ದಲಿತ ಬಾಂದವರಿಗೆ ಶಾಂತಿ ಕೋರಬೇಕಾಗಿದೆ. ಮತ್ತು ಮುಂದೆ ಕೊಲೆಯಾಗುವ ಮುಗ್ಧ ದಲಿತರನ್ನು ಕಾಯಬೇಕಾಗಿದೆ.

—ಸಂಪಾದಕ

ನೀರು ಕೇಳಿದ

ಪ್ರೀತಿಯ ಪಂಚಮ ಓ... ನೇತಾಡುತ್ತಿರುವವ ತುಮಕೂರು... ತಾಲ್ಲೂಕು ಮಲ್ಲಪ್ಪನ ಹಳ್ಳಿಯ ತಿಮ್ಮ... ಈ ಸ್ಥಿತಿಗೆ ಮುಖ್ಯ ಕಾರಣ ಈತ ತನ್ನ ಹಳ್ಳಿಯ... ರೊಂದಿಗೆ ಸಾರ್ವಜನಿಕ ಬಾವಿಯಲ್ಲಿ ಕುಡಿಯುವ ನೀರಿಗಾಗಿ ಸವರ್ಣೀಯರ ಎದುರು ಹೋರಾಡಿದ್ದು!

ಅಕ್ಟೋಬರ್ 29 ರ ರಾತ್ರಿ ಹೆಂಡತಿ ತಿಮ್ಮಕ್ಕ ಬಡಿಸಿದ ಊಟ ಮಾಡಿ ಮಾಮೂಲಿನಂತೆ ತಾನು ಗೇಣಿ ಮಾಡಿರುವ ಕಡಲೆಕಾಯಿ ಹೊಲದ ಕಾವಲಿಗೆ ಹೊರಟ ತಿಮ್ಮರೆಡ್ಡಪ್ಪ ಅ. 30 ರ ಮುಂಜಾನೆಯಾದರೂ ಮನೆಗೆ ಬರಲಿಲ್ಲ. ಗಾಬರಿಯಿಂದ ತಿಮ್ಮಕ್ಕ ಹೊಲದತ್ತ ಓಡಿದಳು. ಹಾದಿಯಲ್ಲೇ ಹೊಂಗೆ ಮರದಲ್ಲಿ ಗಂಡನ ಶವ ನೇತಾಡುತ್ತಿತ್ತು. ಹೆಣ ನೆಲದಿಂದ ಎರಡು ಮೂರು ಇಂಚಿನಷ್ಟು ಮಾತ್ರ ಮೇಲಿತ್ತು. ಆತನ ಚಪ್ಪಲಿ, ಟಾರ್ಚ್ ಮುಂತಾದವು ಅಸ್ತವ್ಯಸ್ತವಾಗಿ ಬಿದ್ದಿದ್ದವು. ಮರ್ಮಸ್ಥಾನದ ಬಳಿ ಗಾಯವಾಗಿ ರಕ್ತ ಸೋರಿತ್ತು.

ಪೋಲೀಸರ ಕ್ರೂರ ಕಣ್ಣುಗಳಿಗೆ ಇದು ಇನ್ನೂ ಆತ್ಮಹತ್ಯೆಯಾಗೇ ಕಾಣುತ್ತಿದೆಯಂತೆ! ಕಳೆದ ಆರೇಳು ತಿಂಗಳಲ್ಲಿ ಇದೇ ಜಿಲ್ಲೆಯ ಇದೇ ಪೋಲೀಸು ಕಣ್ಣುಗಳಲ್ಲಿ ಕುರಿಪಾಳ್ಯದ ಗಂಗರಾಜು, ಮಲ್ಲೆ ಕಾವಲಿನ ರಾಮಕೃಷ್ಣ, ಕುಣಿಗಲ್‌ನ ಒರ್ವ ಮಹಿಳೆ–ಇತ್ಯಾದಿ ದಲಿತರ ಕೊಲೆಗಳು ಮುಚ್ಚಿ ಹೋಗಿವೆ!



-ಕ್ರಾಂತಿಗೆ ಕೊಂಡಿ: ದಲಿತ ಲೇಖಕ ಸಮ್ಮೇಳ

ಧಾರವಾಡದಲ್ಲಿ ಡಿ. 10, 11ರಂದು ನಡೆದ ಐತಿಹಾಸಿಕ ದಲಿತ ಲೇಖಕ ಸಮ್ಮೇಳನದ ವಿಶ್ಲೇಷಣೆ

ಎನ್. ಎಸ್. ಶಂಕರ್

...ಕ್ರಾಂತಿಯ ಸಂಬಂಧ–ಹಳೇ ...ಹಿತ್ಯ ಸಮ್ಮೇಳನದಲ್ಲಿ ಇದೇ ...ನ ವಿವೇಚನೆ.

...ತ್ಯವೇನು ಕ್ರಾಂತಿ ಮಾಡೀತೆ? ಕ್ರಾಂತಿ ಮಾಡುವವರು ಕ್ರಾಂತಿಕಾರರು. ಸಾಹಿತಿಗಳು ಬರೇ ಬರೆಯುವವರು. ಎತ್ತಣ ಮಾಮರ? ಎತ್ತಣ ಕೋಗಿಲೆ? ನಿಜ. ಮಾಮರ ಮಾಮರವೇ, ಕೋಗಿಲೆ ಕೋಗಿಲೆಯೇ. ಆದರೆ ಮಾಮರದ ಮಡಿಲಲ್ಲಿ ಕೋಗಿಲೆಯ ಗಾಯನ ಹೊರಡುತ್ತದೆ. ಮನಸ್ಸು ಹನಿಗೊಡುತ್ತದೆ. ಸಾಹಿತ್ಯದ ಮಡಿಲಲ್ಲಿ ಕ್ರಾಂತಿಯ ಧ್ವನಿಯೆದ್ದ ಹಾಗೆ.

ಈ ಪ್ರಶ್ನೆಯನ್ನು ಶೋಧನೆಗೆ ತೆಗೆದುಕೊಂಡವರು ಇಬ್ಬರು. ಎರಡನೇ ರಾಜ್ಯಮಟ್ಟದ ಈ ಸಮ್ಮೇಳನ ಉದ್ಘಾಟಿಸಿದ ದೇವನೂರ ಮಹಾದೇವ ಮತ್ತು ಅಧ್ಯಕ್ಷತೆ ವಹಿಸಿದ್ದ ಬಿ. ಕೃಷ್ಣಪ್ಪನವರು. ಪಾಂಡವರ ಕತೆಯಾಗಿಯೋ, ಕೌರವರ ಕತೆಯಾಗಿಯೋ, ಸಾಹಿತ್ಯ ನಮ್ಮ ನಂಬಿಕೆಗಳನ್ನು ಆಳುತ್ತದೆ. ಮಹಾದೇವ ಮಾರಮ್ಮನಿಗೆ ಕೋಣನ ಬಲಿ ಕೊಡುವ ಹಿಂದಿನ ಕತೆ ಹೇಳಿದರು. ಬ್ರಾಹ್ಮಣ ಕನ್ಯೆಯೊಬ್ಬಳಿಗೆ ತಾನೂ ಬ್ರಾಹ್ಮಣನೆಂದು ಹೇಳಿಕೊಂಡು ಮದುವೆಯಾದ ಮಾದಿಗರವನ ಜಾತಿ, ಆ ಹುಡುಗಿಗೆ ಗೊತ್ತಾಗುತ್ತೆ. ಅವಳು ಶಾಪ ಕೊಡುತ್ತಾಳೆ. ತಾನು ಮಾರಮ್ಮನಾಗಿ ಕೋಣನ ರೂಪದಲ್ಲಿ ಮಾದಿಗನ ಬಲಿ ಬೇಡುತ್ತಾಳೆ. ಹೀಗೆ ತಮ್ಮವರನ್ನೇ ತಾವು ಬಲಿಕೊಡುವ. ಅಂಥ ಬಲಿಯನ್ನು ಶ್ರದ್ಧಾಭಕ್ತಿಗಳಿಂದ ಕರ್ತವ್ಯದ ಹಾಗೆ ಮಾಡುವ ಈ ಬೌದ್ಧಿಕ ಶರಣಾಗತಿಯನ್ನು ಸಾಧಿಸಿರುವುದು, ಸಾಹಿತ್ಯವಲ್ಲವೇ? ವರ್ಣಸಂಕರವನ್ನು ತಡೆಯಲು ಜನರ ಬದುಕಿನಲ್ಲಿ ಆಳವಾಗಿ ಬೇರಿಳಿಯುವಂಥ ನಂಬಿಕೆಗರನ್ನು ಹುಟ್ಟಿಸುವುದು ಇಂಥ ಸಾಹಿತ್ಯವಲ್ಲವೇ? ಅದಕ್ಕೆ ಸಾಹಿತ್ಯದ ಪಾತ್ರ ಕಡೆಗಣಿಸಬಾರದು ಅಂದರು ಮಹಾದೇವ.

ಸಮಾಜದ 'ಪ್ರಜ್ಞೆ'ಯ, ಸಾಮೂಹಿಕ ಚಿಂತನೆಯ ನೆಲೆಯಲ್ಲಿ ಇದನ್ನೇ ವಿಸ್ತಾರವಾಗಿ ಕೈಗೆತ್ತಿಕೊಂಡವರು ಕೃಷ್ಣಪ್ಪ. ಸಾಹಿತ್ಯದಿಂದ ನೇರವಾಗಿ ಕ್ರಾಂತಿಯಾಗದಿರಬಹುದು, ಆದರೆ ಕ್ರಾಂತಿಗೆ ಬೇಕಾದ ಭೂಮಿಕೆಯನ್ನು, ಅರಿವಿನ ಹದವನ್ನು ತಯಾರು ಮಾಡುವ ಸಾಧನ ಸಾಹಿತ್ಯವೇ–ಎನ್ನುವ ವಿಶ್ಲೇಷಣೆಯನ್ನು ಮುಂದಿಟ್ಟರು.

ಕ್ರಾಂತಿಗೆ ಮುನ್ನ ಸಾಂಸ್ಕೃತಿಕ ಕ್ರಾಂತಿಯಾಗಬೇಕು. ಅದು ಕ್ರಾಂತಿಯ ಮಹಡಿಗೆ ಮೊದಲ ಮೆಟ್ಟಿಲು–ಎನ್ನುವ, ಸಾಕಷ್ಟು ಹಳೆಯದಾದ ತತ್ವವನ್ನೇ ಇವರಿಬ್ಬರ ಮಾತುಗಳ ಹಿನ್ನೆಲೆಯಲ್ಲಿ ಅರ್ಥಮಾಡಿಕೊಳ್ಳಬಹುದಲ್ಲವೇ?

ಕ್ರಾಂತಿಯ ಮಾರ್ಗದ ಮುಖ್ಯವಾದ ಪ್ರಶ್ನೆ ಇಲ್ಲಿ ಏಳುತ್ತದೆ. ಒಬ್ಬ ಉಗ್ರಗಾಮಿಗೆ, 'ಪರಿಣಾಮ ಏನೇ ಆಗಲಿ, ನನ್ನ ಕೆಲಸ ನಾನು ಮಾಡುತ್ತೇನೆ' ಎನ್ನುವ ವ್ಯಕ್ತಿವಾದಿ ಛಲಗಾರನಿಗೆ,– ಸಾಹಿತ್ಯದ ಅಗತ್ಯವಿಲ್ಲದಿರಬಹುದು. ಆದರೆ ಜಾನಪದ ಪ್ರಜ್ಞಾಕೋಶವನ್ನು ರೂಪುಗೊಳಿಸುವ ಸಲುವಾಗಿ ಸಾಹಿತ್ಯವನ್ನು ಬಳಸಬಹುದೆಂಬ ಪ್ರಶ್ನೆ ಬರುವುದೇ 'ಸಾಮೂಹಿಕ ಕ್ರಿಯಾಶೀಲತೆ' ನಮ್ಮ ಉದ್ದೇಶವಾಗಿದ್ದಾಗ. ಎಲ್ಲರಿಗಾಗಿ ನಿರ್ಮಾಣವಾಗಬೇಕಾದ ಸಮಾಜ ಎಲ್ಲರಿಂದ ರೂಪು ಪಡೆಯಬೇಕು ಎನ್ನುವ ಕಳಕಳಿ ಈ ಚಿಂತನೆಯ ತಿರುಳು.

ಆದರೆ ಸಾಹಿತ್ಯ–ವಿಶೇಷತಃ ದಲಿತ ಸಾಹಿತ್ಯ ಇನ್ನು ಮೇಲಾದರೂ ಎಂಥದ್ದಿರಬೇಕು? ಸಾಹಿತ್ಯದ ಜೀವಾಳ, ಕೈಕಾಲು, ರೆಕ್ಕೆಪುಕ್ಕ ಹೇಗಿರಬೇಕು? ಸಮ್ಮೇಳನದ ಹಿಂದಿನ ದಿನದ ಲೇಖಕರ ಸಭೆಯಲ್ಲೂ ಈ ಪ್ರಶ್ನೆ ಬಂತು, ಸಮ್ಮೇಳನದ ದಿನವೂ ಪ್ರಸ್ತಾಪಕ್ಕೆ ಬಂತು. ರಕ್ತ, ಕೆಂಪು, ಕ್ರಾಂತಿ ಮುಂತಾದ ಕೆಲವು ಉಗ್ರಶಬ್ದಗಳನ್ನು ಪೋಣಿಸಿಬಿಟ್ಟರೆ ಕಾವ್ಯವಾಯಿತು ಅಂದುಕೊಳ್ಳುವ ಬಗ್ಗೆ ಬೇಸರ, ಅಸಮಾಧಾನವನ್ನು ಲೇಖಕರ ಸಭೆಯಲ್ಲಿ ಕೆ. ರಾಮಯ್ಯ ವ್ಯಕ್ತಮಾಡಿದರು. ಕವಿಗೋಷ್ಠಿ ಅಧ್ಯಕ್ಷತೆ ವಹಿಸಿದ್ದ ಸುಕನ್ಯಾಮಾರುತಿಯವರಂತೂ ಖಡಾಖಂಡಿತವಾಗಿ, ನಿಷ್ಠೂರವಾಗಿ ರೋಷ ಒಂದು ರಸವಾಗಬಹುದೇನು ಅಂತ ಬೈದೂಬಿಟ್ಟರು. ಇದರ ವ್ಯಾಪಕ ಚರ್ಚೆಯನ್ನು ಮಾಡಿದ್ದು–ಇಂದೂಧರ ಹೊನ್ನಾಪುರ.

ಬರೀ ಸಿಟ್ಟು ಯಾಕೆ? ಅಂಥ ಸಿಟ್ಟು ತರಿಸುವ ಬದುಕನ್ನೇ ಹೇಳಿರಿ. ಬದುಕೇ ಹಾಡಾಗಲಿ. 'ದುಡಿದಿಕ್ಕುವ ನನ್ನವರ ಒಡಲಿನಳಲ ಚೆಲ್ಲುವ' ಕೆಲಸವನ್ನು ಸಾಹಿತ್ಯ ಮಾಡಲಿ. ಎಲ್ಲ ಸಾಹಿತ್ಯವೂ (ಪ್ರತಿಗಾಮಿಯಾಗಿರಲಿ, ಪ್ರಗತಿಪರವಾಗಿರಲಿ) ಮೂಲತಃ ಮಾನವೀಯತೆಯ ಅಂಶ ಇಟ್ಟುಕೊಂಡೇ ಹುಟ್ಟುತ್ತೆ. ಕಾಲಾನುಕ್ರಮದಲ್ಲಿ ಉ... ಗಳು ಬೇರೆಯಾಗಬಹುದು ಅಷ್ಟೇ. ಈಗ ... ಲಾದ ಉದ್ದೇಶಗಳ ಹಿನ್ನೆಲೆಯಲ್ಲಿ ನೇರ... ಬದುಕನ್ನೇ ಬಿಚ್ಚಿಡುವುದೇ ಸಾಹಿತ್ಯ ಎಂ... ಇಂದೂಧರ. "ಗುಲಾಮನಿಗೆ ತಾನು ಗುಲಾ... ಅಂತ ಗೊತ್ತಾಗಿಬಿಟ್ಟರೆ ಸಾಕು. ಅವನು ಗು... ಮನಾಗಿ ಉಳಿಯುವುದಿಲ್ಲ" ಎಂದು ಅಂಬೇಡ್ಕ... ಹೇಳಿದ್ದು ಇದೇ ಅರ್ಥದಲ್ಲಿ ಅಲ್ಲವೇ?

ಕೃಷ್ಣಪ್ಪನವರು–form ಗಿಂತ content ಮು... ಎಂದು ಹೇಳಿದರೂ ಸಹ ದಲಿತ ಸಾಹಿತ್ಯ ಆ ಹ... ವನ್ನು ದಾಟಿಬಂದಿದೆ. ಆಮೇಲೆ ಸಮಾರೋ... ಭಾಷಣ ಮಾಡುತ್ತಾ ಚನ್ನವೀರ ಕಣವಿಯವ... 'ಇಕ್ರಲಾ' ಅಂದ್ರೇನೇ ಇಕ್ಕುವ ಧ್ವನಿ ಬರೋದ... ಮೊದಲು ಸಿಟ್ಟೇ ಹೇಳಬೇಕು. ಆಮೇಲೆ ರಸಪಾ... ಬಂದೇ ಬರ್ತದೆ ಅನ್ನುತ್ತಿದ್ದಾಗ ಸಭಾಂಗಣದ... ಕೂತು ರಾಗ ಎಳೆಯುತ್ತಿದ್ದ ಮಹಾದೇ... first generation ಯಾಕೆ ಚೆನ್ನಾಗಿ ಬರೆಯೋಕ್ಕಾಗ... ಕುವೆಂಪು ತಂದೆಯಾಗಲೀ, ಲಂಕೇಶರ ಅಪ್ಪನ... ರಾಗಲೀ ಬರಹಗಾರರಾಗಿದ್ದರೇ? ಅಂತ ಕೇಳು... ದ್ದರು. ಡಿ. ಎಸ್. ನಾಗಭೂಷಣ ಕೂಡಾ– 'ಒಂದು ಸಾಲಿನ ಬರಹಗಾರರಾದ ಮೇಲೆ ದಲಿ... ರಲ್ಲಿ ಎರಡನೇ ಸಾಲಿನ ಬರಹಗಾರರ ಗುಂಪ... ಹುಟ್ಟಿಕೊಂಡಿಲ್ಲ? ಇದನ್ನು ವಿವೇಚಿಸಿ' ಅ... ಪ್ರಶ್ನೆ ಹಾಕಿದರು.

ಬಂಡಾಯ : ದಲಿತರಿಗೆ ನಿರಾಶೆ

ಈ ಸಮ್ಮೇಳನದ ಅತ್ಯಂತ ಪ್ರಮುಖ ವಿ... ಮಾನವೆಂದರೆ-ಬಂಡಾಯದಿಂದ ಬೇರೆಯಾಗಿ (ಬೆ... ಯಾಗಿ ಅಂತ ಹೇಳಬಹುದೇ?) ದಲಿತ... ಪ್ರತ್ಯೇಕ ವೇದಿಕೆ ರಚಿಸಿಕೊಂಡಿದ್ದು. ಬಂಡಾ... ಸಂಘಟನೆ, ವ್ಯಕ್ತಿಗಳ ತಿಕ್ಕಲೋ–ತಾತ್ವಿಕ ಗೊಂ... ಲವೋ–ಅಂತೂ ಏನೋ ನಿಮಿತ್ತವಾಗಿ ನಿಷ್ಕ್ರಿ... ವಾಗುತ್ತಾ ಬಂತು–ಎಂದು ಗೊಣಗಿದವರು ರೆ... ದವರೇ ಬಹಳ ಜನ. ಬಂಡಾಯವೂ ದಲಿತರನ್ನ... ನಿರಾಸೆಗೊಳಿಸಿತು ಅನ್ನುವುದರ ಫಲ–"ದ... ಲೇಖಕ ಕಲಾವಿದರ ಬಳಗ". ಇನ್ನು ಮುಂದೆಯ... ಬಂಡಾಯದೊಡನೆ ಸಹಕಾರ-ಸಾಮರಸ್ಯ ಮುಂ... ವರೆದೇ ಇರುತ್ತೆ, ಸಂಬಂಧವನ್ನೇ ಕಡಿದುಕೊಂ... ಬಿಟ್ಟರೆ ಇಬ್ಬರಿಗೂ ಆಘಾತವೇ,–ಆದ... ಪ್ರತ್ಯೇಕ ವೇದಿಕೆ ಸದ್ಯಕ್ಕಂತೂ ಇರಲಿ ಅನ... ಒಮ್ಮತ ವ್ಯಕ್ತವಾಯಿತು.

ಲೇಖಕರ ಸಭೆಯಲ್ಲಿ ಕನ್ನಡಕ ಕೈಯಲ್ಲಿ ಹಿಡಿ... ಹುಬ್ಬು ಕೂಡಿಸಿಕೊಂಡು ಗಂಭೀರವಾಗಿ ಧ್ಯಾ...

ಪುಂ...

ದ್ದ ಡಾ॥ ಬಿ. ಕೃಷ್ಣಮೂರ್ತಿ ಇದ್ದಕ್ಕಿದ್ದಂತೆ ಹಳ ಮೌಲಿಕವಾದ ಪ್ರಶ್ನೆ ಒಗೆದರು_"ಬಂಡಾ ಯದಲ್ಲಿದ್ದ ಶೇಕಡಾ90 ಮಂದಿ ದಲಿತರೇ. ಆದರೂ ಗೇಕಾಯಿತು ? ಅವರೆಲ್ಲ ಆಚೆ ಬಂದ ಮೇಲೆ ಯಾರೊಡನೆ ಸಂವಾದ ಮಾಡುವುದು ?"

ದಲಿತರು ಆಚೆ ಬರುವುದು–ಬಂಡಾಯ ಒತ್ತೊಮ್ಮೆ ಆತ್ಮಶೋಧನೆ ಮಾಡಿಕೊಳ್ಳಲಿ, ಹೊಸ ರಕ್ತ ಹರಿಯಲಿ ಅನ್ನುವ ಕಾರಣಕ್ಕೆ. ಆದರೆ ಮೊದಲ ಪ್ರಶ್ನೆ ಅಷ್ಟೇ ಸರಳವಾದದ್ದಲ್ಲ.

ದಲಿತರೇ ಅಲ್ಲಿ ಬಹುಸಂಖ್ಯಾತರಾಗಿದ್ದರೂ ಯಾಕೆ ಬಂಡಾಯ ತೋಪಾಗಿಬಿಟ್ಟಿತು ? ಸದ್ಯದ ಸಾಂಸ್ಕೃತಿಕ ನಡಿಗೆಯ ಕಡೆ ಈ ಪ್ರಶ್ನೆ ಬೊಟ್ಟು ಮಾಡುತ್ತಿರಬಹುದೇ ? ಅಂದರೆ, ಬಂಡಾಯ ದಲಿ ತರ ಮನೆಯೇ ಆಗಿದ್ದಿರಬಹುದು, ಆದರೆ ಅಲ್ಲಿ ದಲಿತರು ದಲಿತವಂತರಾಗಿ ಇದ್ದರೇ ? ಅನ್ನುವ ಸವಾಲೂ ಇದೆ.

ಸಾಂಸ್ಕೃತಿಕ ಸವಾಲು

ಇದುವರೆಗೆ ಈ ನಾಡಿನಲ್ಲಿ ನಡೆದ ಯಾವ ಆಂದೋಳನವೂ ಒಟ್ಟಾರೆ ವೈದಿಕ ಚೌಕಟ್ಟಿನಿಂದ ಪೂರ್ತಿಯಾಗಿ ಕೊಡವಿಕೊಂಡು ಆಚೆ ಬಂದದ್ದಿಲ್ಲ. ಕಾಳಜಿಗಳು ಎಷ್ಟೇ ಪ್ರಗತಿಪರವಾಗಿದ್ದರೂ, ಒಂದಿ ಲ್ಲೊಂದು ಹಂತದಲ್ಲಿ ವೈದಿಕ ಮೂಲ ವ್ಯಕ್ತಿ ವಿಶಿಷ್ಟವಾದದ ಫಲವಾದ ಅಹಂಕಾರದಿಂದಲೋ ಅಥವಾ ಜಾನಪದದ ಆಳಕ್ಕಿಳಿಯದ ವೈದಿಕ ಬಿಂಕ ದಿಂದಲೋ ನಡಮುರಿದುಕೊಂಡಿದ್ದೇ ಹೆಚ್ಚು. ಬೌದ್ಧಧರ್ಮ–ಬಸವಣ್ಣನ ಚಳವಳಿಯ ಸೋಲು ಗಳನ್ನೂ ಇದೇ ನೆಲೆಯಲ್ಲಿ ಅರ್ಥೈಸಬಹುದೇನೋ. ಕಡೆಗೂ ಬಂಡಾಯ ತನ್ನ ಚಾರಿತ್ರಿಕ ಆಗ್ರಹಗಳನ್ನು ಸಮರ್ಪಕವಾಗಿ ಅರಿಯದೇ ಹೋದದ್ದಕ್ಕೂ ಇದೇ ಕಾರಣವಿರಬಹುದು. ಇದನ್ನೇ ಬೇರೆ ಮಾತುಗಳಲ್ಲಿ ಹೇಳುವುದಾದರೆ ಬಂಡಾಯವಷ್ಟೇ ಏನು, ದಲಿತ ಚಳವಳಿಯೂ ಸಾಂಸ್ಕೃತಿಕವಾಗಿ ವೈದಿಕ ನೆಲೆಗೆ ವಿರುದ್ಧವಾದ ಸಮಗ್ರ ವೈಶಿಷ್ಟ್ಯ ವಾಗಿ ವ್ಯಕ್ತವಾಗಿಲ್ಲ.

ಈಗ ಒಂದು ಘಟ್ಟ ಮುಟ್ಟಿರುವ ದಲಿತ ಚಳ ವಳಿ ತನ್ನನ್ನೇ ತಾನು ನೋಡಿಕೊಳ್ಳಬೇಕಿದೆ. ದಲಿತ ವಂತಿಕೆಯನ್ನು ಪಡೆಯಬೇಕಿದೆ. ದಲಿತತನ ಕೇವಲ ಒಂದು ಹಣೆಪಟ್ಟಿಯಾಗದೆ, ಹೆಮ್ಮೆಯ-ಸಹೃದ ಯತೆಯ ಒಂದು ಸಾಂಸ್ಕೃತಿಕ ಸನ್ನಿವೇಶವೇ ಆಗಿ ಮೇಲೇಳಬೇಕಿದೆ. ಒಟ್ಟಾರೆ ಬದುಕನ್ನು ಬದುಕುವ ಬದುಕನ್ನು ಹೇಳುವ ಶೈಲಿಯೇ ಆಗಿ ಅರಳಬೇಕಿದೆ. ಇದು ನಮ್ಮ ಮುಂದಿರುವ ಸವಾಲು.

ಇದನ್ನು ಹೇಗೆ ಎದುರಿಸಬಹುದೆನ್ನಲು ಪಂಡಿ ತ ರಾಜೀವ ತಾರಾನಾಥ್ ಒಳ್ಳೇ ಸೊಗಡಿನ ವಿಧಾನ ಒಂದನ್ನು ಸೂಚಿಸಿದರು. (ಅವರು ಖುದ್ದು ಹಾಜರಿರದಿದ್ದರೂ ಅವರ ಪ್ರಬಂಧವಿತ್ತು) ಗೋಕುಲವೇನು ಇಡೀ ಭರತವರ್ಷದ ಒಕ್ಕಲೇ ? ಯಾವುದೋ ಕುಗ್ರಾಮ. ಆದರೂ ಗೋಕುಲಾ ಷ್ಟಮಿ ಇಡೀ ದೇಶದ ಹಬ್ಬ. ಯಾಕೆ ? ಇದು ವೈದಿಕರ ವಸಾಹತುಶಾಹಿಯ ಒಂದು ಮುಖ. ದೇಶದುದ್ದಕ್ಕೂ ಅವರು ಭುಜಕ್ಕೆ ಭುಜ, ಹೆಗಲಿಗೆ ಹೆಗಲು. ಆದರೆ ನಾವು ? ತೋಪು ! ಹೊಲೆಯನಿಗೆ ಪಕ್ಕದ ಮಾದಿಗನೇ ದೂರ. ಆದ್ದರಿಂದ ಅಂಥ ವಸಾ ಹತು ವಾದವನ್ನು ನಾವು ಸಾಂಸ್ಕೃತಿಕವಾಗಿ ಉತ್ತರಿಸ ಬೇಕಾದರೆ ಗೋಕುಲಾಷ್ಟಮಿ ಥರ ಮಾರಮ್ಮನ ಹಬ್ಬ–ಅಣ್ಣಮ್ಮನ ಹಬ್ಬ ಆಚರಿಸಬೇಕು. ತಾರಾ ನಾಥರು ಸೂಚಿಸುವ ಈ ಸಾಂಸ್ಕೃತಿಕ ಒಗ್ಗಟ್ಟು ನಮಗೊಂದು ದಿಕ್ಕಾಗಬಹುದು.

ಆದೇಕೋ ವಿಮರ್ಶೆಯ ಹೊಸ ದಿಕ್ಕುಗಳು ಸಮ್ಮೇಳನದಲ್ಲಿ ಹೊಳೆಯಲೇ ಇಲ್ಲ, ಕಣವಿಯ ವರು ವಿಮರ್ಶೆಯ ಬುಡವನ್ನು ವಿಸ್ತಾರಗೊಳಿ ಸುವ ಮಾತಾಡಿದರೆ, ಪ್ರಬಂಧ ಕಳಿಸಿದ್ದ ಎಚ್. ಎಸ್. ಶಿವಪ್ರಕಾಶ್ ದಲಿತರ ಪರ ವಾದ ಹೂಡಿ ದ್ದಂತಿತ್ತು. ಸಾಹಿತ್ಯ ಮೊದಲು, ಆಮೇಲೆ ವಿಮರ್ಶೆ ; ಈಗಿರುವ ವಿಮರ್ಶೆಯ ಚೌಕಟ್ಟು ಎಲ್ಲ ಸಾಹಿತ್ಯಕ್ಕೂ ರಾಮಬಾಣ ಅನ್ನುವಂಥ ಧೋರಣೆ ತಪ್ಪು ಅಂದರು. ಅಷ್ಟೇ. ಕೃತಿಯಷ್ಟೇ ಅಲ್ಲದೆ ಕೃತಿಕಾರನ ಹಿನ್ನೆಲೆಯೂ ಮುಖ್ಯ ಅನ್ನುವ ಮಾತು ಈಗೀಗ ಕೇಳಿಬರುತ್ತಿದೆ. ವಿಮರ್ಶೆ ಒಂದು ಸಮಾಜ ವೈಜ್ಞಾನಿಕ ಪರಿಶೀಲನೆ ಆಗಬೇಕು, ಕೃತಿಯನ್ನು ಹಾದು ಕೃತಿಕಾರನನ್ನೂ ಹೊಕ್ಕು ಸಮಾಜವನ್ನು ಅರ್ಥೈಸುವ ಕ್ರಿಯೆಯಾಗಲೂ ಬಹುದು ಅನ್ನುವ ಇಂಗಿತಗಳೂ ಇವೆ. ಇದು ಚರಿ ತ್ರೆ ಯ ನ್ನು ತಿ ಳಿ ಯು ವಾ ಗ ಮೌಲಿಕವಾ ಗುವಷ್ಟು (ಅಂದರೆ ಉದಾಹರಣೆಗೆ–ಪಂಪನ ಮೂಲಕ ಅವನ ಕಾಲದ ಸಂಘರ್ಷಗಳನ್ನು ಕಲ್ಪಿಸಿ ಕೊಳ್ಳುವ ಹಾಗೆ) ವರ್ತಮಾನಕ್ಕೂ ಸರಿಯಾ ದೀತೋ ಇಲ್ಲವೊ ಅನುಮಾನ. ಇದರ ಜೊತೆಗೆ ಕೃತಿಯ ಕಲಾಮರ್ಯಾದೆಯ ಪ್ರಶ್ನೆಯೂ ಇದೆ. ಅಂತೂ ಈ ಗೋಜುಗಳನ್ನು ಬಿಡಿಸಿ ಒಂದು ನೆಲೆ ಗಟ್ಟು ಹಾಕುವ ಕೆಲಸ ಇನ್ನೂ ಅಪೂರ್ಣ ಇದೆ.

ಕ ವಿ ಗೋ ಷ್ಠಿ ನಿರಾಶಾದಾಯಕವಾಗಿತ್ತು. ಕಾವ್ಯಕ್ಕೆ ಬದುಕಿನ ರಕ್ತ ಮಾಂಸ ಹಂಚುವ ತೀವ್ರತೆ ಯಾಕೆ ಬರುತ್ತಿಲ್ಲ ? ಸುಕನ್ಯಾ ಮಾರುತಿ ಯವರು ಕವಿಗಳನ್ನು ತರಾಟೆಗೇ ತೆಗೆದುಕೊಂಡು ಬಿಟ್ಟರು. ಕಾವ್ಯಪ್ರಕಾರದ ಅನಿವಾರ್ಯತೆ ಮನ ದಟ್ಟಾಗದ ತೆಳುವಾದ ಸಂದರ್ಭ ನಮ್ಮದಾ ? ಗೋಷ್ಠಿ ಉದ್ಘಾಟಿಸಿದ ಸಿದ್ಧಲಿಂಗಯ್ಯ–"ವಿಶ್ವ ಮಟ್ಟದಲ್ಲಿ ನೋವನ್ನು ಹೇಳುವಂತಾದಾಗ ದಲಿತ ಕಾವ್ಯ ಸಾರ್ಥಕ" ಅಂದರು. ಡಾ॥ ಕೃಷ್ಣಮೂರ್ತಿ ಯವರೂ ಇದನ್ನೇ ಹೇಳಿದರು. ನೋವು ಸಾರ್ವ ತ್ರಿಕ. ಆದರೆ ನೋವಿನ ಪ್ರಜ್ಞೆ ಹಾಗಲ್ಲ. ಬರು ಬರುತ್ತಾ ಅಂಥ ಪ್ರಜ್ಞೆ ಟ್ರೈಬಲೈಸ್ ಆಗ್ತಿದೆ. ಆ ಪ್ರಜ್ಞೆಯ ಸಾರ್ವತ್ರೀಕರಣವಾದಾಗ ಹೋರಾಟಕ್ಕೆ ನಾಂದಿ ಎಂಬ ವಿವೇಚನೆ ಅವರದು.

(ಮುಂದಿನ ಪುಟಕ್ಕೆ)

ದಲಿತ ಲೇಖಕ ಕಲಾವಿದರ ಬಳಗ

ದಲಿತ ಸಾಹಿತ್ಯ–ಕಲೆಗಳ ಬೆಳವಣಿಗೆಗೆ ಪೂರಕ ವಾತಾ ವರಣವನ್ನು ಕಲ್ಪಿಸುವ ಸಲುವಾಗಿ ದಲಿತ ಸಾಹಿತಿ ಕಲಾ ವಿದರನ್ನೊಳಗೊಂಡ ವೇದಿಕೆಯೊಂದನ್ನು 1983ರಡಿಸೆಂಬರ್ ಹತ್ತು ಮತ್ತು ಹನ್ನೊಂದರಂದು ಖ್ಯಾತ ದಲಿತ ಸಾಹಿತಿ ಶ್ರೀ ದೇವನೂರ ಮಹಾದೇವ ಅವರ ಅಧ್ಯಕ್ಷತೆಯಲ್ಲಿ ಧಾರವಾಡದಲ್ಲಿ ಸೇರಿದ್ದ ರಾಜ್ಯಮಟ್ಟದ ದಲಿತ ಸಾಹಿತಿ ಕಲಾವಿದರ ಸಮ್ಮೇಳನದಲ್ಲಿ ರೂಪಿಸಲಾಯಿತು. ವೇದಿಕೆ ರೂಪಿತವಾದ ನಂತರ ಕೂಡ ಬಂಡಾಯ ಸಾಹಿತ್ಯ ಸಂಘಟನೆ ಯೊಂದಿಗೆ ಇದುವರೆಗಿನಂತೆ ಮುಂದೆ ಕೂಡ ಒಂದಾಗಿರಲು ತೀರ್ಮಾನಿಸಲಾಯಿತು.

ಹೊಸದಾಗಿ ರೂಪಿಸಲಾಗಿರುವ ವೇದಿಕೆ ಸಂಪೂರ್ಣ ಸ್ವಾತಂತ್ರವಾಗಿದ್ದು ಅದನ್ನು "ದಲಿತ ಲೇಖಕ ಕಲಾವಿದರ ಬಳಗ" ಎಂದು ಕರೆಯಲಾಗುತ್ತದೆ. 'ದಲೇಕಬ' ಕಾರ್ಯ ಕ್ರಮಗಳನ್ನು ಸಂಘಟಿಸಲು ಐದು ಜನರ ಸಮಿತಿಯೊಂದನ್ನು ರಚಿಸಲಾಯಿತು, ಈ ಸಮಿತಿ ಹಂಗಾಮಿ ಆಗಿದ್ದು ಮುಂದೆ ಒಂದು ವರ್ಷದ ಅವಧಿಯಲ್ಲಿ ಖಾಯಂ ಸಮಿತಿ ರೂಪಿ ಸಲು ನಿರ್ಧರಿಸಲಾಯಿತು.

'ದಲೇಕಬ' ಸದ್ಯದಲ್ಲಿ ಈ ಕೆಳಗಿನ ಕಾರ್ಯಕ್ರಮ ಗಳನ್ನು ಹಾಕಿಕೊಳ್ಳಲಿದೆ.

1). ಭಾರತೀಯ ದಲಿತ ಸಾಹಿತ್ಯ ಕುರಿತಂತೆ ವಿಚಾರ ಸಂಕಿರಣ ಏರ್ಪಡಿಸುವುದು.

2). ದಲಿತ ಲೇಖಕ ಕಲಾವಿದರ ರಾಜ್ಯಮಟ್ಟದ ಶಿಬಿರ ಗಳನ್ನು ನಡೆಸುವುದು.

3). ಕವಿಸಮ್ಮೇಳನಗಳನ್ನು ಸಂಘಟಿಸುವುದು.

4). ದಲಿತಲೇಖಕರ ಕೃತಿಗಳನ್ನು ಪ್ರಕಟಿಸುವುದು.

ಈ ಕಾರ್ಯಕ್ರಮಗಳನ್ನು ಸಂಘಟಿಸಲು ಐದುಜನ ಸಂಚಾಲಕರ ಹಂಗಾಮಿ ಸಮಿತಿ ರಚಿಸಲಾಗಿದ್ದು, ಅವರ ಹೆಸರುಗಳು ಇಂತಿವೆ : ಇಂದೂಧರ ಹೊನ್ನಾಪುರ, ವಿ. ಮುನಿವೆಂಕಟಪ್ಪ, ಸಿದ್ಧಲಿಂಗಯ್ಯ, ಬೋಳಬಂಡೆಪ್ಪ, ಡಾ. ಬಿ. ಕೃಷ್ಣಮೂರ್ತಿ.

ಅಸ್ಪೃಶ್ಯರ ಎದೆಯ ಮೇಲೆ ವಿಶ್ವಹಿಂದೂ ಸಮ್ಮೇಳನ

ಧರ್ಮಸ್ಥಳ–ಉಜಿರೆಯ ವಿಶ್ವಹಿಂದೂ ಸಮ್ಮೇಳನ ಮಠಮಾನ್ಯರೆಲ್ಲರನ್ನು ತುಂಬಿಕೊಂಡು ಅಸ್ಪೃಶ್ಯರ ಎದೆಯ ಮೇಲೆ ಮೂರು ದಿವಸಗಳ ಕಾಲ ಕುಣಿದು ಕುಪ್ಪಳಿಸಿ ರಂಜಿಸಿತು. ರಾಜ್ಯದ ಎಲ್ಲ ಜಗದ್‌ಗುರುಗಳು ರಾಷ್ಟ್ರೀಯ ಸ್ವಯಂಸೇವಕರು ಮತ್ತು ಶ್ರೀಮಂತರು ಸೇರಿಕೊಂಡು ದಿನೇ ದಿನೇ ತನ್ನ ಅಸ್ತಿತ್ವವನ್ನು ಕಳೆದುಕೋಡು ನಾಶವಾಗುತ್ತಿರುವ ಹಿಂದೂಧರ್ಮದ ಬಗ್ಗೆ ಕಳವಳಗೊಂಡು· ಹಣದ ಹೊಳೆಯನ್ನೇ ಹರಿಸಿ ನಡೆಸಿದ ಬೃಹತ್ ವಿಶ್ವಹಿಂದೂ ಸಮ್ಮೇಳನ ಮುಗ್ಧಜನರನ್ನು ಆಕರ್ಷಿಸಿಸಿ ಬಡಮುಸ್ಲಿಂರು, ಕ್ರೈಸ್ತರುಗಳ ಮೇಲೆ ದ್ವೇಷಕಾರುವಂತೆ ಅವರನ್ನು ಎತ್ತಿಕಟ್ಟಿ ಅಸ್ಪೃಶ್ಯರ ಮೇಲೆ ತನಗೆ ಅನುಕಂಪವಿರುವಂತೆ ನಟಿಸುತ್ತಾ, ತನ್ನ ಕರ್ಮದ ಹಿಂದೂ (ಬೇರನ್ನು) ಬೊಡ್ಡೆಯನ್ನು ಭದ್ರಮಾಡಿಕೊಳ್ಳುತ್ತಿತ್ತು.

ಉಜಿರೆಯ ಮಂಜುನಾಥಸ್ವಾಮಿ ಕಾಲೇಜಿನ ಎದುರಿಗೆ ಹಾಕಿದ 3ಲಕ್ಷ ರೂಪಾಯಿ ವೆಚ್ಚದ ಒಂದು ಸಾವಿರ ಕಂಬಗಳ ವಿಶಾಲವಾದ ಚಪ್ಪರ ಜಿಲ್ಲಾವಾರು ನಿರ್ಮಿಸಿದ ವಸತಿಗಳು, ವಸ್ತುಪ್ರದರ್ಶನ, ಬಣ್ಣಬಣ್ಣದ ತಳಿರುತೋರಣ, ವಿದ್ಯುತ್ ಲೈಟ್‌ಗಳು ಜನರ ಕಣ್‌ಕೊರೆದು ಶೋಭಿಸುತ್ತಿದ್ದವು. ಸಮ್ಮೇಳನದ ಎಲ್ಲಾ ಉಸ್ತುವಾರಿಯನ್ನು ಮೂರುತಿಂಗಳಿನಿಂದಲೇ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವಿರೇಂದ್ರಹೆಗ್ಗಡೆ ಮತ್ತು ಪೇಜಾವರ ಮಠಾದೀಶರು ಬಹಳ ವ್ಯವಸ್ಥಿತವಾಗಿ ಕೈಗೊಂಡಿದ್ದರು. ಮಂಗಳೂರಿನ ಜಿಲ್ಲಾಧಿಕಾರಿ ಸೇರಿದಂತೆ ಲೋಕೋಪಯೋಗಿ, ವಿದ್ಯುತ್‌ಚ್ಛಕ್ತಿ. ದೂರವಾಣಿ ಆರೋಗ್ಯ, ಪೋಲೀಸ್ ಎಲ್ಲಾ ಇಲಾಖೆಯವರು ವಿಶ್ವಹಿಂದೂ ಸಮ್ಮೇಳನಕ್ಕೆ ಹಗಲುರಾತ್ರಿ ಎನ್ನದೆ ಅವಿಶ್ರಾಂತವಾಗಿ ದುಡಿದಿದ್ದರು. ಕೇವಲ ಮೂರು ದಿನಗಳ ಸಮ್ಮೇಳನಕ್ಕಾಗಿ ಲಕ್ಷಾಂತರ ರೂಪಾಯಿಗಳ ಅದೆಷ್ಟು ಬೋರ್‌ವೆಲ್ ಬಾವಿಗಳು ತಾತ್ಕಾಲಿಕ ದೂರವಾಣಿಕೇಂದ್ರ ಮುಂತಾದವು ಸರ್ಕಾರದ ದುಂದುವೆಚ್ಚದ ಪರಮಾವಧಿ ಎಂಬುದನ್ನು ಜನರಿಗೆ ವಿಶ್ವಹಿಂದೂ ಸಮ್ಮೇಳನ ಮನದಟ್ಟು ಮಾಡುತ್ತಿತ್ತು.

ಆದ್ದರಿಯ ವಿಶ್ವಹಿಂದೂ ಸಮ್ಮೇಳನದಲ್ಲಿ ಮಾತನಾಡಿದ ಪ್ರತಿಯೊಬ್ಬ ಮಠಾಧೀಶನು, ಜಾತಿಯತೆ ನಾಶವಾಗಬೇಕು, ಹಿಂದೂಧರ್ಮವನ್ನು ಉಳಿಸಿಕೊಳ್ಳಲು ಸೊಂಟಕಟ್ಟಿ ಹೋರಾಡಬೇಕೆಂದು ಜನತೆಗೆ ಕರೆಕೊಟ್ಟು ಕೆಲವು ಅದ್ಭುತವಾದ ನಿರ್ಣಯಗಳನ್ನು ಮಾಡಿದರು.

1. ಎಲ್ಲಾ ಶಾಲಾಕಾಲೇಜುಗಳಲ್ಲಿ ಮಕ್ಕಳಿಗೆ ಹಿಂದೂಧರ್ಮವನ್ನು ಬೇ ಧಿ ಸ ಲು ಶಾಸನದ ಮೂಲಕ ಅವಕಾಶ ಕಲ್ಪಿಸಬೇಕು.

2. ಹರಿಜನರು ಮತಾಂತರವಾಗದಂತೆ ಸರ್ಕಾರ ಕಾನೂನನ್ನು ಜಾರಿಗೊಳಿಸಬೇಕು.

3, ಅಸ್ಪೃಶ್ಯರನ್ನು ನನ್ನ ಸಹೋದರರಂತೆ ಕಾಣಬೇಕು.

–ಡೀಕಯ್ಯ, ದೊಡ್ಡಣ್ಣ

ಕಪ್ಪು ಸಾಹಿತ್ಯದ ಬಗ್ಗೆ, ಮರಾಠಿ ದಲಿತ ಸಾಹಿತ್ಯದ ಬಗ್ಗೆ ತೇಜಸ್ವಿ ಕಟ್ಟೀಮನಿ ಮತ್ತು ಬಾಬೂರಾವ್ ಗಾಯಕವಾಡ್ ಪರಿಚಯ ನೀಡಿದರು. ಮುನಿವೆಂಕಟಪ್ಪನವರ ಆಶಯ ಭಾಷಣ, ಬಂಡಾಯದೊಡನೆ ತಿಕ್ಕಾಟಕ್ಕಿಳಿಯುವ ಸೂಕ್ಷ್ಮ ಜುಗುಪ್ಸೆಗೆ ಕೈಗನ್ನಡಿಯಾದಂತಿತ್ತು.

ರಾಮದೇವ ರಾಕೆ ''ಸಂಕಟವನ್ನು ಮತ್ತೆ ಅನುಭವಿಸಿ, ಸಾವನ್ನು ಮತ್ತೆ ಸತ್ತು'' ಬರೆಯಬೇಕಾದ ಸ್ಥಿತಿಯಲ್ಲೇ ಇದ್ದರು.

ಬಾಲಂಗೋಚಿ : ಗೋಡೆ ಬರಹಗಳಿಂದಲೂ ಏನಾದರೂ ಸಾಧ್ಯ ಅನ್ನುವುದು ಗೊತ್ತಾಗಬೇಕಿದ್ದರೆ, ಧಾರವಾಡಕ್ಕೆ ಬಂದು ನೋಡಬೇಕಿತ್ತು. 'ಕಪ್ಪು ಹುಡುಗರ ಕೆಂಪು ಅಕ್ಷರಗಳು' ಧಾರವಾಡದ ಹಸಿರಿನ ನಡುವಣ ಮಡಿವಂತ, ಸೌಮ್ಯ ಮೂಡ್ ಅನ್ನು ಕಲಕಿಬಿಟ್ಟಿದೆ. ಹುಬ್ಬಳ್ಳಿ, ಧಾರವಾಡದ ನಿಜಪ್ರತಿಧಿಗಳಾದ ಮೇಲುಜಾತಿ–ವರ್ಗದ ಪತ್ರಕರ್ತರಿಗೆಲ್ಲ ಎರಡು ವಾರದ ಚರ್ಚೆಗೆ ಗ್ರಾಸ. ●

ಸಮ್ಮೇಳದ ನಿರ್ಣಯಗಳು

1. ಹಿಂದೂ ಪುನರಾದ್ಧಾರದ ಹೆಸರಿನಲ್ಲಿ ಜಾತಿ ಮತ್ತು ಕೋಮುವಾದಿ ಶಕ್ತಿಗಳನ್ನು ಸಂಘಟಿಸಿ ಬೆಳೆಸಲು ಮತ್ತು ಜನಾಂಗಗಳ ನಡುವೆ ದ್ವೇಶವನ್ನು ಹುಟ್ಟಿಕಲು ವಿಶ್ವಹಿಂದೂ ಪರಿಷತ್ ಉಜಿರೆಯಲ್ಲಿ ನಡೆಸುತ್ತಿರುವ ಹಿಂದೂ ಪ್ರಾಂತೀಯ ಸಮ್ಮೇಳನ ಮತ್ತು 'ಏಕಾತ್ಮತಾ ಯಜ್ಞ'ವು ರಾಷ್ಟ್ರದ ಐಕ್ಯ ಮತ್ತು ಸೌಹಾರ್ದದ ವಿರುದ್ಧ ನಡೆಸಿರುವ ಬಹಿರಂಗ ಪಿತೂರಿ ಎಂದು ಈ ಸಮ್ಮೇಳನವು ತಿಳಿಯುತ್ತದೆ· ಜನ ಸಮುದಾಯದ ಮನಸಿನಲ್ಲಿ ಮತೀಯ ಮತ್ತು ಜಾತಿಯ ವಿಷಬೀಜಗಳನ್ನು ಬಿತ್ತುವ ಪ್ರತಿ ಗ್ರಾಮಗಳ ಇಂಥ ಪ್ರಯತ್ನವನ್ನು ಈ ಸಮ್ಮೇಳನ ಉಗ್ರವಾಗಿ ಖಂಡಿಸುತ್ತದೆ.

2. ಇತ್ತೀಚೆಗೆ ಶಿವಮೊಗ್ಗೆಯಲ್ಲಿ ವಿಚಾರವಾದಿಗಳ ಮೇಲೆ ಅಲ್ಲಿನ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಹೆಸರಿನಲ್ಲಿ ಆರ್. ಎಸ್. ಎಸ್. ದುಷ್ಟ ಶಕ್ತಿಗಳು ನಡೆಸಿದ ಗುಂಡಾಗಿರಿಯನ್ನು ಈ ಸಮ್ಮೇಳನ ಖಂಡಿಸುತ್ತದೆ. ಇದನ್ನು ಗಂಭೀರವಾಗಿ ಪರಿಗಣಿಸುತ್ತಾ ಈ ದುಷ್ಟ ಪ್ರವೃತ್ತಿ ಕೈ ಬಿಡದಿದ್ದರೆ ಪ್ರತಿಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಈ ಮೂಲಕ ಎಚ್ಚರಿಕೆ ನೀಡುತ್ತದೆ.

3. ದಕ್ಷಿಣ ಆಫ್ರೀಕಾದ ಕಪ್ಪು ಜನರ ವಿಮೋಚನೆಗಾಗಿ ಹೋರಾಡುತ್ತಿರುವ ಕಪ್ಪು ಜನಾಂಗದ ಮಹಾ ನಾಯಕ ನೆಲ್‌ಸನ್‌ಮಾಂಡೆಲಾ ವಿರುದ್ಧ ಅಲ್ಲಿನ ಅಲ್ಪ ಸಂಖ್ಯಾತ ಬಿಳಿಯರ ಪ್ರಭುತ್ವವು ಸುಳ್ಳು ಮೊಕದ್ದಮೆಯ ಹೆಸರಲ್ಲಿ ಕಳೆದ 22 ವರ್ಷ ಸೆರೆಯಲ್ಲಿ ಇಟ್ಟಿದೆ. ಕಪ್ಪುಜನರ ವಿಮೋಚನಾ ಹೋರಾಟವನ್ನು ಬೆಂಬಲಿಸುವ ಈ ಸಮ್ಮೇಳನ ನೆಲಸನ್‌ಮಾಂಡೆಲಾ ಅವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂದು ಒತ್ತಾಯಿಸುತ್ತದೆ. ಪಂಜಾಬಿನ ದಿಟ್ಟ ಕವಿಯತ್ರಿ ಅಮೃತಾ ಪ್ರೀತಮ್‌ರ ಮೇಲೆ ಅಲ್ಲಿನ ಮತೀಯ ಶಕ್ತಿಗಳು ಹೇರಿರುವ ನಿರ್ಬಂಧನ ಮತ್ತು ಕಿರುಕುಳವನ್ನು ಈ ಸಮ್ಮೇಳನ ಖಂಡಿಸುತ್ತದೆ. ಅಮೃತಾಪ್ರೀತಮಗೆ ನೀಡಲಾಗಿರುವ ಎಚ್ಚರಿಕೆಯ ನೋಟಿಸನ್ನು ವಾಪಸ್ ಪಡೆದು ಕಿರುಕುಳ ನಿಲ್ಲಿಸಿ ಅಭಿವ್ಯಕ್ತಿ ಸ್ವಾತಂತ್ರವನ್ನು ಗೌರವವಿಸಬೇಕೆಂದು ಈ ಸಮ್ಮೇಳನ ಒತ್ತಾಯಿಸುತ್ತದೆ.

5. ದೇಶಾದಾದ್ಯಂತ ಜಾತಿ, ಧರ್ಮ, ಬಡತನದ ಕಾರಣಗಳಿಗಾಗಿ ನಿರಂತರವಾಗಿ ದಲಿತರ ಮೇಲೆ ನಡೆಯುತ್ತಿರುವ ಹಲ್ಲೆ, ದೌರ್ಜನ್ಯ, ಮಹಿಳೆಯರ ಮೇಲಿನ ಮಾನಭಂಗಗಳನ್ನು ಈ ಸಮ್ಮೇಳನ ಖಂಡಿಸುತ್ತದೆ.

• •

ಕವಿಗೋಷ್ಠಿಯಲ್ಲಿ ಬಾನಂದೂರು ಕೆಂಪಯ ಎರಡು ಹಾಡು ಹಾಡಿದರು. ಅವರ ಮಜಬೂತಾದ್ದ ಕಂಠ ಇಡೀ 'ಕಲಾಭವನ' ವನ್ನೇ ತುಂಬಿ 'ಒನ್ಸ್ ಮೋರ್' ಅನ್ನಿಸಿಕೊಂಡಿತು,

• •

ನಾಲ್ಕು ಪುಸ್ತಕಗಳ ಬಿಡುಗಡೆಯನ್ನು ಇಂದೂಧರ ಹೊನ್ನಾಪುರ ಮತ್ತು ಡಿ. ಎಸ್. ನಾಗಭೂಷಣ್ ಮಾಡಿದರು. ಕೃತಿಗಳು – ಸುಕನ್ಯಾಮಾರುತಿಯವರ ''ಪಂಚಾಗ್ನಿ ಮಧ್ಯೆ'' ಗಂಗಾರಾಂ ಚಂಡಾಳರ ''ಚಂಡಾಳರ ಕೂಗು'', ತೇಜಸ್ವಿಕಟ್ಟೀಮನಿಯವರ ''ಜ್ಯೋತಿಬಾ ಫುಲೆ'' ಮತ್ತು ಬಾನಂದೂರು ಕೆಂಪಯ್ಯನವರ 'ಬಯಲುಸೀಮೆಯ ಜಾನಪದ ಕತೆಗಳು''

ಮದ್ದೂರಿನಲ್ಲಿ ಆತ್ಮಹತ್ಯೆ ಎಂಬ ಹೆಸರಿನ ಭೀಕರ ಕೊಲೆ

ಮದ್ದೂರೊಡೆಗೂ ಮನುಷ್ಯನ ಕೊಲೆಗೂ ಹೆಸರಾದ ಮದ್ದೂರಿನಲ್ಲಿ ಮೂರು ದಿನವಿದ್ದೆ. ಕಳೆದ ಡಿಸೆಂಬರ್ ಹದಿನೇಳರಂದು ಇಲ್ಲಿ ದಲಿತ ಅಬಕಾರಿ ಅಧಿಕಾರಿ ವೆಂಕಟನಾರಾಯಣರ ಕೊಲೆಯಾಯಿತು. ಮದ್ದೂರಿನ ಪ್ರತಿಯೊಬ್ಬರ ನಾಲಿಗೆಯಲ್ಲಿ ಈ ಕೊಲೆಯ ಸುದ್ದಿ ಕುಣಿಯುತ್ತಿದೆ. ಆದರೆ ಕೊಲೆಗಾರರು ಧಾರಾಳವಾಗಿ ಹಣ ಸುರಿದು ಕೊಲೆಯನ್ನು 'ಆತ್ಮಹತ್ಯೆ' ಯೆಂದು ಡಾಕ್ಟರ್ ಸರ್ಟಿಫಿಕೇಟ್ ಮಾಡಿಸಿದ್ದಾರೆ.

ನಾಕು ತಿಂಗಳ ಹಿಂದೆ ಇಲ್ಲಿಗೆ ಬಂದ ವೆಂಕಟನಾರಾಯಣರ ಕೊಲೆಯ ಹಿಂದೆ ಸ್ಥಳೀಯ ರಾಜಕೀಯಸ್ತರಕ್ಕೈವಾಡವಿದೆಯೆನ್ನಲಾಗಿದೆ. ಇದೊಂದು ಪೂರ್ವ ನಿಯೋಜಿತ ಕೊಲೆಯಾಗಿದ್ದು, ಅತ್ಯಂತ ಅಮಾನುಷ ರೀತಿಯಲ್ಲಿ ನಡೆದಿದೆ. ಕೊಲೆಯ ನಂತರ ಹೆಣದ ಪೋಸ್ಟ್‌ಮಾರ್ಟಂ ಸಂದರ್ಭದಲ್ಲಿ ಮದ್ದೂರಿನಲ್ಲಿ ಪೋಲೀಸ್ ಸಬ್ ಇನ್‌ಸ್ಪೆಕ್ಟರ್ ಎಂ. ಡಿ. ದಿವಾಕರ್ ಮತ್ತು ಸರಕಾರಿ ಡಾಕ್ಟರ್ ಶಂಕರ್ ರಜದ ಮೇಲಿದ್ದರು.

ಚನ್ನೇಗೌಡನ ದೊಡ್ಡಿಯ ಮಾಲಿಂಗಯ್ಯನ ಬಾವಿಯಲ್ಲಿ ಕೊಲೆಯ ನಂತರ ವೆಂಕಟನಾರಾಯಣರ ದೇಹವನ್ನು ಎಸೆಯಲಾಗಿತ್ತು. ಡಿಸೆಂಬರ್ ಹದಿನೆಂಟರ ಸಂಜೆ ನಾಕು ಗಂಟೆಗೆ ಹೆಣವನ್ನು ಬಾವಿಯಿಂದ ಹೊರತೆಗೆಯಲಾಯಿತು. ಆಗ ಹೆಣ ನೋಡಿ ಬಂದ ಅನೇಕರ ಪ್ರಕಾರ ಹೆಣದ ತಲೆಯ ಎಡಭಾಗ ಪೂರ್ತಿ ಜಜ್ಜಿಹೋಗಿತ್ತು. ಎಡಗಡೆ ಕಣ್ಣುಗುಡ್ಡೆ ಪೂರ್ತಿ ಹೊರಕ್ಕೆ ಬಂದಿತ್ತು. ಪ್ಯಾಂಟು ರಕ್ತಮಯವಾಗಿತ್ತು.

ಬಲ್ಲ ಮೂಲಗಳ ಪ್ರಕಾರ ಹೆಣ ಹೊರತೆಗೆದ ತಕ್ಷಣ ಮದ್ದೂರಿನ ಟಿ. ಎ. ಪಿ. ಸಿ. ಎಂ. ಎಸ್. ಪ್ರೆಸಿಡೆಂಡ್ ಎಂ. ಸಿ. ನಾಗೇಶ್ ಸ್ಥಳಕ್ಕೆ ಧಾವಿಸಿದರು. ಮತ್ತು ಹೆಣದ ಜತೇಲಿದ್ದ ಪೋಲೀಸ್ ದಫೇದಾರನನ್ನು ಕುರಿತು ಹೀಗೆ ಹೇಳಿದರು: "ನೋಡಪ್ಪ ನಾನಿವತ್ತು ಊರಲ್ಲಿ ಇರುಲ್ಲ. ಏನೇನು ಮಾಡಬೇಕೋ ಅದನ್ನ ನೀವೇ ಮಾಡಿ" ಆ ಕೂಡಲೇ ಅವರು ಜಾಗ ಖಾಲಿ ಮಾಡಿದರು.

ಈತ ಮಾಜಿ ವಿದ್ಯಾಮಂತ್ರಿ ವೀರಣ್ಣಗೌಡರ ಮಗ, ಮಂಡ್ಯದ ರಾಜಕೀಯದ ಜೀವನಾಡಿ. ಈ ಕೊಲೆಗೂ ಇವರಿಗೂ ನೇರ ಸಂಬಂಧವಿದೆಯೆಂಬ ಸುದ್ದಿ ಜನಜನಿತವಾಗಿದೆ.

ವೆಂಕಟನಾರಾಯಣರ ಕೊಲೆಗೆ ಮುಖ್ಯಕಾರಣರೆಂದು ಸ್ಪಷ್ಟವಾಗಿ ಕೇಳಿಬರುತ್ತಿರುವ ಹೆಸರುಗಳು ರಾಜೇಗೌಡ ಅಬಕಾರಿ ಅಧಿಕಾರಿ ಹುಣಸೂರು ಮತ್ತು ಪುಟ್ಟಲಿಂಗೇಗೌಡ.



ಕೊಲೆಯಾದ ಪ್ರಮಾಣಿಕ ಅಧಿಕಾರಿ : ವೆಂಕಟನಾರಾಯಣ

ರಾಜೇಗೌಡರು ಮದ್ದೂರಿನವರೇ ಆಗಿದ್ದು ವೆಂಕಟನಾರಾಯಣರಿಗೆ ತಮ್ಮ ಮನೆಯನ್ನು ಬಾಡಿಗೆಗೆ ಕೊಟ್ಟಿದ್ದರು. ಲೀಲಾವತಿ ಬಡಾವಣೆಯಲ್ಲಿರುವ ಈ ಮನೆಯ ಪಕ್ಕದಲ್ಲಿ ಗೌರಮ್ಮ ಪುಟ್ಟಲಿಂಗೇಗೌಡರೆಂಬ ಒಕ್ಕಲಿಗರು ವಾಸಿಸುತ್ತಿದ್ದರು. ಮೇಲ್ಜಾತಿಯ ಗೌರಮ್ಮನ ಜತೆ ಕೆಳಜಾತಿಯ ವೆಂಕಟನಾರಾಯಣರಿಗೆ ಲೈಂಗಿಕ ಸಂಬಂಧವಿತ್ತು ಎನ್ನಲಾಗಿದೆ. ಊರಿಗೆ ಬಂದ ಹೊಸದರಲ್ಲಿ ವೆಂಕಟನಾರಾಯಣ ರಾಜೇಗೌಡರ ಬಿಲ್ಡಿಂಗಿನ ಔಟ್ ಹೌಸಿನಲ್ಲಿ ಒಂಟಿಯಾಗಿದ್ದರು. ಗೌರಮ್ಮನ ಮನೆಯಲ್ಲೇ ಊಟ ತಿಂಡಿ ಮಾಡುತ್ತಿದ್ದ ವೆಂಕಟನಾರಾಯಣ ಆಕೆಯ ಸ್ನೇಹವನ್ನೂ ಬೆಳೆಸಿದರು.

ವೆಂಕಟನಾರಾಯಣರ ಹೆಂಡತಿ ಊರಿನಿಂದ ಬಂದ ನಂತರ ಗೌರಮ್ಮನ ಜತೆಗಿನ ಸಂಬಂಧ ಮುರಿದು ಬಿತ್ತು. ಗೌರಮ್ಮ ವಿನಾಕಾರಣ ಅಕ್ಕಪಕ್ಕದ ಮನೆಯವರ ಜತೆ ಜಗಳಾಡುತ್ತಿದ್ದಳು.

ಗೌರಮ್ಮ–ವೆಂಕಟನಾರಾಯಣರ ನಡುವಣ ಪ್ರೇಮದ ಸುದ್ದಿ ಲೋಕಲ್ ರೈತಸಂಘದ ಕೆಲ ಉಂಡಾಡಿಗಳಿಗೆ ಶಾಕ್ ಕೊಟ್ಟಿತ್ತು. ಅವರಲ್ಲಿ ಕೆಲವರು ವೆಂಕಟನಾರಾಯಣರ ಮನೆಗೂ-ಆಫೀಸಿಗೂ ಹೋಗಿ ಗಲಾಟೆ ಮಾಡಿದ್ದರು.

ಕೊಲೆಯಾಗುವುದಕ್ಕೆ ಮುಂಚೆ ತಾನು ಕೊಲೆಯಾಗುವ ಭಯವಿತ್ತು ವೆಂಕಟನಾರಾಯಣರಿಗೆ. ಅವರು ತನ್ನ ಹತ್ತಿರದ ಸಂಬಂಧಿಕರಾದ ಡಾ॥ ಎನ್. ಸಿ. ಬಿಳಿಗಿರಿ ರಂಗಯ್ಯನವರನ್ನು ಕಂಡು ತಮ್ಮ ಸಮಸ್ಯೆಯನ್ನು ಹೇಳಿಕೊಂಡಿದ್ದರೆನ್ನಲಾಗಿದೆ. ಆದರೂ ಅವರಿಂದಲೂ ಸೂಕ್ತವೂ ಸಕಾಲಿಕವೂ ಆದ ಸಹಾಯ ದೊರೆಯಲಿಲ್ಲ.

ಇಡೀ ಪರಿಸರ ಭಯಗ್ರಸ್ತವಾಗಿದ್ದು ತನ್ನ ಸಾವಿನ ನೆರಳನ್ನು ಕಂಡಿದ್ದ ವೆಂಕಟನಾರಾಯಣ ತಾವು ಕೊಲೆಯಾಗುವ ಒಂದು ವಾರದ ಮುಂಚೆ ತಮ್ಮ ಹೆಂಡತಿಯನ್ನು ಊರಿಗೆ ಕಳಿಸಿದ್ದರು.

17, ಡಿಸೆಂಬರ್ 83 ರಂದು ಬೆಳಗಿನ ಜಾವ ನಾಲ್ಕು ಗಂಟೆಯಲ್ಲಿ ವೆಂಕಟನಾರಾಯಣರನ್ನು ಕರೆಯಲು ಬಂದರೆಂದು ಅಕ್ಕಪಕ್ಕದವರು ಮಾತಾಡಿಕೊಳ್ಳುತ್ತಿದ್ದಾರೆ. ಅವರೊಡನೆ ಹೋದ ವೆಂಕಟನಾರಾಯಣರು ಮತ್ತೆ ಮನೆಗೆ ಬರಲಿಲ್ಲ.

ವೆಂಕಟನಾರಾಯಣ ಕೊಲೆಯಾಗಲು ಗೌರಮ್ಮನ ಜತೆಗಿನ ಸೆಕ್ಸ್ ಸಂಬಂಧ ಕೇವಲ ಒಂದು ನೆಪ ಅಷ್ಟೆ. ಮದ್ದೂರಿನ ವೈನ್ ಕಂಟ್ರಾಕ್ಟರ, ಸೇಂದಿ ಸಾರಾಯಿ ಕಳ್ಳಭಟ್ಟಿ ಖದೀಮರ ಜತೆ ವೆಂಕಟನಾರಾಯಣರ ಸಂಬಂಧ ಆರೋಗ್ಯಕರವಾಗಿರಲಿಲ್ಲ.

ವೆಂಕಟನಾರಾಯಣ ತಿಂಗಳಲ್ಲಿ ನಾಕಾರು ಸಲ ಕೋರ್ಟು ಕೇಸುಗಳನ್ನು ಅಟೆಂಡ್ ಮಾಡುತ್ತಿದ್ದರೆನ್ನಲಾಗಿದೆ. ಕಳ್ಳಭಟ್ಟಿ ಮೂಲಗಳ ಜತೆ ಯಾವ ಸ್ನೇಹ ಸೌಹಾರ್ದಗಳನ್ನು ಇರಿಸಿಕೊಳ್ಳದೆ ಅವರನ್ನು ನಿರ್ದಾಕ್ಷಿಣ್ಯವಾಗಿ ಕೋರ್ಟಿನ ಕಟ್ಟಕಟೆ ಹತ್ತಿಸುತ್ತಿದ್ದರೆಂದು ಅವರ ಸ್ನೇಹಿತರು ಮತ್ತು ಶತ್ರುಗಳು ಹೇಳುತ್ತಾರೆ.

ವೆಂಕಟನಾರಾಯಣರ ಜತೆಯ ಅಬಕಾರಿ ಅಧಿಕಾರಿಗಳು ತಮ್ಮೆಲ್ಲ ಭ್ರಷ್ಟತೆಗೆ ಈತನ ಸಹಕಾರವನ್ನು ಬಯಸುತ್ತಿದ್ದು ಅದು ದೊರಕದೆ ಈತನ ಮೇಲೆ ಹಗೆತನ ಸಾಧಿಸುತ್ತಿದ್ದರು.

ಈ ಕೊಲೆಗೆ ಇಲಾಖೆಯವರ ಪರೋಕ್ಷ ಸಹಕಾರವಿದೆಯೆಂಬ ಗುಲ್ಲು ಕೂಡಾ ಇದೆ.

ಕೊಲೆಯ ನಂತರ ಸುದ್ದಿ ತಿಳಿದ ಡಾ॥ ಬಿಳಿಗಿರಿ ರಂಗಯ್ಯನವರು ಸ್ಥಳಕ್ಕೆ ಬಂದು ಹೆಣವನ್ನು ತಮ್ಮ ಕಾರಿನಲ್ಲಿ ನೇರಳೆಗೆ ತೆಗೆದುಕೊಂಡು ಹೋದರೆಂದು ಹೇಳಲಾಗುತ್ತಿದೆ. ಊರಿಗೆ ತಲುಪಿದ ಕೂಡಲೇ ಹೆಣವನ್ನು ಒಂದು ಗಂಟೆ ಕೂಡಾ ಇಟ್ಟುಕೊಳ್ಳದೆ ಹೆಣದ ಮುಖವನ್ನು ಯಾರಿಗೂ ತೋರಿಸದೆ ತಕ್ಷಣ ಸುಡಲಾಯಿತೆಂದು ತಿಳಿದು ಬಂದಿದೆ!

ಹೆಣವನ್ನು ಪೋಸ್ಟ್‌ಮಾರ್ಟಂ ಮಾಡಿ "ಆತ್ಮಹತ್ಯೆ" ಎಂದು ಸರ್ಟಿಫಿಕೇಟ್ ನೀಡಿದ ಡಾ॥ ಸರೋಜರವರು ಹತ್ತು ಸಾವಿರ. ರೂ. ಲಂಚ ತಿಂದಿದ್ದಾರೆಂದು ಇಡೀ ಮದ್ದೂರೇ ಮಾತಾಡಿಕೊಳ್ಳುತ್ತಿದೆ.

—ಮುಳ್ಳೂರು ನಾಗರಾಜ್

ಪ್ರತಿಕ್ರಿಯೆ

ಸೃಷ್ಟಿಯಲ್ಲಿ ಔದಾರ್ಯ ಎಂಬ ಡಾ|| ಪೋಲಂಕಿ ಸನಾತನವಾದ

ಡಾ|| ಪೋಲಂಕಿ ರಾಮಮೂರ್ತಿಯವರ
"ಸೃಷ್ಟಿಯಲ್ಲಿ ಸಮತೆ, ಔದಾರ್ಯ" (ಪಂಚಮ
ಡಿಸೆಂಬರ್ 83–ನನ್ನ ಪ್ರತಿಕ್ರಿಯೆಗೆ ಉತ್ತರ)
ಓದುತ್ತಿದ್ದಂತೆ ನನಗೆ ನಾನು ಈಚೆಗೆ ಓದಿದ
ಬೊಳವಾರು ಮಹಮದ್ ಕುಂಞಿಯವರ "ದೇವ
ರುಗಳ ರಾಜ್ಯದಲ್ಲಿ" ಎಂಬ ಕತೆ ನೆನಪಾಗುತ್ತದೆ.
ಅದರ ಒಂದೆರಡು ಪ್ಯಾರಾಗಳನ್ನು ಇಲ್ಲಿ ಕೊಡು
ತ್ತಿದ್ದೇನೆ:

ಎಷ್ಟೋ ಮಿಲಿಯ ವರ್ಷಗಳ ಬಳಿಕ ಈ ದೇವರ
ನಾಡಿನಲ್ಲಿಒಂದು ಮರದ ಕಾರ್ಖಾನೆಯು ಆರಂಭವಾಯಿತು.
ಕಾರ್ಖಾನೆಯ ಮಾಲೀಕನು ಬಹಳ ಪುಣ್ಯವಂತನಾಗಿದ್ದನು
ಅವನ ಕಾರ್ಖಾನೆಯಲ್ಲಿ ಸುಮಾರು ಇನ್ನೂರು ಜನರು
ಕೆಲಸ ಮಾಡುತ್ತಿದ್ದರು. ಮಾಲೀಕನು ಆಗಾಗ ಅನ್ನ
ಸಂತರ್ಪಣೆಗಳನ್ನು ದೇವರ ಉತ್ಸವಗಳನ್ನು ಸಂಭ್ರಮದಿಂದ
ಏರ್ಪಡಿಸುತ್ತಿದ್ದನು. ಈ ಪುಣ್ಯವಂತ ಮಾಲೀಕನ
ಮರದ ಕಾರ್ಖಾನೆಯಲ್ಲಿ ಜೋಸೆಪ್ ಡಿ' ಕಾಸ್ಟ ಎಂಬ
ಯುವಕನು ದಿನವೊಂದಕ್ಕೆ ನಾಲ್ಕು ರೂಪಾಯಿ ಕೂಲಿ
ಸಂಪಾದಿಸುತ್ತಿದ್ದನು. ದೇವರ ಇಚ್ಛೆಯಂತೆ ಅವನು
ಬಡವನೂ, ಆರೋಗ್ಯವಂತನೂ ಆಗಿದ್ದನು. ಅವನ
ತಂದೆತಾಯಿಗಳು ಸ್ವರ್ಗದಲ್ಲಿದ್ದರು.

ದೇವರು ಹೇಳಿದನು: "ಅದು ಬೀಳಲಿ" ಎಂದು.
ಮರದ ದೊಡ್ಡ ದಿಮ್ಮಿಯೊಂದು ಉರುಳಿ ಬಿತ್ತು.
ಜೋಸೆಫ್ ಡಿ' ಕಾಸ್ಟನನ್ನು ಸರಕಾರಿ ಆಸ್ಪತ್ರೆಗೆ ಹೊತ್ತು
ಕೊಂಡು ಹೋದರು. ಅವನು ಪ್ರಜ್ಞೆ ಕಳೆದುಕೊಂಡಿದ್ದನು.
ದೇವರು ದಯಾಮಯನು, ಅವನಿಗೆ ಪ್ರಜ್ಞೆ ಮರಳಿತು.
ತನ್ನ ಬಲಕಾಲನ್ನು ಮೊಣಕಾಲ ಬಳಿ ಕತ್ತರಿಸಿದ್ದಾರೆ
ಎಂದು ಅರಿತುಕೊಂಡನು........ದೇವಗ ಮಹಿಮೆ ಅಪಾರ;
ಜೋಸೆಫ್ ಕುಂಟನಾಗಿದ್ದರೂ ಅವನಿಗೆ ಹಿಂದಿನಂತೆಯೇ
ಹಸಿವೆಯಾಗುತ್ತಿತ್ತು. ಕೆಲಸ ಮಾಡಲು ಸಾಧ್ಯವಿಲ್ಲವಾದರೂ
ಅವನು ಸಂಪಾದಿಸುವುದು ಅಗತ್ಯವಾಗಿತ್ತು. ಲೋಕದಲ್ಲಿ
ಇಂಥವರಿಗಾಗಿಯೇ ಕೆಲವು ಅನುಕೂಲತೆಗಳನ್ನು ಉಂಟು
ಮಾಡಲಾಗಿತ್ತು. ಭಿಕ್ಷೆ ಬೇಡಿಕೊಂಡು ಅವರು ಬದುಕು
ವಂತೆ ನೋಡಿಕೊಳ್ಳಲಾಗುತ್ತಿತ್ತು. ಅದಕ್ಕಾಗಿಯೇ ಸಹ
ಸ್ರಾರು ಸಿರಿವಂತರನ್ನು, ಅವರ ಹೃದಯದಲ್ಲಿ ಕರುಣೆಯ
ನ್ನೂ ದೇವರು ಉಂಟುಮಾಡಿದ್ದನು. ಸಾವಿರಾರು ಸಂಘ
ಸಂಸ್ಥೆಗಳೂ, ಅನಾಥಾಲಯಗಳೂ ಭಿಕ್ಷುಕರನ್ನು ಸ್ವಾಗತಿ
ಸುತ್ತಿದ್ದುವು.

ಬೋಳುವಾರರ ಈ ಕತೆ ಅನೇಕ ದೃಷ್ಟಿಗಳಿಂದ
ಸ್ವಾರಸ್ಯಕರವಾಗಿದೆ. ಬೋಳುವಾರರು ಇಲ್ಲಿ ಚಿತ್ರಿ
ಸುವುದು ಡಾ|| ಪೋಲಂಕಿ ಉದ್ದೇಶಿಸುವಂಥ
ಒಂದು ಕಾಸ್ಮೊಸ್ (Cosmos). ('ಕಾಸ್ಮೊಸ್ ಎಂದರೆ

17 ನೇ ಪುಟಕ್ಕೆ

ಸೌಂದರ್ಯ Beauty ಎಂದು ಅರ್ಥ'.) ಇಲ್ಲಿ ಈ ಜಗತ್ತಿನ
ಎಲ್ಲ ವ್ಯಾಪಾರಗಳ ಹಿಂದೆಯೂ ಯಾವುದೋ
ಒಂದು, ನಮ್ಮ ಪ್ರಜ್ಞೆಗೆ ನಿಲುಕದ, ಉದ್ದೇಶವಿ
ರುವಂತಿದೆ. ಆದರೂ ಇದನ್ನು ಓದುತ್ತಿರುವಂತೆ
ನಮಗೆ ವಿಸ್ಮಯವಾಗುವ ಬದಲು ದಿಗಿಲಾಗುತ್ತದೆ
ಯಾಕೆ? ಬೊಳವಾರರು ಚಿತ್ರಿಸುವ ಈ ಜಗತ್ತಿ
ನಿಂದ ಡಾ|| ಪೋಲಂಕಿಯವರ ಕಾಸ್ಮೊಸ್‌ಗೆ ಯಾವ
ಪ್ರಯಾಸವೂ ಇಲ್ಲದೆ ಬರಬಹುದು-ದೇವರ ಬದಲು
ಸೃಷ್ಟಿ ಎಂಬ ಪದವನ್ನು ಉಪಯೋಗಿಸಿ.

ಡಾ|| ಪೋಲಂಕಿಯವರು 'ಔದಾರ್ಯ' ವೆಂಬ
ಪದವನ್ನು 'ಬಿಡುಗಡೆ', 'ಮುಂದುವರಿ' ಮೊದ
ಲಾದ ವಿಶಿಷ್ಟವಾದ ಅರ್ಥಗಳಲ್ಲಿ ಉಪಯೋಗಿ
ಸುತ್ತಾರೆ ಎಂದು ತಿಳಿಯುತ್ತದೆ. (ಇದೇ ರೀತಿ
'ಸಮತೆ', 'ಮನಸ್ಸು' ಇತ್ಯಾದಿ ಕೂಡ) ಆದರೆ
ಇದರಿಂದ, ಲೇಖಕರ ಮುಖ್ಯ ಸಮಸ್ಯೆಯೇನೂ
ಪರಿಹಾರವಾಗುವುದಿಲ್ಲ–ಈ ಲೋಕದ ವಿದ್ಯಮಾನ
ಗಳಿಗೆಲ್ಲ ಸೃಷ್ಟಿಯ 'ಔದಾರ್ಯವೇ' ಕಾರಣವೆಂದಾ
ದರೆ ಮನುಷ್ಯನು ಯಾರಿಗೂ ಜವಾಬ್ದಾರನಾಗ
ಬೇಕಾಗಿಲ್ಲ. ಆದ್ದರಿಂದಲೆ ಡಾ| ಪೋಲಂಕಿಯವರ
'ಜೈವಿಕ' ವಾದಕ್ಕೂ ಸನಾತನಿಗಳ 'ತೃಣಮಪಿ ನ
ನ ಚಲತಿ ತೇನ ವಿನಾ' ಎಂದರೆ ಡಾ| ಪೋಲಂಕಿ
ಎಲ್ಲದಕ್ಕೂ ಸೃಷ್ಟಿಯ 'ಔದಾರ್ಯ' ವೇ ಕಾರಣ
ಎನ್ನುತ್ತಾರೆ. ಜೀವವಿಜ್ಞಾನದಿಂದ ಅಥವಾ ಸಸ್ಯ
ವಿಜ್ಞಾನದಿಂದ ಉದಾಹರಣೆಗಳನ್ನು ತೆಗೆದುಕೊಂಡ
ಮಾತ್ರಕ್ಕೆ ತಾತ್ವಿಕ ನಿಲುವಿನಲ್ಲಿ ವ್ಯತ್ಯಾಸವಾಗುವು
ದಿಲ್ಲ.

ಡಾ| ಪೋಲಂಕಿಯವರ ತಾತ್ವಿಕ ನಿಲುವಿನ
ಬಗ್ಗೆ ಚರ್ಚೆಯಿಲ್ಲ. ಯಾಕೆಂದರೆ ಇಂಥ ವಾದವು
ಎಲ್ಲ ವಾದಗಳನ್ನೂ ಕೊನೆಗೊಳಿಸುವ ರೀತಿಯದು.
ಆದರೆ ಲೇಖಕರು ದಲಿತ, ದಲಿತೇತರ, ಜಾತಿ, ಕಲೆ
ಮುಂತಾದ ಮನುಷ್ಯ ವ್ಯವಸ್ಥೆಗೆ ಸಂಬಂಧಿಸಿದ
ವಿಚಾರಗಳನ್ನು ಪೌರಭೌತಿಕ ಪರಿಭಾಷೆಯಲ್ಲಿ
ನಮ್ಮ ಮುಂದಿಡುತ್ತಾರೆ. ದಲಿತ ಕಲೆ ಸೃಷ್ಟಿಯ
'ಔದಾರ್ಯ' ವೆಂದಾದರೆ, ದಲಿತಾವಸ್ಥೆ, ದಬ್ಬಾಳಿಕೆ
ತುಳಿತ, ಕ್ರೌರ್ಯ, ಅನ್ಯಾಯ (ಈ ಪದಗಳನ್ನೆಲ್ಲ
ನಾನು ಮನುಷ್ಯ ಸಮಾಜಕ್ಕೆ ಸೇರಿದ 'ಸಂಕುಚಿತ'
ಅರ್ಥದಲ್ಲಷ್ಟೆ ಉಪಯೋಗಿಸುತ್ತಿರುವೆನು)– ಇವು

ಕೂಡ ಸೃಷ್ಟಿಯ 'ಔದಾರ್ಯ' ವೆಂದು ಹೇಳಬಾರ
ದೇಕೆ? ಈ ಸಂದಿಗ್ಧತೆಯಿಂದ ಡಾ| ಪೋಲಂ
ಪಾರಾಗಿಲ್ಲ.

ಮಾತ್ರವಲ್ಲ, ಈ ಸಂದಿಗ್ಧತೆ ಅವರಿಗೆ ಅರ್ಥವಾ
ಗಿದೆಯೆಂದು ಕೂಡ ನನಗನಿಸುವುದಿಲ್ಲ. ಮನುಷ
ಸಮಾಜದ ವ್ಯವಸ್ಥೆ (ಅಥವಾ ಅವ್ಯವಸ್ಥೆ) ಯ
ಬಗ್ಗೆ ಮಾತಾಡುವಾಗ ಪ್ರಾಣಿ ವರ್ಗಗಳ ಸಮೀ
ಕರಣ ಮಾಡುವುದೇ ಈ ಗೊಂದಲಕ್ಕೆ ಒಂದ
ಕಾರಣ. ಹುಲಿಯು ಮೊಲವನ್ನು ಹಿಡಿದು ತಿನ
ವುದು ಹುಲಿಯಾಗಲಿ ಮೊಲವಾಗಲಿ ಮಾಡಿಕೊಂ
ವ್ಯವಸ್ಥೆಯಲ್ಲ. (ಪ್ರಾಣಿಗಳು ಒಂದು ವೇ
ಮನುಷ್ಯ ಸಮಾಜದ ಮೌಲ್ಯಗಳನ್ನು ಸ್ವೀಕರಿಸಿದ
ಏನಾಗುತ್ತದೆ ಎಂಬುದಕ್ಕೆ ಗೋವಿನ ಕಥೆಯ
ಉತ್ತರವಿದೆ; ಪುಣ್ಯಕೋಟಿಯನ್ನು ತಿನ್ನಲೊಲ್ಲ
ಅರ್ಬುದನು ಎಂದೆಂಬ ವ್ಯಾಘ್ರ ಆತ್ಮಹತ್ಯೆ ಮಾ
ಕೊಳ್ಳಬೇಕಾಗುತ್ತದೆ. ಮಾಂಸಹಾರಿಯಲ್ಲದ ಹು
ಬದುಕಿರುವುದು ಅಸಾಧ್ಯ.) ಮನುಷ್ಯ ಸಮಾ
ದಲ್ಲಿನ ವ್ಯವಸ್ಥೆ, ಅವ್ಯವಸ್ಥೆಗಳಿಗೆ ಮನುಷ್ಯರ
ಕಾರಣರಾಗುತ್ತಾರೆ. ಆದ್ದರಿಂದ ಮನುಷ್ಯ ಸಮ
ಜದ ಸಂಗತಿಗಳನ್ನು ಸೃಷ್ಟಿಯ 'ಔದಾರ್ಯ' ವೆ
ಮೊದಲಾದ ಜೈವಿಕ ಅಥವಾ ದೇವರು ಧರ್ಮವೆ
ಮೊದಲಾದ ದೈವಿಕ ದೃಷ್ಟಿಯಿಂದ ನೋಡುವುದ
ಸರಿಯಲ್ಲ. ಹಾಗೆ ನೋಡುವುದರಿಂದ ನಾವ
ಅನ್ಯಾಯ, ಶೋಷಣೆಗಳನ್ನು ಕೂಡ ನಮ್ಮ ಪ್ರಜ್ಞೆ
ಗೆ ದೊರಕದ ಕಾರಣವೊಂದಕ್ಕೆ ಆರೋಪಿಸಿ ಕೈ
ತೊಳೆದುಕೊಳ್ಳಬಹುದು.

ಕಲೆಯೆನ್ನುವುದು ಮನುಷ್ಯ ಸಮಾಜಕ್ಕೆ ಸೇರಿದ
ಸಂಗತಿ. ಇದರ ವಿಶ್ಲೇಷಣೆ, ಮೌಲ್ಯಮಾಪ
ನಡೆಯಬೇಕಾದ್ದು ಸಮಾಜಕ್ಕೆ ಸಂಬಂಧಿಸಿದ ಪ
ಭಾಷೆಯಲ್ಲಿ ಹೊರತಾಗಿ, ಇದನ್ನು ಸೃಷ್ಟಿಯ
ಔದಾರ್ಯಕ್ಕೆ ಹೊರಿಸುವುದರಿಂದ ಮನುಷ್ಯನಿ
ಅವನ ಮನಸ್ಸನ್ನು ನಿರಾಕರಿಸಿದಂತಾಗುತ್ತದೆ
ಭಾರತದಲ್ಲಿ ದಲಿತರ ಕಲೆಗಳು ಪ್ರತ್ಯೇಕವಾಗಿ ಬೆ
ದುದಕ್ಕಾಗಲಿ, ಅಮೇರಿಕದಲ್ಲಿ ಕಪ್ಪು ಜನರ
ಪ್ರತ್ಯೇಕವಾದ ಸಂಗೀತವನ್ನು ನಿರ್ಮಿಸಿಕೊಂಡದ್ದ
ಕ್ಕಾಗಲಿ, ಸಾಮಾಜಿಕ ಕಾರಣಗಳಿರುವಾಗ, ಇವ
ಗಳನ್ನು ಸೃಷ್ಟಿಯ 'ಔದಾರ್ಯ' ವೆಂದೋ, 'ಸಮತೆ

ಸಾಹಿತ್ಯ: 'ದನಿ ಇಲ್ಲದೆ ಮಲಗಿರುವವರ ದನಿಯಾಗಿ'

ಸಾಧಾರಣವಾಗಿ ನಮ್ಮಲ್ಲಿ ಚಾಲ್ತಿಯಲ್ಲಿರುವ ಸಂಗತಿಗಳನ್ನು ತಮ್ಮ ಮುಂದೆ ಇಡುತ್ತಿರುವೆ. ಮೊದಲನೆಯದಾಗಿ ಸಾಹಿತ್ಯದಿಂದ ಕ್ರಾಂತಿ ಆಗುತ್ತ ಎಂಬುದು. ನಾವು ಮಾಡಬೇಕಾದ್ದು ಕ್ರಾಂತಿ. ಕ್ರಾಂತಿ ಸಾಹಿತ್ಯದಿಂದ ಆಗದು. ಕೈಲಾಗದವ ಬರೆದುಕೊಳ್ಳುತ್ತಾನೆ, ಇತ್ಯಾದಿ ಮಾತಾಡುವವರನ್ನು ಕಂಡಿದ್ದೇನೆ. ಆದರೆ ಯಾರಾದರೂ ಅನಕ್ಷರಸ್ಥರ ಮಿದಳನ್ನು ಬಿಚ್ಚಿಟ್ಟರೂ ಅಲ್ಲಿ ಕಂಡು ಬರುವದು, ಪಾಂಡವರು ಇರಬಹುದು. ಕೌರವರು ಇರಬಹುದು. ರಾಮ ಇರಬಹುದು. ರಾವಣ ಇರಬಹುದು. ಅಥವಾ ತಮ್ಮ ಸುತ್ತಲಲ್ಲಿ ಇತ್ತೀಚೆಗೆ ನಡೆದ ಕೊಲೆಯೋ ಪವಾಡವೊ ಕತೆ ರೂಪದಲ್ಲಿ ಆ ಮಿದುಳನ್ನು ತುಂಬಿರುತ್ತದೆ. ಆದು ಆ ವ್ಯಕ್ತಿಯ ಇಂದಿನ ಬದುಕನ್ನು ಆಳುತ್ತಿರುತ್ತದೆ. ನಮಗೆ ಅರಿವಿಲ್ಲದೆ ನಮ್ಮ ಉಸಿರಾಟದಂತೆ ಸಾಹಿತ್ಯ ನಮ್ಮ ರೂಪಿಸಿಟ್ಟಿರುತ್ತದೆ. ಷೇಕ್ಸಪಿಯರನ ಕಾಲದಲ್ಲಿ ಯಾವ ರಾಜ ರಾಣಿ ಆಳುತ್ತಿದ್ದರೊ ನನಗೆ ತಿಳಿಯದು. ಆದರೆ ಷೇಕ್ಸ್‌ಪಿಯರ್ ಇಂದೂ ನಮ್ಮನ್ನು ಅಲ್ಲಾಡಿಸುತ್ತಿದ್ದಾನೆ. ಹೀಗೆ ಸಾಹಿತ್ಯ ಉಂಟು ಮಾಡಬಲ್ಲಂಥ ಪರಿಣಾಮ ಎಂಥದು ಎನ್ನುವುದಕ್ಕೆ ನಮ್ಮಲ್ಲಿ ಇರುವ ಒಂದು ಜಾನಪದ ಕಥೆಯನ್ನು ನೆನಪಿಸುವೆ.

ದಲಿತರಾದ ನಾವು ಮಾರಮ್ಮನಿಗೆ ಕೋಣ ಬಲಿ ಕೊಡುವ ಪದ್ಧತಿ ಇದೆ. ಈ ಪದ್ಧತಿ ಹಿಂದೆ ಇರುವ ಕಥೆ ಏನೆಂದರೆ, ಒಬ್ಬ ಮಾದಿಗರವನು ಒಬ್ಬಳು ಬ್ರಾಹ್ಮಣ ಕನ್ಯೆಯನ್ನು ಪ್ರೀತಿಸಿ ತಾನು ಬ್ರಾಹ್ಮಣ ಎಂದು ಸುಳ್ಳು ಹೇಳಿ ವಂಚಿಸಿ ಆಕೆಯನ್ನು ಮದುವೆಯಾಗುತ್ತಾನೆ. ಮುಂದೆ ತಾನು ಮದುವೆಯಾಗಿರುವವನು ಮಾದಿಗರವನು ಎಂಬುದು ಬ್ರಾಹ್ಮಣಿಗೆ ತಿಳಿದಾಗ ಆಕೆ ಕುಪಿತಳಾಗಿ ಅಗ್ನಿ ಪ್ರವೇಶ ಮಾಡುತ್ತಾ "ಮಾದಿಗರವನು ಜಾತಿ ಸುಳ್ಳು ಹೇಳಿ ನನ್ನನ್ನೂ ಕೆಡಿಸಿದ ಪ್ರಯುಕ್ತ ಆತ ಕೋಣವಾಗಿ ಹುಟ್ಟಲಿ, ಆ ಕೋಣವನ್ನು ನನಗೆ ಬಲಿ ಕೊಡಲಿ'' ಎಂದು ಶಾಪ ಕೊಡುತ್ತಾಳೆ. ಇದು ಕಥೆ. ಕೋಣವಾದ ತಮ್ಮವನನ್ನು ನಮ್ಮವರು ಬಲಿಕೊಡುತ್ತಾ, ಅಷ್ಟೇ ಅಲ್ಲ ತಿಂದು ಬಂದಿದ್ದಾರೆ. ಇಂದು ಕೋಣ ಬಲಿಯು ಮಾಂಸ ಮಾತ್ರವಾಗಿರಬಹುದು. ಆದರೆ ಹಿಂದೆ ನಮ್ಮವರನ್ನು ನಾವು ಕೊಲ್ಲಿಸುವುದನ್ನು ಈ ಈ ಕತೆ ಮಾಡಿಸಿತ್ತು. ವರ್ಣ ಸಂಕರ ತಡೆದಿತ್ತು. ಒಬ್ಬ ದೊರೆ ಅಥವಾ ಸರ್ವಾಧಿಕಾರಿ ತನಗೆ ಇಷ್ಟವಾಗದವರನ್ನು ಗಲ್ಲಿಗೆ ಏರಿಸಬಹುದು. ಅಥವಾ ಕೊಲ್ಲಿಸಬಹುದು. ಆದರೆ ಈ ಕತೆ ಯಾವ ಬಲತ್ಕಾರವನ್ನು ಮಾಡದೆ ನಮ್ಮನ್ನು ನಮ್ಮ ಕೈಯಾರವೇ ಕೊಲ್ಲಿಸಿದೆ. ಸಾಹಿತ್ಯವನ್ನು ಉಡಾಫೆಯಾಗಿ ನೋಡಬೇಡಿ ಎನ್ನುವುದಕ್ಕೆ ಇಷ್ಟೆಲ್ಲ ಹೇಳುತ್ತಿರುವೆ. ಇಂಥ ಪರಿಣಾಮವುಳ್ಳ ಸಾಹಿತ್ಯ, ನಮ್ಮ ಸಾಹಿತ್ಯವೂ ಪರಿಣಾಮಕಾರಿಯಾದುದಾದರೆ ನಮಗೂ ಒಲಿಯುತ್ತದೆ. ಉದಾಹರಣೆಗೆ ನಮ್ಮ ಪಂಚಮ ಪತ್ರಿಕೆಯ ಕೆಲವು ಅನುಭವಗಳನ್ನು ಓದಿ ಟಿ. ಎನ್. ಸೀತಾರಾಮ ಒಂದು ಕಾಗದ ಬರೆದಿದ್ದರು. ಅದರಲ್ಲಿ ಅವರು "ಇದುವರೆಗೂ ವಿಚಾರದ ಮಟ್ಟದಲ್ಲಿ ದಲಿತರ ಪರವಿದ್ದೆ. ಈಗ ಪಂಚಮದಲ್ಲಿ ಪ್ರಕಟವಾಗುತ್ತಿರುವ ಅನುಭವ ಓದುತ್ತಾ ಅವು ನನ್ನದೂ ಆದವು. ನಾನು ದಲಿತನಾಗಿ ತಳಮಳಿಸುತ್ತಾ ಚಿಂತೆಗೀಡಾದೆ'' ಎಂಬರ್ಥದಲ್ಲಿ ಬರೆದಿರುವರು. ವಿಚಾರದಿಂದ ದಲಿತರ ಪರ ಆಗುವನು, ಅನುಭವ, ಸಾಹಿತ್ಯದಿಂದ ದಲಿತ ಸ್ಥಿತಿಯನ್ನು ಅನುಭವಿಸುತ್ತಾನೆ.

ಧಾರವಾಡ
ದಲಿತ ಲೇಖಕ ಸಮ್ಮೇಳನದಲ್ಲಿ ದೇವನೂರ್ ಮಾತು

ಗಾಯ ಎಂಬುವುದು ವಿಚಾರವಾದರೆ, ಗಾಯದ ಅನುಭವ ಸಾಹಿತ್ಯವಾಗುತ್ತದೆ. ಟಾಲ್‌ಸ್ಟಾಯ್ ಅನುಭವ ನನ್ನ ನಿಮ್ಮದಾಗುತ್ತದೆ. ಈ ಅನುಭವಿಸುವಿಕೆಯು ನನ್ನ ಮತ್ತು ನಮ್ಮನ್ನು ಸಮೀಪಗೊಳಿಸುತ್ತದೆ. ಹಾಗೂ ಕಲಾವಿದ ಸ್ವಭಾವದಲ್ಲೇ ನಿನ್ನೊಳಕ್ಕೆ ನಾನು ಹೋಗಿ ನಿನ್ನನ್ನು ಅನುಭವಿಸುವ ಗುಣವಿರುತ್ತದೆ. ಇದು ಸಮಾಜ ಬದಲಾವಣೆ ಬಯಸುವ ನಮಗೆ ಎಷ್ಟೊಂದು ಅಗತ್ಯ— ಎಂದು ವಿವರಿಸಿ ಹೇಳುವ ಅಗತ್ಯ ಇಲ್ಲ ಎಂದುಕೊಂಡಿರುವೆ. ಆಮೇಲೆ ಆಗಾಗ ಕೇಳಿಬರುವ ಅನಕ್ಷರಸ್ಥರಾದ ನಮ್ಮ ಜನಕ್ಕೆ ನಮ್ಮ ಸಾಹಿತ್ಯ ತಲುಪತ್ತಾ ? ತಲುಪದಿದ್ದರೆ ಯಾರಿಗಾಗಿ ಬರೆಯಬೇಕು ? ಎಂಬ ಪ್ರಶ್ನೆಗೆ ವಚನ, ಓದಿ ಎಂದಷ್ಟು ಹೇಳಬಯಸುವೆ. ಕ್ಷರಸ್ಥರು ಅರ್ಥ ಮಾಡಿಕೊಳ್ಳಲು ಕಷ್ಟ ಪಡುವ ವಚನಗಳನ್ನು ಅನಕ್ಷರಸ್ಥರು ಅರ್ಥ ಮಾಡಿಕೊಳ್ಳುವುದನ್ನು ಬಲ್ಲೆ. ನಮ್ಮ ಹಳ್ಳಿಗಾಡ ಅನಕ್ಷರಸ್ಥರಲ್ಲಿ ಇರುವ ಕಲ್ಪನೆ ರೂಪಕಗಳು ನಮ್ಮಂಥ ಲೇಖಕರಲೆಲ್ಲ ಇಲ್ಲದಷ್ಟು ಇದೆ. ನಾವು ಅಕ್ಷರಸ್ಥರಾಗಿ ನಮ್ಮ ಜನರಿಂದ ಕತ್ತರಿಸಿ ಕೊಂಡ ಪ್ರಯುಕ್ತ ಈ ಕಂದಕ ಉಂಟಾಗಿದೆ ಎನಿಸುತ್ತದೆ.

ನಾವು ದಲಿತರು ಬಂಡಾಯದ ಲೇಖಕರು ಹೆಚ್ಚು ಕಮ್ಮಿ ಯಾವುದಾದರು ಇಸಂಗೊ ಸಂಘಟನೆಗೊ ಒಲವು ಉಳ್ಳವನು ಆಗಿದ್ದಾನೆ. ನಮಗೆ ಒಲವು ಇರುವ ಸಂಘಟನೆಯ ವಿಚಾರಗಳು ನಮ್ಮ ಬರವಣಿಗೆಯ ಮೇಲೆ ಪರಿಣಾಮ ಬೀರಬಹುದು. ಸಂಘಟನೆಗಳು ಜೀವನ ಬದಲಾವಣೆಗೆ ಹೊರಟರೆ ಸಾಹಿತ್ಯ ಜೀವನವನ್ನು ಅರ್ಥಮಾಡಿಕೊಳ್ಳುವ ಕ್ರಿಯೆಯಾಗಿರುತ್ತದೆ. ಈ ಅರ್ಥ ಮಾಡಿಕೊಂಡು ಹೊರಟರೇ ಬದಲಾವಣೆಯು ಅರ್ಥ ಪೂರ್ಣವಾಗುವದು. ಸಂಘ ವಿಚಾರ ಹಿಡಿದು ನಡೆದರೆ, ಸಾಹಿತ್ಯವು ಬದುಕನ್ನೆ ಹಿಡಿದು ನಡೆಯುತ್ತದೆ. ಆದ್ದರಿಂದ ಈ ಎರಡು ನಿಂತಿರುವ ಸ್ಥಳಗಳು ಬೇರೆಯೇ ಹೊರತು ಜೀವಾಳದಲ್ಲಿ ಬೇರೆಯಿಲ್ಲ. ಈ ಬಗ್ಗೆ ಸಂಯಮ, ವಿವೇಕ, ಇಲ್ಲದೆ ನಾವು ಸಂಘ ಇಸಂನ್ನೂ ಪ್ರತಿಪಾದಿಸುವಂತೆ ಬರೆಯಲು ಹೊರಟು ಮಾವೊ ಹೇಳುವಂತೆ ಒಳ್ಳೆಯ ಸಾಹಿತ್ಯವಲ್ಲದ್ದು ಒಳ್ಳೇಯ ರಾಜಕೀಯ ಅಲ್ಲ ಎಂಬ ಮಾತಿನಂತೆ ಪರಿಣಾಮ ಇಲ್ಲದವರಾಗುತ್ತೇವೆ. ಯಾವುದೇ ಇಸಂಗೆ ಒಲವಿದ್ದರೂ ಕಲಾವಿದನ ನಿಷ್ಠೆ ಬದುಕಿಗೆ ಆಗಿರಬೇಕೆನಿಸುತ್ತದೆ. ನನ್ನ ಅಮಾಸ ಕತೆಯಲ್ಲಿ ಬರುವ ಗ್ಯಾಂಗ್‌ಮೆನ್ ಸಿದ್ದಪ್ಪ ಎಂಬ ವ್ಯಕ್ತಿ ಕಮ್ಯುನಿಸಂ ಮಾತಾಡುತ್ತಾನೆ, ಆ ಪಾತ್ರದಿಂದ ಸಮಾಜವಾದ ಅನ್ನಿಸಿದ್ದಿದ್ದರೆ ಆ ಪಾತ್ರವೇ ಸುಳ್ಳಾಗುತ್ತಿತ್ತು. ಪರಿಣಾಮವೇ ಇಲ್ಲದಂತಾಗುತ್ತಿತ್ತು. ಪರಿಣಾಮ ಇಲ್ಲದ್ದು ಅದು ಬಂಡಾಯವಾಗಿದ್ದರೂ ದಲಿತವಾಗಿದ್ದರೂ ನಪುಂಸಕ ಎಂಬ ಅರಿವು ನಮಗೆ ಇರಬೇಕಾಗಿದೆ.

ಸಾಮಾನ್ಯವಾಗಿ ಹಿಂದಲದರ ಬಗ್ಗೆ ಬೇರೆಯದರ ಬಗ್ಗೆ ಕಣ್ಣು ಮುಚ್ಚಿಕೊಳ್ಳುವುದು ನಮ್ಮ ಸ್ವಭಾವವಾಗಿದೆ. ಕಣ್ಣುಮುಚ್ಚಿಕೊಂಡರೆ ನಮ್ಮ ಕಣ್ಣು ಕಿರಿದಾಗುತ್ತದೆಯೇ ಹೊರತು, ಅಂದರೆ ಅದರ ಪರಿಣಾಮ ನಮ್ಮ ಮೇಲೆಯೇ ಆಗುತ್ತದೆ. ನಾನು ಕಾಳಿದಾಸನ ರಘುವಂಶ ಕತೆಯನ್ನು ಕೇಳಿದ್ದೇನೆ. ರಘುವಂಶದಲ್ಲಿ ರಾಜಾಧಿರಾಜರ ಪರಂಪರೆಯು ರಾರಾಜಿಸುತ್ತ ಕೊನೆಯ ರಾಜನಿಗೆ ತೊನ್ನು ಹಿಡಿಯುತ್ತದೆ. ಆ ರಾಜನೂ ತೊನ್ನು ಹಿಡಿಯದ ತನ್ನ ದೇಹದ ಭಾಗಗಳನ್ನು ಮಾತ್ರ ಜನತೆಗೆ ತೋರಿಸಿಕೊಂಡು ಬರುತ್ತಾನೆ. ಕೊನೆಗೆ ತೊನ್ನು ಆ ರಾಜನ ಪಾದವನ್ನು ಮಾತ್ರ ಬಿಟ್ಟು ಇಡೀ ದೇಹವನ್ನು ಆವರಿಸಿಕೊಳ್ಳುತ್ತದೆ. ಆ ರಾಜ ಇಡೀ ದೇಹವನ್ನು ಮುಚ್ಚಿಟ್ಟುಕೊಂಡು ಇನ್ನೂ ತೊನ್ನು ಹಿಡಿಯದ ತನ್ನ ಪಾದವನ್ನು

14 ನೇ ಪುಟಕ್ಕೆ

ಪಡಿತರ ವಿತರಣೆಗೆ ಹೊಸ ಕ್ರಮ

- ನಾಗರಿಕರಿಗೆ ನ್ಯಾಯಬೆಲೆಯಲ್ಲಿ ನಿತ್ಯ ಬಳಕೆಯ ಪಡಿತರ ವಿತರಣೆಗೆ ಈಗ ಹೊಸಕ್ರಮ.
- ನ್ಯಾಯಬೆಲೆ ಅಂಗಡಿಗಳಲ್ಲಿ ಆಗುತ್ತಿರುವ ಅನ್ಯಾಯವನ್ನು ತಡೆಗಟ್ಟುವುದೇ ಇದರ ಉದ್ದೇಶ.
- ಈಗ ಇರುವ ಎಲ್ಲ ಖಾಸಗಿ ನ್ಯಾಯಬೆಲೆ ಅಂಗಡಿಗಳ ರದ್ದು.
- ಪಡಿತರ ಕಾರ್ಡುದಾರರ ಸಹಕಾರ ಸಂಘಗಳ ಸ್ಥಾಪನೆ.
- ಪಡಿತರ ವಿತರಣೆಯ ಈ ಹೊಸ ಪದ್ಧತಿಯು ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಉಸ್ತುವಾರಿಯಲ್ಲಿ ನಡೆಯುತ್ತದೆ.
- ಜನವರಿ 1984 ರಿಂದ ಈ ಹೊಸಕ್ರಮ ಜಾರಿಗೆ ಬರಲಿದೆ.

ಪ್ರಕಟಣೆ : ''ಕರ್ನಾಟಕ ವಾರ್ತೆ''

ಹೆಣ್ಣಿನ ಬೆತ್ತಲೆಗೆ ಹಾತೊರೆವ ನಮ್ಮ ವಿಧಾನ ಸಭೆಗಳು

ವಿಧಾನಸಭೆಗಳಲ್ಲಿ ಶಾಸಕರ ನಡವಳಿಕೆ–ವರ್ತನೆ ಮಾತುಗಳು ಯಾವ ನಾಗರಿಕನಿಗೂ ಗೌರವ ತರುವಂಥದ್ದಲ್ಲ ಎಂಬುದು ನಿಚ್ಚಳವಾಗಿ ಹೋಗಿದೆ. ಶಾಸಕರ ನಿರ್ಲಜ್ಜ ಘನತೆಗೆ ಮತ್ತೊಂದು ಉದಾಹರಣೆ ಬಿಹಾರದ ವಿಧಾನಸಭೆಯಲ್ಲಿ 22-7-83 ರಂದು ನಡೆದಿದೆ. ಸದನದ ಘನತೆಗೆ ಧಕ್ಕೆ ತರುವಂಥ ಯತ್ನ ಯಾವುದೇ ಸದಸ್ಯನಿಂದ ನಡೆದಾಗ ಅಧ್ಯಕ್ಷರು ಅಂಥ ಸದಸ್ಯರನ್ನು ಕ್ಷಮಯಾಪಣೆ ಕೇಳಲು ಆದೇಶಿಸುತ್ತಾರೆ; ಸದನದಿಂದ ಹೊರಗೆ ಹಾಕುತ್ತಾರೆ. ಆಳುವ ಪಕ್ಷದ ಸದಸ್ಯರಿಂದ ಇಂಥ ಯತ್ನ ನಡೆದಾಗ ವಿರೋಧಿ ಸದಸ್ಯರೂ, ವಿರೋಧಿ ಸದಸ್ಯರಿಂದ ನಡೆದಾಗ ಆಳುವ ಪಕ್ಷದವರೂ ಹಟ ಹಿಡಿದು ನಿರ್ಲಜ್ಜತೆ ತೋರಿದ ಸದಸ್ಯರ ಮೇಲೆ ಕ್ರಮ ಕೈಗೊಳ್ಳಲು ಕೋರುತ್ತಾರೆ; ಆದರೆ ಅಂದು ಯಾರೂ ಹೀಗೆ ಹಟ ಹಿಡಿಯಲಿಲ್ಲ. ಬಿಹಾರ ವಿಧಾನ ಸಭಾಧ್ಯಕ್ಷ ಶ್ರೀ ರಾಧಾನಂದನ ಝಾ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲವಷ್ಟೇ ಅಲ್ಲ, ಇಡೀ ಪ್ರಕರಣವನ್ನು ತಮಾಷೆ ಎಂದು ಪರಿಗಣಿಸಿ ತಾವೂ ಪಾಲ್ಗೊಂಡರು.

ಬಿಹಾರ ವಿಧಾನಸಭೆಯಲ್ಲಿ ಅಂದು ನಡೆದ ಘಟನೆಯನ್ನು ಪ್ರಸ್ತಾಪಿಸಲೂ ಸಹ ಪ್ರಜ್ಞಾವಂತರಾದವರಿಗೆ ನಾಚಿಕೆ–ದುಃಖ ಎನಿಸುತ್ತದೆ. ಹಜಾರಿಬಾಗ ಜಿಲ್ಲೆಯ ಪಾಂಡೂ ಕ್ಷೇತ್ರದ ಶಾಸಕಿ ಶ್ರೀಮತಿ ರಮಣಿಕಾ ಗುಪ್ತಾ ಅವರು ತಮ್ಮ ಕ್ಷೇತ್ರದಲ್ಲಿ ಕೋಲ್ ಇಂಡಿಯಾ ಕಂಪನಿಯು ಸಿ. ಸಿ. ಎಲ್. ಸ್ಥಾಪಿಸುತ್ತಿರುವ ಫ್ಯಾಕ್ಟರಿಯ ಕಾರಣದಿಂದ ನಿರ್ಗತಿಕರಾಗುವ 2575 ಜನರಿಗೆ ಪುನರ್ವಸತಿ ಮಾಡಿಕೊಡಬೇಕೆಂದು ಕೋಲ್ ಬೇರಿಂಗ್ ಅಧಿನಿಯಮ ಮತ್ತು ಭೂಶಾಸನಗಳ ಪ್ರಕಾರ ಸರ್ವೋಚ್ಚ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದ್ದರು. 5–5–83 ರಂದು ಸರ್ವೋಚ್ಚ ನ್ಯಾಯಾಲಯವು ನಿರ್ಗತಿಕರಾಗುವವರಿಗೆ ಪುನರ್ವಸತಿ ವ್ಯವಸ್ಥೆ ಮಾಡಿಕೊಡಬೇಕೆಂದೂ, ಇದಕ್ಕಾಗಿ ಯೋಜನೆಯೊಂದನ್ನು ರೂಪಿಸಬೇಕೆಂದೂ ಭೂರಹಿತರಾಗುವವರಿಗೆ ಪರಿಹಾರವಾಗಿ ಹಣವನ್ನು ನೀಡದೇ ಭೂಮಿಯನ್ನೇ ನೀಡಬೇಕೆಂದೂ ಸೂಚಿಸಿ ತನಗೆ ಕೂಡಲೇ ಈ ಬಗ್ಗೆ ವರದಿಯೊಂದನ್ನು ಸಲ್ಲಿಸಲು ಕೇಳಿತ್ತು.

ಶಾಸಕಿ ರಮಣಿಕಾ ಗುಪ್ತಾ 22–7–83 ರಂದು ಸದನದಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿ ಕಂದಾಯ ಸಚಿವ ಶ್ರೀ ಲಹಟನ್ ಚೌಧರಿ ಅವರಿಂದ ಯೋಜನೆ ತಯಾರಾದ ಬಗ್ಗೆ, ವರದಿಯನ್ನು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ವಿಚಾರಿಸಿದರು. ಕಂದಾಯ ಸಚಿವರು 'ತಯಾರು ಮಾಡಿರುವ ಯೋಜನೆಯು ಮತ್ತು ವರದಿಯು ಉದ್ದವಾಗಿದೆ' ಎಂದು ಹೇಳಿ ವಿಷಯ ಬದಲಿಸಲು ಯತ್ನಿಸಿದಾಗ ಶ್ರೀಮತಿ ರಮಣಿಕಾ ಗುಪ್ತಾ ಅವರು ತಯಾರಾಗಿರುವ ಯೋಜನೆ ಮತ್ತು ವರದಿಯನ್ನು ಸದನದ ಮುಂದಿಡಲು ಕೋರಿದರು. ಸಭಾಧ್ಯಕ್ಷರು ಮಧ್ಯೆ ಪ್ರವೇಶಿಸಿ 'ಅದರ ಅಗತ್ಯವಿಲ್ಲ, ಎಂದು ಹೇಳಿದಾಗ ಭಾರತೀಯ ಜನತಾ ಪಕ್ಷದ ಶಾಸಕ ಇಂದ್ರಸಿಂಹ ನಾಮಧಾರಿ ಅವರು ಸಭಾಧ್ಯಕ್ಷರಿಗೆ 'ವಿರೋಧಿ ಗುಂಪಿನಲ್ಲಿರುವ ಏಕೈಕ ಮಹಿಳಾ ಸದಸ್ಯೆಯನ್ನೂ ಸಹ ತೃಪ್ತಿಪಡಿಸುವುದು ನಿಮಗೆ ಸಾಧ್ಯವಿಲ್ಲವೇ?' ಎಂದು ಕೇಳಿದರು. ಜನತಾ ಪಕ್ಷದ ಶಾಸಕ ಕೃಷ್ಣ ಪಟೇಲ್ ಮುಂದುವರೆದು 'ಅಧ್ಯಕ್ಷರೇ, ಉದ್ದವಾಗಿದೆಯೆಂದು ಸಚಿವರು ಹೇಳಿದ್ದಾರೆ; ಸ್ವೀಕರಿಸಲು ಶಾಸಕಿಯೂ ಸಿದ್ಧವಿದ್ದಾರೆ; ಅವರಿಬ್ಬರೂ ಏಕಾಂತದಲ್ಲಿ ಕೊಡತೆಗೊಳ್ಳುವುದನ್ನು ಮುಗಿಸಲಿ' ಎಂದು ಮೇಜು ಗುದ್ದಿ ನಗುತ್ತಾ ನುಡಿದರು. ಸದನ ಪುರುಷರ ನಗುವಿನಿಂದ ತುಂಬಿಹೋಯಿತು. ಮಾನವೀಯತೆ ಇದ್ದವರು ಯಾರಾದರೂ ಅಲ್ಲಿದ್ದರೆ ನಾಚಿಕೆಯಿಂದ ತಲೆ ತಗ್ಗಿಸುತ್ತಿದ್ದರು; ಎದ್ದು ನಿಂತು ಕೋಪದಿಂದ ಕೂಗುತ್ತಿದ್ದರು. ಆದರೆ ಇದೊಂದೂ ಅಂದು ಬಿಹಾರ ವಿಧಾನ ಸಭೆಯಲ್ಲಿ ಕಾಣಲಿಲ್ಲ.

ಬಿಹಾರದ ವಿಧಾನಸಭೆಯಲ್ಲೊಂದು ನಾಚಿಕೆಗೇಡಿನ ಪ್ರಕರಣ

ಶಾಸಕರ ಅಭಿರುಚಿ ಯಾವ ಮಟ್ಟಕ್ಕೆ ಇಳಿದಿದೆ; ಭೋಗವಾದಿ ಸಂಸ್ಕೃತಿಗೆ ಶಾಸಕರೂ ದಾಸರಾಗಿಹೋಗಿದ್ದಾರೆ. ಸ್ತ್ರೀ ಇವರ ಪಾಲಿಗೆ ಭೋಗವಸ್ತು. ಅವಳನ್ನು ತಮಾಷೆ ಮಾಡುವುದು, ಕೀಟಲೆಗೆ ಗುರಿಪಡಿಸುವುದು ಗಂಡಸರ ಹಕ್ಕು ಎಂದಾಗಿ ಹೋಗಿದೆ. ಸ್ತ್ರೀಬಗೆಗಿನ ದೃಷ್ಟಿಕೋನ ಬದಲಾಗದಿರುವುದರಿಂದಲೂ ದಿನಂಪ್ರತಿ ವರದಕ್ಷಿಣೆ ಕೊಲೆ–ಆತ್ಮಹತ್ಯೆ, ಮಾನಭಂಗ, ಅತ್ಯಾಚಾರಗಳು ಹೆಚ್ಚುತ್ತಿವೆ; ಸಾರ್ವಜನಿಕ ಜೀವನದಲ್ಲಿರುವ ಮಹಿಳೆಯರು ಹೃದಯ ಕೈಯಲ್ಲಿ ಹಿಡಿದುಕೊಂಡು ಹೆಜ್ಜೆಯಿಡುತ್ತಿದ್ದಾರೆ; ಮಹಿಳಾ ಶಾಸಕಿಯರ ಸಂಖ್ಯೆ ನಗಣ್ಯವಾಗಿದೆ.

ಸ್ತ್ರೀಯರ ಬಗೆಗೆ ಬೆಳೆದಿರುವ ಇಂಥ ದೃಷ್ಟಿಕೋನದ ಮೂಲ ಬೇರು ಈ ದೇಶದ ಸಂಸ್ಕೃತಿಯಲ್ಲಿದೆ. ಸ್ತ್ರೀ ಹೃದಯ-ಮನಸ್ಸು-ಆಸೆ-ಆಕಾಂಕ್ಷೆಗಳನ್ನು ಹೊಂದಿದ್ದಾಳೆಂಬ ಅಂಶವನ್ನೇ ಅಲ್ಲಗಳೆಯಲಾಗುತ್ತಿದೆ. ಅತ್ಯಾಚಾರ–ಮಾನಭಂಗಕ್ಕೊಳಗಾಗುವ ಸ್ತ್ರೀಗೆ ರಕ್ಷಣೆ ಸಮಾಧಾನ ನೀಡುವ ಬದಲು ಬೈಗಳ–ದಂಡನೆಗಳನ್ನೇ ನೀಡಲಾಗುತ್ತದೆ. ಸಂದರ್ಭಕ್ಕೆ ಬಲಿಯಾಗಿ ಮಾನಭಂಗಕ್ಕೆ ಒಳಗಾದ ಸ್ತ್ರೀ ಬಗ್ಗೆಯೂ ಸಹ ತಿರಸ್ಕಾರ ಕಾಣುತ್ತದೆ. 'ತಾನು ಸರಿಯಿದ್ದರೆ .. ಎಂಬ ಉಪದೇಶ ಅವಳಿಗೆ ದೊರಕುತ್ತದೆ. ಬಲಾತ್ಕಾರ–ಅತ್ಯಾಚಾರ–ಮಾನಭಂಗಕ್ಕೊಳಗಾದ ಸ್ತ್ರೀಯರ ಬಗ್ಗೆ ಇಲ್ಲ ಸಲ್ಲದ ಕತೆಗಳನ್ನು ಪ್ರಚುರಪಡಿಸಿ ಅವರು 'ಶುದ್ಧಚಾರಿತ್ರ್ಯ' ಉಳ್ಳವರಲ್ಲ ಎಂಬ ಅಂಶದ ಬಗ್ಗೆ ಯಾರೂ ಯೋಚಿಸುವುದಿಲ್ಲ. ಭೋಗವಾಗಿ ಸಂಸ್ಕೃತಿಗೆ ದಾಸರಾಗಿರುವ ನಮ್ಮಲ್ಲಿ 'ಸ್ತ್ರೀ ಇರುವುದೇ ಭೋಗಕ್ಕಾಗಿ' ಎಂಬ ಭಾವನೆ ಬೆಳೆದಿದೆ.

ಶಾಸಕಿ ರಮಣಿಕಾ ಗುಪ್ತಾ ಅವರಿಗೆ ಈ ಬಗೆಯಲ್ಲಿ ಅಪಮಾನಕರ ಮಾತುಗಳನ್ನಾಡಿದ ಜನತಾ ಸದಸ್ಯನನ್ನು ಸದನದಲ್ಲೇ ಕ್ಷಮೆಯಾಚಿಸಲು ಅಧ್ಯಕ್ಷರು ಆದೇಶಿಸಬೇಕಾಗಿತ್ತು; ಅಥವಾ ಸದನದಿಂದ ಅವರನ್ನು ಹೊರಹಾಕಬೇಕಾಗಿತ್ತು; ಜನತಾ ಪಕ್ಷವಾದರೂ ತನ್ನ ಸದಸ್ಯನ ಆಕ್ಷೇಪಾರ್ಹ ನಡವಳಿಕೆ ಬಗ್ಗೆ ಕ್ರಮ ಕೈಗೊಳ್ಳಬೇಕಿತ್ತು; ಹೇಯವಾದ ರೀತಿಯಲ್ಲಿ ಮಾತಾಡಿದ ಸದಸ್ಯನ ಮೇಲೆ ಕ್ರಮ ಕೈಗೊಳ್ಳಬೇಕೆಂದು ಇನ್ನಿತರ ಸದಸ್ಯರಾದರೂ ಸಭಾಧ್ಯಕ್ಷರನ್ನು ಕೇಳಬೇಕಿತ್ತು. ಆದರೆ ಇದಾವುದೂ ನಡೆದಿಲ್ಲ. ಯಾಕೆ?

ಕಾರಣ ಸ್ಪಷ್ಟವಿದೆ. "ಇಂಥದ್ದೆಲ್ಲ ಕ್ಷುಲ್ಲಕ ವಿಷಯ; ಇಂಥ ವಿಷಯಗಳನ್ನು ನಿರ್ಲಕ್ಷಿಸಿಬಿಡುವುದು ಸೂಕ್ತ; ಹೆಚ್ಚು ಚರ್ಚಿಸಿದಷ್ಟೂ ಅಪಮಾನ ಹೆಚ್ಚು" ಎಂಬ ಭಾವನೆ ಹಲವರಲ್ಲಿದೆ. ಈ ಬಗೆಯ ವಾದದ ಬಗ್ಗೆ ಗಂಭೀರವಾಗಿ ಚಿಂತನೆ ನಡೆಯಬೇಕಾಗಿದೆ. ಇಂಥ ವಾದವನ್ನು ಮುಂದಿಟ್ಟು ಅಪಮಾನವನ್ನು ಸತತವಾಗಿ ಮುಂದುವರೆಸಬೇಕೆಂಬ ಕುತಂತ್ರ ಪುರುಷರದ್ದು. ಇಂಥ ಪ್ರಕರಣಗಳನ್ನು ತೆರೆಯ ಮರೆಯಲ್ಲಿಟ್ಟು ಅಶ್ಲೀಲತೆ. ಮಾನಭಂಗ, ಅತ್ಯಾಚಾರ, ಬಲಾತ್ಕಾರಗಳ ವಿರುದ್ಧ ಜನಾಭಿಪ್ರಾಯವನ್ನು ರೂಪಿಸಲು ಸಾಧ್ಯವಿಲ್ಲ.

ಶ್ರೀಮತಿ ಗುಪ್ತಾ ಜುಲೈ 22, 83 ರ ಈ ಘಟನೆ ಬಗ್ಗೆ ವಿಧಾನ ಸಭಾಧ್ಯಕ್ಷರಿಗೆ ಸುದೀರ್ಘ ಪತ್ರವನ್ನು ಬರೆದಿದ್ದಾರೆ. "ಜುಲೈ 22 ರಂದು ಸದನದಲ್ಲಿ ನಡೆದ ಘಟನೆಯನ್ನು ಸದನದ ಸದ

ಹಿಂದೂಧರ್ಮವನ್ನು ಕೊಲ್ಲುತ್ತಿರುವ ‘ಹಿಂದೂರಕ್ಷಕರ

ಯಾವುದೇ ದೇಶದ ಚರಿತ್ರೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಇತರ ಮೂಲಗಳೊಂದಿಗೆ, ಆ ದೇಶದ ಪ್ರಾಚೀನ ಗ್ರಂಥಗಳು ತೀರಾ ಅವಶ್ಯಕ ಆಕರವಾಗುತ್ತವೆ. ಅವುಗಳ ವಸ್ತುನಿಷ್ಟ ಅಧ್ಯಯನ ಅಂದಿನ ಜನ ಜೀವನದ ರೀತಿ, ಆಲೋಚನಾ ವಿಧಾನ ಇವುಗಳ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಬಲ್ಲದು. ಆದರೆ ಸಾಮಾನ್ಯವಾಗಿ ಜನರಲ್ಲಿ ಬೇರೂರಿರುವ ಕುರುಡು ಪ್ರೀತಿ ಮತ್ತು ಅಂಧಶ್ರದ್ಧೆ ಈ ಅಧ್ಯಯನಕ್ಕೆ ಅನೇಕ ಸಲ ಅಡ್ಡಬರುತ್ತದೆ. ಇಂದು ವೇದ, ರಾಮಾಯಣ, ಮಹಾಭಾರತ, ಗೀತೆ ಇವುಗಳ ವೈಜ್ಞಾನಿಕ ಅಧ್ಯಯನವನ್ನು ಪ್ರಾರಂಭಿಸಿದೊಡನೆ ಇಂತವರ ವಿರೋಧ ಎದುರಿಸಬೇಕಾಗುತ್ತದೆ. ಇತ್ತೀಚೆಗೆ, ಶಿವಮೊಗ್ಗದಲ್ಲಿ ಪೋಲಂಕಿರಾಮಮೂರ್ತಿಯವರ ಮೇಲೆ ನಡೆದ ಹಲ್ಲೆ ಇದಕ್ಕೆ ಒಂದು ನಿದರ್ಶನ.

ತೀರಾ ಸಂಪ್ರದಾಯವಾದಿಯಾದ, ಹೆಚ್. ಪಿ. ಶಾಸ್ತ್ರೀಯವರ ವೇದದ ಬಗೆಗಿನ ಲೇಖನ ಅಂತವರ ಕಣ್‌ತೆರಸಿ, ವಿಚಾರಸ್ವಾತಂತ್ರಕ್ಕೆ ಸ್ವಲ್ಪಮಟ್ಟಿನ ಅವಕಾಶ ಮಾಡಿಕೊಡಬಹುದು ಎಂಬ ನಂಬಿಕೆಯಿಂದ, ಅದರ ಭಾವಾನುವಾದವನ್ನು ಈ ಕೆಳಗೆ ಕೊಡಲಾಗಿದೆ.

ಹೆಚ್. ಪಿ. ಶಾಸ್ತ್ರಿ

ವೇದ ಎಂದೊಡನೆ ಪ್ರತಿ ಭಾರತೀಯನಲ್ಲಿ ಅತಿಯಾದ ಭಯ-ಭಕ್ತಿಯ ಭಾವನೆ ಹುಟ್ಟುತ್ತದೆ. ಅದನ್ನು ಓದುವವನು ತೀರಾ ಅತಿಶಯವಾದವನ್ನು ಮತ್ತು ಅದನ್ನು ಅರ್ಥಮಾಡಿಕೊಂಡವನಂತೂ ಸಾಕ್ಷಾತ್ ಪರಶಿವ ಮತ್ತು ಮಹಾವಿಷ್ಣುವಿನ ಅವತಾರವೇ. ಮೈಮನಗಳ ಪರಿಶುದ್ಧತೆ, ವೇದಾಧ್ಯಯನಕ್ಕೆ ಬೇಕಾದ ಪೂರ್ವಭಾವಿ ಸಿದ್ಧತೆ. ಇದು ಮಂತ್ರಗಳ ಸಹಾಯದಿಂದ ಅಸಾಧ್ಯವಾದದ್ದನ್ನೆಲ್ಲ ಸಾಧ್ಯವಾಗಿಸುವ ಶಕ್ತಿಯನ್ನು ಕೊಡುತ್ತದೆ.... ನಾನು ಇಲ್ಲಿ ಮಂತ್ರ ಹೇಳಿದರೆ ಸಾಕು ದೆಹಲಿಯಲ್ಲಿರುವ ನನ್ನ ಶತ್ರು ಹೇಳಹೆಸರಿಲ್ಲದಂತಾಗುತ್ತಾನೆ. ವೈದಿಕ ಮಂತ್ರಗಳಿಂದ ಬಂಜೆ ಫಲವತೆಯಾಗುತ್ತಾಳೆ. ರೋಗ ಮಂಗ್ಗಮಾಯವಾಗುತ್ತದೆ. ಕಡು ಬಡವ ಶ್ರೀಮಂತನಾಗುತ್ತಾನೆ, ಕೊನೆಯುಸಿರೆಳೆಯುತ್ತಿರುವವನಿಗೆ ನವಜೀವನ ಬಂದುಬಿಡುತ್ತದೆ. ಇದಕ್ಕೇನು ಪುರಾವೆ ಎಂದು ಕೇಳಿದರೆ, ವೇದದಲ್ಲಿ ಹೇಳಿದೆ ಎಂದು ಹೇಳಿದರೆ ಸಾಕು ಯಾರೂ ಚಕಾರವೆತ್ತುವುದಿಲ್ಲ. ವೇದ ಒಂದು ಪವಾಡ, ಅದು ಮಾಡದ ಪವಾಡವೇ ಇಲ್ಲ. ಅದು ನಿಗೂಢವಾದದ್ದು, ಅಗ್ರಾಹ್ಯವಾದದ್ದು ...ವಿದ್ಯಾದೇವತೆಯ ಕೃಪೆಯಿಲ್ಲದೆ ಹಾಗೂ ಪೂರ್ವಜನ್ಮದ ಪುಣ್ಯ ಸಂಚಯವಿಲ್ಲದೆ ವೇದಗಳ ಬಳಿ ಸುಳಿಯಲೂ ಸಾಧ್ಯವಿಲ್ಲ. ಇವೆಲ್ಲಾ ಕೇವಲ ಅಜ್ಞಾನಿಗಳು ವಿಚಾರ ಮಾಡುವ ರೀತಿ.

ಆದರೆ, ವೇದ ಎಂದರೇನು ? ಇದು ಹಲವಾರು ಪ್ರತಿಭಾವಂತ ಕವಿಗಳು ವಿವಿಧ ಉದ್ದೇಶಗಳಿಗಾಗಿ, ವಿಭಿನ್ನ ಪರಿಸ್ಥಿತಿಗಳಲ್ಲಿ, ಬೇರೆ ಬೇರೆ ಕಾಲಗಳಲ್ಲಿ ರಚಿಸಿದ ಕವನ, ಹಾಡು ಮುಂತಾದವುಗಳ ಒಂದು ಸಂಕಲನವಲ್ಲದೆ ಬೇರೇನಲ್ಲ. ಕೇವಲ ವ್ಯಕ್ತಿಗೋಸ್ಕರವಾಗಿಯೋ ಸಂಸ್ಕೃತ ಭಾಷೆಯ ಬಗ್ಗೆ ಉದ್ದುದ್ದ ಮಾತನಾಡುವ ಮತ್ತು ವೇದವನ್ನು ಓದುವ ಗೊಡವೆಗೂ ಹೋಗದೆ ಅದು ಬ್ರಹ್ಮದೇವನಿಂದ ರಚಿತವಾಯಿತೆಂದು ತಿಳಿದುಕೊಂಡಿರುವವರು ಈ ವಿವರಣೆಯನ್ನು ಕೈಬಿಡಬಹುದು. ನಿಜವಾಗಿ ಹೇಳಬೇಕೆಂದರೆ ವೇದ, ಅನೇಕ ಪ್ರತಿಭಾವಂತ ಕವಿಗಳ ಕವನ ಮತ್ತು ಹಾಡುಗಳ ಸಂಕಲನವಾದ ಪಾಲ್ ಗ್ರೇವ್‌ನ ‘ಗೋಲ್ಡನ್ ಟ್ರಷರಿ’ ಯಂಥ ಒಂದು ಸಾಹಿತ್ಯ ಕೃತಿ... ಕೇವಲ ಒಂದು ಕವನ ಸಂಕಲನವಾದ ವೇದಕ್ಕೆ ಧರ್ಮದ ಮೇಲೆ ಇಂಥ ಅಗಾಧವಾದ ಪ್ರಭಾವವನ್ನು ಹೊಂದುವುದು ಹೇಗೆ ಸಾಧ್ಯವಾಯಿತು ? ನೂರಾರು ವರ್ಷಗಳಿಂದ ವೇದದ ಬಗ್ಗೆ ಬೆಳೆದು ಬಂದಿರುವ ಈ ಗೌರವಕ್ಕೆ ಕಾರಣವೇನು ?


ವೇದದ ಅತಿ ಪ್ರಾಚೀನತೆ ಇದರ ಪ್ರಮುಖ ಕಾರಣಗಳಲ್ಲೊಂದು. ವಿಶ್ವದ ಎಲ್ಲ ಕೃತಿಗಳಿಗಿಂತಲೂ ವೇದ ಖಂಡಿತವಾಗಿಯೂ ಪ್ರಾಚೀನವಾದದ್ದು. ಅಷ್ಟೇ ಅಲ್ಲದೆ ವೇದಕಾಲದ ಬಗ್ಗೆ ಮಾಹಿತಿ ಬೇಕಾದಲ್ಲಿ ಆಧರಿಸಲು ವೇದವನ್ನುಳಿದು ಬೇರೆ ಯಾವ ಮೂಲವೂ ಇಲ್ಲ... ಸುಮಾರು ಮೂರು ಸಾವಿರ ವರ್ಷಗಳ ನಂತರ ಗೋಲ್ಡನ್ ಟ್ರಷರಿ ಒಂದನ್ನು ಬಿಟ್ಟು, ಇಂಗ್ಲೀಷ್‌ನವರು ಬರೆದ ಎಲ್ಲ ಪುಸ್ತಕಗಳೂ ನಾಶವಾದ ಪರಿಸ್ಥಿತಿಯನ್ನು ಊಹಿಸಿಕೊಳ್ಳಿ. ಅಂಥ ಪರಿಸ್ಥಿತಿ
ಗೋಲ್ಡನ್ ಟ್ರಷರಿಗೆ ಇಂತಹುದೇ ಪ್ರಾಮು
ದೊರೆಯುವ ಸಾಧ್ಯತೆ ಇದೆ. ಆಗ ಅದೊ
ಇಂಗ್ಲೀಷರ ಯೋಚನೆಗಳು, ಸಾಹಿತ್ಯಕ ಸಾಮ
ಮತ್ತು ಸಾಮಾಜಿಕ ಪದ್ಧತಿಗಳ ಬಗ್ಗೆ ನ
ತಿಳಿಸಬಲ್ಲದು.

ಚರಿತ್ರಕಾರರು ಮತ್ತು ಪ್ರಾಚ್ಯ ಸಂಶೋಧ
ವೇದದ ಅತಿ ಪ್ರಾಚೀನತೆ ಮತ್ತು ಅದರ ಚ
ತ್ರಿಕ ಮೌಲ್ಯದ ಬಗ್ಗೆ ಕೇಂದ್ರೀಕರಿಸುತ್ತಾ
ಕವಿಯ ದೃಷ್ಟಿಯಿಂದ ನೋಡಿದರೆ ವೇದದೊ
ಹೋಲಿಸಬಲ್ಲಂಥ ಕೃತಿ ಪ್ರಪಂಚದಲ್ಲೆಲ್ಲೂ
ವೇದ ಹೋಮರಿಯನ್ ರೀತಿಯ ಮಹಾಕಾ
ವಲ್ಲ. ಆದರೆ ವೇದದ ಪ್ರತಿಯೊಂದು ಸೂಕ
ತನ್ನದೇ ಆದ ರೀತಿಯಲ್ಲಿ ಮಹಾಕಾವ್ಯ. ಮಾ
ಜನಾಂಗ ಇನ್ನೂ ಬಾಲ್ಯಾವಸ್ಥೆಯಲ್ಲಿತ್ತು. ಹಾ
ಅದನ್ನು ಇಂದು ಮನುಷ್ಯ ಬಾಹ್ಯ ಪ್ರಪಂ
ಮೇಲೆ ಹೊಂದಿರುವ ಅಪರಿಮಿತ ಶಕ್ತಿಯೊ
ಹೋಲಿಸಲಾಗುವುದಿಲ್ಲ.

ಈ ಹಂತದಲ್ಲಿ ಬೆಂಕಿ, ಗಾಳಿ, ಗುಡುಗು,ಮೋ
ಮಿಂಚು, ಬಿರುಗಾಳಿ ಎಲ್ಲವೂ ಪ್ರತ್ಯಕ್ಷ ದೇವರ
ಕಾಣುತ್ತಿದ್ದವು. ಇವುಗಳ ಹಿಂದಿರುವ ಅಧಿದೇ
ತೆಯ ಕಲ್ಪನೆಗೆ ಬರಲು ಉನ್ನತಮಟ್ಟ
ಅಮೂರ್ತ ಚಿಂತನೆ ಅವಶ್ಯಕವಾಗಿತ್ತು. ಬಾಲ
ವಸ್ಥೆಯಲ್ಲಿದ್ದ ಮಾನವ ಜನಾಂಗ ಇದನ್ನಿನ
ಬೆಳೆಸಿಕೊಳ್ಳಬೇಕಾಗಿತ್ತು. ಅವರು ಎಲ್ಲವನ
ಮಗುವಿನಂತೆ ಮುಗ್ಧವಾಗಿ ನೋಡುತ್ತಿದ್ದ
ಮತ್ತು ಎಲ್ಲವನ್ನೂ ರಂಗು-ರಂಗಾಗಿ ಚಿತ್ರಿಸು
ದ್ದರು. ಅವರದ್ದು ಕವಿಯ ಕಣ್ಣು....ಅವ
ಕೇವಲ ತಮ್ಮ ಹೃದಯಾಂತರಾಳವನ್ನು ಗಾಬ
ಹೆದರಿಕೆಗಳನ್ನು, ಶಂಕೆಗಳನ್ನು, ನಿರೀಕ್ಷೆಗಳನ
ಮತ್ತು ಬಯಕೆಗಳನ್ನು ವ್ಯಕ್ತಪಡಿಸುತ್ತಿದ್ದರ
ಇವುಗಳನ್ನೆಲ್ಲಾ ಅವರು ಹೇಗೆ ಅಭಿವ್ಯಕ್ತಿಗೊಳಿಸ
ತ್ತಿದ್ದರು ? ಈ ಅಭಿವ್ಯಕ್ತಿಯಲ್ಲಿ ಯಾವುದ
ಜಾಣ್ಮೆ, ಗಹನ ಚಿಂತನೆ ಅಥವಾ ಶ್ರಮ ಕಾಣು
ದಿಲ್ಲ. ಯಾವುದೇ ಭಯ ಭೀತಿಯ ಅನುಭವವಾ
ಗಲೀ ಕೂಡಲೇ ಅದು ಅವರ ಇಡೀ ಅಂತರಂ
ವನ್ನು ಆವರಿಸುತ್ತಿತ್ತು ಮತ್ತು ಅದನ್ನು ಅವರ
ತಕ್ಷಣವೇ ಭಾಷೆಯ ಮೂಲಕ ಅಭಿವ್ಯಕ್ತಿಗೊಳಿಸ
ತ್ತಿದ್ದರು, ಅವರ ಭಾವನೆಗಳಂತೆಯೇ ಅವರ ಭಾ
ಸಹ ಸ್ಪಷ್ಟ, ಸರಳ ಮತ್ತು ಉದಾತ್ತವಾಗಿತ್ತು
ಅದರಲ್ಲಿ ಅಲಂಕಾರದ ಹೊರೆಯಾಗಲೀ, ಏನನಾ
ದರೂ ಮುಚ್ಚಿಡುವ ತವಕವಾಗಲೀ, ಒಳ್ಳೆಯ

ಜಾತಿ ಸೋಲಿಸಿದ ಪ್ರೀತಿಯ ಮನುಷ್ಯ: ಡಾ. ಸಂಜೀವಯ್ಯ

ವ್ಯಕ್ತಿ ಚಿತ್ರ



ನೋಡುವವರ ಕಣ್ಣಿಗೆ ಹಬ್ಬವನ್ನುಂಟು ಮಾಡಬಲ್ಲ ಮಾನಸಗಂಗೋತ್ರಿಯ ಸ್ನಾತ್ತಕೋತ್ತರ ವಿದ್ಯಾರ್ಥಿನಿಲಯ ಶ್ರೀಮಂತ ವಿದ್ಯಾರ್ಥಿಗಳು ಮತ್ತು ಬಡದಲಿತ ವಿದ್ಯಾರ್ಥಿಗಳಿಗೆ ನೆರಳಾಗಿ ಜಾತಿಯ ದುರ್ನಾತವನ್ನು ತುಂಬಿಕೊಂಡು ಉಸಿರುಕಟ್ಟಿ ನಿಂತಿದೆ.

ಇಂತಹ ನಿಲಯಕ್ಕೆ ಪಾಲಕರಾಗಿ (ವಾರ್ಡನ್) ನೇಮಕವಾಗಬೇಕಾದರೇ ಮತ್ತು ಸ್ವಲ್ಪ ದಿನಗಳಾದರೂ ಉಳಿಯಬೇಕಾದರೇ, ಎರಡು ಪ್ರಬಲ ಅರ್ಹತೆಗಳಿರಬೇಕು. ಮೊದಲನೆಯದಾಗಿ ಆತ ಅಸಾಮಾನ್ಯ ಗೂಂಡಾ ಮತ್ತು ಭ್ರಷ್ಟನಾಗಿರಬೇಕಾದದ್ದು, ಮತ್ತೊಂದು ಪ್ರಬಲಕೋಮಿಗೆ ಸೇರಿದವನಾಗಿರಬೇಕಾದದ್ದು. ಆದರೆ ನಾಲ್ಕುವರೆ ವರ್ಷಗಳನ್ನು ನಿರಾಯಸವಾಗಿ ಕಳೆದು ಯಾವುದೇ ಕೋಮುಗಲಭೆಗಳಿಗೂ ಅವಕಾಶವೀಯದೇ ವಿದ್ಯಾರ್ಥಿಗಳ ಮಧ್ಯೆ ಸಾಮರಸ್ಯವನ್ನು ತಂದುಕೊಟ್ಟ ನಾನು ಮೇಲೆ ಹೇಳಿದ ಆ ಎರಡು ಅರ್ಹತೆಗಳನ್ನು ಹೊಂದಿಲ್ಲದ ಸರಳವ್ಯಕ್ತಿ, ಮಾನಸಗಂಗೋತ್ರಿಯ ಗಾಂಧಿವಾದಿ ಡಾ|| ಹೆಚ್. ಸಂಜೀವಯ್ಯನವರು.

ಈ ವ್ಯಕ್ತಿಯ ಸರಳತೆ, ನಡೆನುಡಿ ಎಂತಹವರನ್ನು ಬೆರಗುಗೊಳಿಸುತ್ತದೆ. ಭೌತಶಾಸ್ತ್ರ ವಿಭಾಗದಲ್ಲಿ ರೀಡರ್ ಆಗಿ ಕೆಲಸ ಮಾಡುತ್ತಿರುವ ಇವರಿಗೆ ನಿಲಯದ ವಿದ್ಯಾರ್ಥಿಗಳು ಒಂದು ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಿದ್ದರು. ಸಮಾರಂಭದ ನಂತರ ಜಾತಿಜಿಡ್ಡಿನ ಸವರ್ಣಿಯ ವಿದ್ಯಾರ್ಥಿಯೊಬ್ಬನನ್ನು ಭೇಟಿಮಾಡಿ ಸಂಜೀವಯ್ಯನವರ ಬಗ್ಗೆ ಕೇಳಿದೆ. 'ಸಂಜೀವಯ್ಯನವರು ತುಂಬಾ ಒಳ್ಳೆಯವರು ಅವರೇ ವಾರ್ಡನ್ ಆಗಿ ಮುಂದುವರಿಯಬೇಕಿತ್ತು' ಎಂದ. ದಲಿತ ವಿದ್ಯಾರ್ಥಿಗಳಂತೂ ತಂದೆ ಕಳೆದುಕೊಂಡ ತಬ್ಬಲಿಗಳೇನೋ ಎನ್ನುವಂತೆ ತೋರುತ್ತಿದ್ದರು. ಕರ್ಮಚಾರ ವರ್ಗದವರ ಕಣ್ಣುಗಳಲ್ಲಂತು ಕಂಬನಿ ಮಿಡಿಯುತ್ತಿತ್ತು.

ಪ್ರಬಲಕೋಮಿಗೂ ಸೇರದ, ಗೂಂಡಾನೂ ಅಲ್ಲದ ಸಂಜೀವಯ್ಯನವರನ್ನು ಇವರೆಲ್ಲ ಏಕೆ ಇಷ್ಟೊಂದು ಹಚ್ಚಿಕೊಂಡಿದ್ದಾರೆ ? ಎಂಬುದೇ ನನಗೆ ಅರ್ಥವಾಗಲಿಲ್ಲ. ಏನಾದರಾಗಲೀ ಅವರನ್ನೇ ಭೇಟಿಯಾಗಿ ಅವರ ನಾಲ್ಕುವರೆ ವರ್ಷದ ಅಧಿಕಾರವಧಿಯ ಅನುಭವವನ್ನು ಕೇಳಲೇಬೇಕು ಎನ್ನಿಸಿ ಗೆಳೆಯ ಪುಟ್ಟಸ್ವಾಮಿಯ ಜೊತೆ ಪಂಚಮದ ಸಲುವಾಗಿ ಮಾತುಕತೆಗೆ ಹೋದಾಗ ''ನೋಡಿ ನನ್ನ ಸಂದರ್ಶನ ಮಾಡಿ ನನ್ನ ದೊಡ್ಡವನು ಅನ್ನಿಸೊದಾದರೆ ಬೇಡ'' ಎಂದರು. ''ಆ ಉದ್ದೇಶ ನಮಗಿಲ್ಲ'' ಎನ್ನುತ್ತಾ ಅವರೊಡನೆ ಮಾತನಾಡಿದೆವು.

''ನೋಡಿ ಸಾರ್ ವಾರ್ಡನ್‌ಗಿರಿ ಅನ್ನೋದೇ ಒಂದು ಲಾಭದಾಯಕವಾದ ಹುದ್ದೆ. ನಿಲಯ ಪಾಲಕರಾಗುವ ನಿಮ್ಮ ಉದ್ದೇಶ ಏನಾಗಿತ್ತು ?'' ಎಂದೆ. ''ನೋಡಿ ಸಾಮಾನ್ಯವಾಗಿ ಈ ನಿಲಯದ ಪಾಲಕರಾಗೋಕೆ ಎಲ್ಲರೂ ಸಾಮಾನ್ಯವಾಗಿ ಹಿಂಜರಿಯುತ್ತಾರೆ. 'ಗಾಂಧೀವಾದಿ' ಎಂದು ನನ್ನನ್ನು ಸ್ವಲ್ಪ ಗುರುತಿಸುತ್ತಿದ್ದ ಕಾಲ. ಕೆಲವು ವಿದ್ಯಾರ್ಥಿ ಮಿತ್ರರೆ ಇದಕ್ಕೆ ನಿಜವಾಗಲೂ ಕಾರಣ. ಪ್ರಾಮಾಣಿಕತೆಯಿಂದ ನಿಬಾಯಿಸೋದು ಎಷ್ಟು ಕಷ್ಟ ? ಎಂದು ಚಾಲೆಂಜ್ ಆಗೇ ತೆಗೆದುಕೊಂಡೆ' ಎಂದರು. 'ಹಾಸ್ಟೆಲ್ ವಾರ್ಡನ್‌ಗಿರಿ ಕಠಿಣವಾದ ಕೆಲಸ. ಅಲ್ಲಿ ಜಾತಿಗುಂಪುಗಳು, ರಾಜಕೀಯ ಶಕ್ತಿಗಳು ಇರ್ತವೆ ಎಂದು ಬಹಳ ಜನ ಹೇಳ್ತಾ ಇದ್ದರು. ಆದರೂ ನಾನು ಎಲ್ಲ ವರ್ಗದ ವಿದ್ಯಾರ್ಥಿಗಳ ವಿಶ್ವಾಸವನ್ನು ಗಳಿಸಿಕೊಂಡೆ' ಎಂದರು. 'ಅದು ಹೇಗೆ ಸಾಧ್ಯವಾಯಿತು ?' ಎಂದಾಗ, ಸಹಜವಾಗಿ ನಾನು ಎಲ್ಲ ವಿಷಯಗಳಲ್ಲೂ ನಿಸ್ಪಕ್ಷಪಾತವಾಗಿದ್ದದ್ದು, ಸಹಿಸಿಕೊಳ್ಳುವುದು, ಯಾವುದೇ ಗುಂಪಿನ ಪರವಾಗಿ ಗುರುತಿಸಿಕೊಳ್ಳದೆ ಇದ್ದದ್ದು' ಎಂದರು.

ನಿಮ್ಮ ಕೆಲಸ ಕಾರ್ಯದ ಮಧ್ಯೆ 'ಜಾತಿ' ಅಡ್ಡ ಬರಲಿಲ್ಲವೆ ? ಎಂದಾಗ 'ಇಲ್ಲ' ಏಕೆಂದರೆ ನನಗೆ ಜಾತಿ ಎಂಬುದಿಲ್ಲ. ನನ್ನ ಭಯಂಕರ ಬಡತನವೇ ನನ್ನನ್ನ ಜಾತಿಬಿಡಿಸಿತು. ಹಾಗಾಗಿ ನನಗೆ ಯಾವುದೇ ಜಾತಿಯ ಬಗ್ಗೆಯೂ ದ್ವೇಷ ಇರಲಿಲ್ಲ. ನಾನು ದ್ವೇಷಿಸುತ್ತಲೂ ಇರುತ್ತಿರಲಿಲ್ಲ. ಅಕಾಡೆಮಿಕ್ ದೃಷ್ಟಿಯಿಂದ ನಾನು ಬ್ರಾಹ್ಮಣರನ್ನು ಕುರಿತು ಕೆಲವು ಸಲ ಕಟುವಾಗಿ ಮಾತಾಡಬಹುದು. ಏಕೆಂದರೆ ಬ್ರಾಹ್ಮಣರು ಸಂಖ್ಯೆಯಲ್ಲಿ ಕಡಿಮೆಯಿದ್ದರೂ, ನಾನವರನ್ನು ದುರ್ಬಲರು ಎಂದು ತಿಳಿದುಕೊಳ್ಳುವುದಿಲ್ಲ. ಅದೇ ರೀತಿ ಒಕ್ಕಲಿಗರು, ಲಿಂಗಾಯಿತರು

'ವಾರ್ಡನ್ ಆದ ಮೇಲೆ ನೀವು ಒಮ್ಮೆಯೂ ಭ್ರಷ್ಟಾಚಾರಕ್ಕಾಗಿ ಪ್ರಯತ್ನ ಪಡಲಿಲ್ಲ ಎಂದು ಎಷ್ಟು ಪ್ರಾಮಾಣಿಕವಾಗಿ ಹೇಳುತ್ತೀರಿ ? ಎಂದಾಗ ಸಂಜೀವಯ್ಯ ಗಂಭೀರವಾಗಿ ಹೇಳಿದರು. ''ಕೆಲವು ಸಲ ಭ್ರಷ್ಟಾಚಾರ ಹೇಗೆ ಮಾಡುತ್ತಾರೆ ? ಎಂಬ ತಾಂತ್ರಿಕತೆ ನನಗೆ ತಿಳಿಯಿತೇ ವಿನಃ ನಾನು ಅದಕ್ಕೆ ಕೈಹಾಕಲಿಲ್ಲ. ನನ್ನ ವೈಯಕ್ತಿಕ ಜೀವನವನ್ನೇ ತೆಗೆದುಕೊಳ್ಳಿ. ನನಗೆ ಬೇಕಾದಷ್ಟು ಸಾಲವಿದೆ. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಒಡವೆಗಳನ್ನು ಅಡವಿಟ್ಟಿದ್ದೇನೆ. ನಾನು ಸರಳ ಜೀವನವನ್ನೇ ಬಯಸೋದರಿಂದ ನನ್ನ ಮಕ್ಕಳಿಗೂ ಅದನ್ನೇ ಹೇಳಿಕೊಟ್ಟಿದ್ದೇನೆ. ಆದ್ದರಿಂದ ಭ್ರಷ್ಟಾಚಾರದ ಅಗತ್ಯವೇ ನನಗೆ ಬರಲಿಲ್ಲ'' ಎಂದರು.

ಹಾಸ್ಟೆಲ್‌ನ ವಿದ್ಯಾರ್ಥಿಗಳಲ್ಲಿ ಜೀವಂತವಾಗಿರುವ ಜಾತಿ ಮತ್ತು ಅದರಿಂದ ಆಗಬಹುದಾದ ಗಲಭೆಗಳನ್ನು ಕುರಿತು ಮಾತಾಡಿದಾಗ....ಸಂಜೀವಯ್ಯ ಹೇಳುತ್ತಾರೆ. ''ವಾಸ್ತವಿಕವಾಗಿ ನನ್ನ ಅನುಭವಕ್ಕೆ ಬಂದಂತೆ ಜಾತಿಯಲ್ಲಿ ಮೇಲು ಕೀಳು ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. ಯಾರೋ ಕೆಲವು ವಿದ್ಯಾರ್ಥಿಗಳು ಭ್ರಷ್ಟಾಚಾರ ನೋಡಿಯೋ. ರಾಜಕೀಯ ಮಾಡಿಯೋ ಮೇಲೆ ಬರಲು ಯತ್ನಿಸುತ್ತಾರೆ. ಸಮಾಜದ ಕೆಳಸ್ತರದಿಂದ ಬಂದವರಿಗೆ ಇದನ್ನು ನೋಡಿದಾಗ ಸ್ವಲ್ಪ ನೋವು ದುಃಖವುಂಟಾಗುತ್ತದೆ. ಹಳ್ಳಿ-ನಗರ, ಹಣವಂತ-ಬಡವ ಅನ್ನೋದು ವಿದ್ಯಾರ್ಥಿಗಳ ಮಧ್ಯೆಯಿರುತ್ತದೆ.

ಗ್ರಾಮಗಳಿಂದ ಬಂದು ನಗರಗಳಲ್ಲಿ, ಶ್ರೀಮಂತ ವಿದ್ಯಾರ್ಥಿಗಳ ಮಧ್ಯೆ ಬಾಳಬೇಕಾದ ವಿದ್ಯಾರ್ಥಿಗಳು ಅನೇಕ ಮಾನಸಿಕ ಹಿಂಸೆಗೆ ಗುರಿಯಾಗಲೇಬೇಕಾಗುತ್ತದೆ. ಗಾರೆನೆಲದ ಮೇಲೆ ನಡೆಯ್ಯೋದು ಪಾಪಅವರಿಗೆಕಷ್ಟವಾಗುತ್ತದೆ. ಸ್ವಲ್ಪಹೆಚ್ಚುಕಡಿಮೆಯಾದರೂ ಮೇಲ್ವರ್ಗದ ವಿದ್ಯಾರ್ಥಿಗಳೇ ಅನುಸರಿಸಿಕೊಂಡು ಹೋಗಬೇಕು. ವಿದ್ಯಾರ್ಥಿಗಳ ವರ್ತನೆಯ ಬಗ್ಗೆ ನನಗೆ ಬಂದ ಅನುಭವದ ಪ್ರಕಾರ ಮೇಲ್ಜಾತಿ ವಿದ್ಯಾರ್ಥಿಗಳೇ ತಪ್ಪು ಮಾಡುತ್ತಾರೆ ಎನ್ನುದರಲ್ಲಿ ಎರಡಿಲ್ಲ. ದಲಿತ ವಿದ್ಯಾರ್ಥಿಗಳ

ಮತ್ತು ಕೆಟ್ಟ ಅಭಿರುಚಿಗಳ ನಡುವೆ ಬೇಧವೆಣಿಸುವ ಪ್ರಯತ್ನವಾಗಲೀ, ಇತರರನ್ನು ಮೆಚ್ಚಿಸುವ ಉದ್ದೇಶಕ್ಕಾಗಿ ಯಾವುದೇ ಜಾಣ್ಮೆಯ ಪ್ರದರ್ಶನವಾಗಲಿ ಇಲ್ಲ....ನೋಡಿದ್ದೆಲ್ಲಾ ಅವರಿಗೆ ಅದ್ಭುತ, ಅಗಾಧ, ಮತ್ತು ಹೊಸದು ಎನಿಸುತ್ತಿತ್ತು. ಇಂದು ಹಿಮಾಲಯ ನಮ್ಮನ್ನು ಬೆರಗುಗೊಳಿಸುವುದಕ್ಕಿಂತ ನೂರುಪಟ್ಟು ಒಂದು ಪುಟ್ಟ ಗುಡ್ಡ ಅವರನ್ನು ವಿಸ್ಮಯಗೊಳಿಸುತ್ತಿತ್ತು. ಸಾಮಾಜಿಕ ವ್ಯವಸ್ಥೆಯಲ್ಲಿ ಗೊಂದಲ ಉಂಟಾಗುತ್ತದೆ ಎಂಬುದಕ್ಕಾಗಿ ನಾವು ಹಲವು ಬಾರಿ ನಮ್ಮ ಅನಿಸಿಕೆಗಳನ್ನು, ವ್ಯಕ್ತಪಡಿಸಲಿಚ್ಛಿಸುವುದಿಲ್ಲ. ಆದರೆ ಈ ಕವಿಗಳು ಇದೇ ಭಾವನೆಗಳನ್ನು ಅತಿಯಾಗಿ ಉತ್ಪ್ರೇಕ್ಷೆ ಮಾಡಿ, ಸರಳವಾದ ಭಾಷೆಯಲ್ಲಿ ವ್ಯಕ್ತಪಡಿಸುತ್ತಿದ್ದರು. ಅವರು ಕವಿಗಳು, ಏಕೆಂದರೆ, ಕವಿಗಳ ಹೃದಯದ ಸಾರ್ವತ್ರಿಕ ಲಕ್ಷಣವಾದ ಬೆರಗಿನ ಪ್ರಜ್ಞೆ ಅವರಲ್ಲಿತ್ತು. ಆದರೂ ಅವರಿಗೆ ಹೋಲಿಸಿದರೆ ನಮ್ಮ ಇಂದಿನ ಕವಿಗಳು ಒಣವ್ಯವಹಾರಸ್ಥರು,

ಇದೇನೇ ಇರಲಿ ವೇದವನ್ನು ಎಲ್ಲಕ್ಕಿಂತ ಹೆಚ್ಚಾಗಿ ಧಾರ್ಮಿಕ ಗ್ರಂಥವಾಗಿ ಪರಿಗಣಿಸಲಾಗಿದೆ. ಸಾವಿರಾರು ವರ್ಷಗಳಿಂದ ಲಕ್ಷಾಂತರ ಜನ ಇದನ್ನು ಪೂಜಿಸುತ್ತಿರುವುದು ಏಕೆ? ಕ್ರಮೇಣ ಕೆಲವು ಹಾಡು ಹಾಗೂ ಕವನಗಳು ಶಾಸ್ತ್ರಗಳ ಸ್ಥಾನಮಾನವನ್ನು ಗಳಿಸಿದ್ದಾದರೂ ಹೇಗೆ? ಜನ ಇವುಗಳನ್ನೆಲ್ಲಾ ಕಲ್ಪಿಸಿಕೊಳ್ಳುವಷ್ಟು ಮೂರ್ಖರಾಗಿದ್ದರು ಎಂದು ಸೂಚಿಸುವುದು ತಪ್ಪಾಗುತ್ತದೆ. ನಿಜ ಹೇಳಬೇಕೆಂದರೆ ಈ ಪ್ರತಿಕ್ರಿಯೆ ಕೆಲವು ಮುಖ್ಯವಾದ ಮನೋವೈಜ್ಞಾನಿಕ ಸತ್ಯಗಳನ್ನು ಸೂಚಿಸುತ್ತದೆ. ಈ ಹಾಡುಗಳನ್ನು ರಚಿಸಿದ್ದರು. ಯಾವುದೋ ದಿವ್ಯಶಕ್ತಿಯ ಸಹಾಯದಿಂದ ತಮ್ಮಿಂದ ಈ ರಚನೆ ಸಾಧ್ಯವಾಯಿತು ಎಂದು ನಂಬಿದ್ದರು. ಅವರ ಜೊತೆಗಾರರೂ ಕೂಡ ಈ ಕ್ರಿಯೆಯ ಹಿಂದೆ ದೈವಿಕ ಸ್ಫೂರ್ತಿ ಇದೆ ಎಂದು ನಂಬಿದ್ದರು. ನೀವೊಬ್ಬರು ಕವಿ ಹಾಗೂ ನಾನು ಕವಿಯಲ್ಲ ಮತ್ತು ನಾವಿಬ್ಬರೂ ಒಟ್ಟಿಗೆ ವಾಸಿಸುತ್ತಿದ್ದೇವೆಂದು ಭಾವಿಸಿಕೊಳ್ಳೋಣ. ತೀಕ್ಷ್ಣ ಕಲ್ಪನೆಯುಳ್ಳ ನಿಮಗೆ ಎಲ್ಲವೂ ಸೌಂದರ್ಯಪೂರ್ಣವಾಗಿ ಕಾಣುತ್ತದೆ. ಆದರೆ ಕವಿಯಲ್ಲದ ನನಗೆ ಭೂಮಿ ಕೇವಲ ಭೂಮಿಯಾಗಿಯೂ, ಆಕಾಶ ಕೇವಲ ಆಕಾಶವಾಗಿಯೂ ಕಾಣುತ್ತದೆ. ಇದೇ ನಮ್ಮಿಬ್ಬರಿಗೂ ಇರುವ ಅಂತರ. ಈ ಅಂತರಕ್ಕೆ ಕಾರಣ ನಮ್ಮ ವಿಭಿನ್ನ ಮಾನಸಿಕ ಪರಿಸ್ಥಿತಿಗಳು ಎಂಬುದು ಇಂದು ನಮಗೆ ತಿಳಿದಿದೆ. ಆದರೆ ಅಂದಿನ ಜನರಿಗೆ ಇದು ಗೊತ್ತಿರಲಿಲ್ಲ. ತನಗೆ ಸಾಮಾನ್ಯವಾಗಿ ಅನುಭವಿಸಲಾಗದ ಒಂದು ವಿಚಿತ್ರ ಆಂತರಿಕ ಕ್ಷೋಭೆಯನ್ನು ಕವಿ ಹಾಡುವಾಗ ಅನುಭವಿಸುತ್ತಾನೆ ಎಂಬ ಅಂಶವನ್ನು ಮಾತ್ರ ಅವರು ಗಮನಿಸಿದ್ದರು, ಹಾಗಾದರೆ ಈ ಕ್ಷೋಭೆಗೆ ಕಾರಣವೇನು? ಎಲ್ಲೆಡೆಯಲ್ಲೂ ದೇವರನ್ನು ಕಾಣುತ್ತಿದ್ದ ಕವಿ ಇದರಲ್ಲೂ ದೇವರ ಲೀಲೆಯನ್ನು ಗುರುತಿಸಿದ. ಆದ್ದರಿಂದ ಅವನು "ದೇವರೇ ಇವನ್ನೆಲ್ಲಾ ನನ್ನಿಂದ ಮಾಡಿಸಿದ್ದು" ಎನ್ನುತ್ತಾನೆ. ಉಳಿದವರು ಅಚ್ಚರಿಗೊಳ್ಳುತ್ತಾರೆ: ನಮ್ಮಿಂದ ಮಾಡಲಾಗದ್ದನ್ನು ಅವನು ಮಾಡಬಲ್ಲ. ಆದ್ದರಿಂದ ಅವನಿಗೆ ದೈವಸಹಾಯ ಇರಬೇಕು ಅಂದುಕೊಳ್ಳುತ್ತಾರೆ....ಕಾಲಕ್ರಮೇಣ ಅವುಗಳನ್ನು ರಚಿಸಿದ ಕವಿಗಳ ಹೆಸರು ಮರೆಯಾಗಿ, ಈ ಕವಿಗಳಿಗೆ ಸಹಕರಿಸಿದರೆಂದು ಕಲ್ಪಿಸಿಕೊಳ್ಳಲಾಗಿದ್ದ ದೇವತೆಗಳೇ ನಿಜವಾದ ಕರ್ತೃಗಳೆಂದು ಭಾವಿಸಲಾಯಿತು. ಇದರಿಂದಾಗಿಯೇ ಮಾಧವಾಚಾರ್ಯ 'ಋಷಿ' ಎಂಬ ಶಬ್ದ ಋಷ್ ಅಂದರೆ 'ನೋಡು' ಎಂಬ ಮೂಲಧಾತುವಿನಿಂದ ಹುಟ್ಟಿಕೊಂಡಿದೆ. ಹಾಗಾಗಿಯೇ ಋಷಿ ಎಂದರೆ 'ಮಂತ್ರಗಳ
ನೋಡುವವನು' " ಎಂದಿದ್ದಾನೆ. ಇದರಿ
ಗಿಯೇ ಕಾಳಿದಾಸನ 'ಮಂತ್ರಕೃತ್' (ಮಂ
ಳನ್ನು ರಚಿಸಿದವನು) ಎಂಬ ಪದಪ್ರಯೋಗದಿ
ಭವಭೂತಿ ಜಿಗುಪ್ಸೆಗೊಂಡನು. " 'ಮಂತ್ರಕೃ
ಎಂಬುದಕ್ಕೆ ಬದಲಾಗಿ 'ಮಂತ್ರ ದೃಶ್ಯ' (ಮಂ
ಗಳನ್ನು ನೋಡಿದವರು) ಎಂಬ ಪದವನ್ನು ಬ
ಬೇಕು, ಏಕೆಂದರೆ ಋಷಿಗಳು ಮಂತ್ರವನ್ನೆಂದ
ರಚಿಸಲಿಲ್ಲ. ಬದಲಾಗಿ ಅವುಗಳನ್ನು ನೋಡಿ
ರಷ್ಟೆ..." ಎನ್ನುತ್ತಾನೆ... ಕ್ರಮೇಣ ಬ್ರಾಹ್ಮ
ಧರ್ಮದಲ್ಲಿ ಏಕದೈವೋಪಾಸನ ಮೇಲ್ಮೆಯನ್ನ
ಪಡೆದಾಗ, ಪರಮಾತ್ಮನೇ ವೇದದ ಕರ್ತೃ ಎ
ಲಾಯಿತು; ದೇವರೇ ರಚಿಸಿದ್ದರಿಂದ ವೇದದ
ತಪ್ಪಿರಲು ಸಾಧ್ಯವಿಲ್ಲ, ಆದರಲ್ಲಿರುವುದೆಲ್ಲಾ ಸತ್ಯ
ಎಲ್ಲಾ ಪವಿತ್ರ, ಮತ್ತು ಅದು ಜ್ಞಾನಜ್ಯೋ
ಈ ರೀತಿ ಕವನಗಳ ಸಂಕಲನ ಶಾಸ್ತ್ರದ ಸ್ಥಾನಮಾ
ವನ್ನು ಪಡೆಯಿತು.

ವೇದದ ಕಾಲದ ಜನ, ಮುಚ್ಚುಮರೆಯಿಲ್ಲದ ತೀರಾ ಸರಳ ಸ್ವಭಾವದವರಾಗಿದ್ದರು. ಅವರ ಮಾನಸಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ನಮಗೆ ತುಂಬಾ ಕಷ್ಟ. ವೈದಿಕ ಪ್ರಪಂಚವನ್ನು ಕಲ್ಪಿಸಿಕೊಂಡಾಗ ನಮಗೆ ವೇದ ಹೆಚ್ಚು ಸ್ಪಷ್ಟವಾಗಿ ಅರ್ಥವಾಗುತ್ತದೆ, ನಾವು ಅಂದಿನ ರಾಜಕೀಯ ಮತ್ತು ಇತರ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಬೇಕು. ಆದರೆ ಅದು ಅಷ್ಟು ಸುಲಭವಲ್ಲ. ಇದಕ್ಕೆ ಪ್ರಾಚೀನ ಜಗತ್ತಿನ ಬಗ್ಗೆ ಮತ್ತು ಪ್ರಾಚೀನ ಜನತೆ ಮಾನಸಿಕ ಸ್ಥಿತಿಯ ಬಗ್ಗೆ ಹೆಚ್ಚು ಅರ್ಥಮಾಡಿಕೊಳ್ಳಬೇಕು. ಕೇವಲ ಭಾರತದ ಚರಿತ್ರೆಯನ್ನು ಮಾತ್ರವಲ್ಲ, ಆರ್ಯರು ಕಾಲಿಟ್ಟ ಪ್ರಾಚೀನ ಪ್ರಪಂಚದ ಚರಿತ್ರೆಯನ್ನೆಲ್ಲಾ ತಿಳಿದುಕೊಳ್ಳಬೇಕು.

(ಸಂಗ್ರಹ)

—ಟಿ. ಎಸ್. ವೇಣುಗೋಪಾಲ್ ಮತ್ತು ಶೈಲ

ಇತಿಹಾಸದ ಗೆರೆಗಳು

• ಡಿ. ಹೊಸಳ್ಳಿ ಶಿವು

ಭೂತಾಯಿ ಮಡಿಲಿಂದ
ಮೊಳೆತ ಬೀಜವಾಗಿ ಹೊರ ಬಿದ್ದಾಗ
ಕುಡಿಯಲು ಅವ್ವನ ಎದೆಯಾಗೆ
ಇರಲಿಲ್ಲ ಹಾಲು
ಸೂರಿನ ಕಿಂಡಿಗಳ ನಡುವೆ
ಆಕಾಶ ದಿಟ್ಟಿಸಿದೆ
ಮೋಡಗಳಲ್ಲಿ ಹನಿ ಬೀಳುವ
ಸೂಚನೆ ಕಂಡು ಬರಲಿಲ್ಲ.
ತ್ರಾಣ ನೀಗಲು ಸುತ್ತಲೂ ಕಣ್ಣಾಡಿಸಿದೆ :

ಕಗ್ಗತ್ತಲೆಯ ಲೋಕದೊಳಗೆ
ನಿಶಕ್ತರಾಗಿ ನಿಂತಿದ್ದ ಕಲ್ಲು ದೇವತೆಗಳು !
'ಕಾಯಕವೇ ಕೈಲಾಸ'
'ದುಡಿಮೆಯೇ ದೇವರು'–ಎಂದ
ಜನರ ಗುಡಿಸಲುಗಳು
ದುಡಿಸಿಕೊಂಡವರ ಮಹಲುಗಳು
ಗೊಮ್ಮಟನಷ್ಟೇ ಸತ್ಯವಾಗಿ ನಿಂತಿದ್ದವು !
ಪ್ರಶ್ನಾರ್ಥವಾಗಿ ಅವ್ವನ ಮುಖ ನೋಡಿದೆ ಅಲ್ಲಿ;
ಇತಿಹಾಸದುದ್ದಕ್ಕೂ ಬರೆ ಹಾಕಿದ್ದ ಗೆರೆಗಳು
ಎದ್ದು ಕಂಡವು ದಪ್ಪನಾಗಿ

ನಾನು ನನ್ನವ್ವ ಹೆತ್ತ ತಪ್ಪಿಗಾಗಿ
ಕೂತ ಮಹಲಿನಿಂದ ಹೊರಬಿದ್ದ ಶಾಸನವ
ಅಪ್ಪನ ನೇಗಿಲಲ್ಲಿ ಸಾಲು ಸಾಲಾಗಿ ಬರೆದೆ
ನನ್ನವ್ವನ ಮುಖದ ಗೆರೆಗಳ ಅಳಿಸಲೆಂದು
ಗುದ್ದಲಿ ಹಾರೆ ಪಿಕಾಸಿಗಳೆಲ್ಲ ಬರೆದರೂ
ಮತ್ತದೇ ಗೆರೆಗಳು ದಪ್ಪನಾಗಿ
ಪರಂಪರೆಯಾಗಿ ಗೋಚರಗೊಂಡಾಗ
ಉರಿಯುತಿದ್ದ ಸೂರ್ಯ ಕಪ್ಪಾದಂತೆ
ನಗುತಿದ್ದ ಆಕಾಶ ಕೆಂಪಾದಂತೆ ಕಂಡವು.

ವರ್ತನೆಯ ಬಗ್ಗೆ ಇದುವರೆವಿಗೂ ಯಾವುದೇ ಕಂಪ್ಲೇಂಟ್ ಕೂಡ ಬಂದಿಲ್ಲ. ನಾಗರೀಕವಾಗಿ, ಸ್ವಚ್ಛವಾಗಿ, ಮಾನವೀಯವಾಗಿ ವರ್ತಿಸುವವರೇ ದಲಿತ ವಿದ್ಯಾರ್ಥಿಗಳು. ಶ್ರೀಮಂತ ವಿದ್ಯಾರ್ಥಿಗಳೇ ಎಲ್ಲಕ್ಕೂ ಕಾರಣ ಎನ್ನುವ ಸಂಜೀವಯ್ಯನವರ ಮಾತಿನಲ್ಲಿ ಆರ್ಥಿಕ ಸಮಾನತೆಯ ತುಡಿತ ಎದ್ದು ಕಾಣುತ್ತಿತ್ತು.

ಕೆಲವು ತಿಂಗಳ ಹಿಂದಷ್ಟೇ ದಲಿತ ವಿದ್ಯಾರ್ಥಿಗಳ ಮೇಲೆ ರೊಚ್ಚಿಗೆದ್ದ ಸವರ್ಣಿಯ ವಿದ್ಯಾರ್ಥಿಗಳು ಮೆಸ್‌ಗೆ ಬೀಗ ಜಡಿದ ಪ್ರಕರಣವನ್ನು ಸಂಜೀವಯ್ಯನವರೊಡನೆ ಪ್ರಸ್ತಾಪಿಸಿದಾಗ....

"ಹೊರಗಿನ ಶಕ್ತಿಗಳೇ, ರಾಜಕೀಯ ಶಕ್ತಿಗಳೇ ತಮ್ಮ ಬೇಳೆ ಬೇಯಿಸಿಕೊಳ್ಳಲು ಮಾಡುವ ಹಗರಣಗಳಿವು ಎನ್ನುತ್ತಾರೆ. ವೈಯುಕ್ತಿಕ ದ್ವೇಷಗಳೇ ಕ್ರಮೇಣ ಜಾತಿ ಗಲಭೆಗಳಾಗಿ ಮಾರ್ಪಾಡಾಗುತ್ತವೆ" ಎಂದು ಸಂಜೀವಯ್ಯ ಹಲವಾರು ಜೀವಂತ ನಿದರ್ಶನಗಳನ್ನೇ ನಮ್ಮ ಮುಂದಿಟ್ಟರು.

"ಸವರ್ಣೀಯವಿದ್ಯಾರ್ಥಿಗಳು ಬೀಗ ಜಡಿದಬಗ್ಗೆ ದಲಿತವಿದ್ಯಾರ್ಥಿಗಳು ನಿಜವಾಗಲೂ ಆಕ್ರೋಶರಾಗಿದ್ದರು. ಈ ಮಧ್ಯೆ ನಾನು ನಿಷ್ಪಕ್ಷಪಾತವಾಗಿ ವರ್ತಿಸಿದೆ. ಎಲ್ಲಕ್ಕಿಂತಮುಖ್ಯವಾಗಿ ದಲಿತಸಂಘರ್ಷ ಸಮಿತಿಯ ಮಧ್ಯೆ ಪ್ರವೇಶದಿಂದಾಗಿ ದಲಿತ ವಿದ್ಯಾರ್ಥಿಗಳು ತಮಗೆ ತೊಂದರೆಯಾದರೂ ತಾಳ್ಮೆಯಿಂದ ವರ್ತಿಸಿದರು. ನಮ್ಮೊಡನೆ ಸಹಕರಿಸಿದರು. ಮನುಷ್ಯರಾಗಿ" ವರ್ತಿಸಿದರು ಅದಕ್ಕಾಗಿ ಅವರ ಬಗ್ಗೆ ನನಗೆ ಗೌರವವಿದೆ. ದಲಿತ ವಿದ್ಯಾರ್ಥಿಗಳ ವರ್ತನೆ ನೋಡಿ ಸವರ್ಣೀಯ ವಿದ್ಯಾರ್ಥಿಗಳು ತಾವು ಮಾಡಿದ್ದು ತಪ್ಪು ಎಂದು ತಿಳಿದುಕೊಂಡರು.

ದಲಿತವಿದ್ಯಾರ್ಥಿಗಳನ್ನು ಬೆಂಬಲಿಸಬೇಕಾದದ್ದು ಪ್ರತಿಯೊಬ್ಬರ ಕರ್ತವ್ಯ ಕೂಡ. ಹಾಸ್ಟೆಲ್ ಮೆಸ್‌ಗೆ ಬೀಗ ಜಡಿದಾಗ ನಾನು ಅವರಿಗೆ ಹಣ ನೀಡುತ್ತಿದ್ದೆ. ಅದು ಅವರ ಸ್ಕಾಲರ್‌ಷಿಪ್ ಹಣವೇ ಹೊರತು ನನ್ನ ಜೇಬಿನಿಂದ ನಾನು ಕೊಟ್ಟಿಲ್ಲ. ಕೆಲವು ಸವರ್ಣೀಯ ವಿದ್ಯಾರ್ಥಿಗಳು ಈ ಕ್ರಮವನ್ನು ವಿರೋಧಿಸಿದರೂ, ನಾನು ಇಲ್ಲಿ ಕರ್ತವ್ಯ ವಿಮುಖನಾಗಲೇ ಇಲ್ಲ ಎಂದರು.

'ಸವರ್ಣಿಯವಿದ್ಯಾರ್ಥಿಗಳೇಕೆ ದಲಿತವಿದ್ಯಾರ್ಥಿಗಳನ್ನು ದ್ವೇಷಿಸುತ್ತಾರೆ' ? ಎಂಬ ನನ್ನ ಪ್ರಶ್ನೆಗೆ ಸಂಜೀವಯ್ಯ ಅವರು 'ನಿಜ' ಏಕೆಂದರೇ ನಾವು ದುಡ್ಡು ಖರ್ಚು ಮಾಡಿ ಓದಿದರೂ ನಮಗೆ ಕೆಲಸ ಸಿಗೋಲ್ಲ, ದಲಿತರಿಗೆ ಸಿಗುತ್ತೆ ಎಂಬ ಒಂದು ತಪ್ಪು ಅಭಿಪ್ರಾಯವನ್ನು ಬೆಳೆಸಿಕೊಂಡಿದ್ದಾರೆ. ವಾಸ್ತವವಾಗಿ ದಲಿತರಿಗೆ ಸಿಗಬೇಕಾದ್ದು ಸಿಗುತ್ತಿಲ್ಲ ಎಂದ ಸಂಜೀವಯ್ಯ ನಮ್ಮ ವಿಶ್ವವಿದ್ಯಾನಿಲಯವನ್ನೆ ನೋಡಿ 'ಮೀಸಲಾತಿ' ಎಷ್ಟರಮಟ್ಟಿಗಿದೆ ಎಂದು ನಮಗೆ ತಿಳಿಯುತ್ತದೆ, ಮೀಸಲಾತಿ ಸೌಲಭ್ಯ ಎಲ್ಲ ಜಾತಿಯವರಿಗೂ ಒಂದಲ್ಲಒಂದು ರೀತಿ ಇದೆ. ಆದರೆ ಎಲ್ಲರೂ ದಲಿತರನ್ನೆ ಬೊಟ್ಟು ಮಾಡಿ ತೋರಿಸುವುದು ದುರಂತ, ಆ ದೃಷ್ಟಿಯಲ್ಲಿ ದಲಿತರಿಗೆ ಕೇವಲ 18ರಷ್ಟಲ್ಲ ಶೇಕಡಾ 80ರಷ್ಟಾದರೂ ಮೀಸಲಾತಿ ಬೇಕು ? ಎಂದ ಸಂಜೀವಯ್ಯನವರು ಒಂದು ಕಾಲದಲ್ಲಿ ಮೇಲ್ವರ್ಗದ ಬ್ರಾಹ್ಮಣರೇ ಆಳುವ ವರ್ಗದಲ್ಲಿ ಶೇಕಡಾ 80 ಭಾಗವಿರಲಿಲ್ಲವೆ ? ಹಾಗಿದ್ದ ಮೇಲೆ ಹಸಿವು ನೋವುಗಳನ್ನುಂಡ ದಲಿರೇಕೆ ಆಗಬಾರದು ? ಎಂದು ಸಂಜೀವಯ್ಯ ತಮ್ಮ ವಾದವನ್ನು ಸಮರ್ಥಿಸಿಕೊಂಡರು.

ದಲಿತ ವಿದ್ಯಾರ್ಥಿಗಳಿಗೆ ಶೇಕಡಾ ನೂರಕ್ಕೆ ನೂರರಷ್ಟು ಹಾಸ್ಟೆಲ್‌ಗಳಲ್ಲಿ ಸೀಟು ಸಿಗದಿದ್ದರೆ ಖಂಡಿತವಾಗಿಯೂ ಅವರು ಈ ವಾತಾವರಣದಲ್ಲಿ ಓದುವುದು ಸಾಧ್ಯತೆಯಿಲ್ಲ. ಆದ್ದರಿಂದ ದಲಿತ ವಿದ್ಯಾರ್ಥಿಗಳಿಗೆ ಸೀಟುಕೊಡುವುದರಲ್ಲಿ ನಾನು ಸ್ವಲ್ಪ ಉದಾರವಾದವನ್ನೆ ಅನುಸರಿಸುತ್ತಿದ್ದೆ ಎನ್ನುತ್ತಾರೆ ಸಂಜೀವಯ್ಯ. ಅದಲ್ಲದೆ ತಿಂದ ಅನ್ನಕ್ಕೆ ಹಣ ಕಟ್ಟುವುದರಲ್ಲೂ ದಲಿತ ವಿದ್ಯಾರ್ಥಿಯ ಒಂದೇ ಒಂದು ಚಿಕ್ಕಾಸು ಬಾಕಿಯಿಲ್ಲ ಎಂದ ಮೇಲೆ ಸೀಟು ಯಾರಿಗೆ ಸಿಗಬೇಕು ? ಹೇಳಿ ಎನ್ನುತ್ತಾರೆ. ದಲಿತ ವಿದ್ಯಾರ್ಥಿಗಳ ವರ್ತನೆಯ ಬಗ್ಗೆ ಮತ್ತೊಮ್ಮೆ ಕೇಳಿದಾಗ "ಜಾತಿಯ ಹೆಸರಿಡಿದು ಚುಚ್ಚು ಮಾತುಗಳನ್ನಾಡಿದಾಗ ವಿದ್ಯಾರ್ಥಿಗಳು ಸುಮ್ಮನಿರಬೇಕೆಂದರೆ ಅದರ ಅರ್ಥವೇನು ? 'ಕೆಳಜಾತಿ ಚಳುವಳಿಯೊಂದೇ ಇದಕ್ಕೆ ಮದ್ದು' ಆದರೆ ಅದು ಅಹಿಂಸಾತ್ಮಕವಾಗಿರಬೇಕು, ಹಿಂಸಾತ್ಮಕ ಚಳುವಳಿಯಿಂದ ಜಾತಿ ವಿಮೋಚನೆ ಸಾಧ್ಯವಿಲ್ಲ ಎಂದು ನನ್ನ ನಂಬಿಕೆ, ಜೊತೆಗೆ ಅಂತರಜಾತಿ ವಿವಾಹವನ್ನು ಪ್ರಸ್ತಾಪಿಸಿ ಅದಕ್ಕೆ ತಮ್ಮ ಸ್ವಂತ ಉದಾಹರಣೆ ಕೊಟ್ಟು ನನ್ನಮಕ್ಕಳಿಗೆ 'No Caste, No Religion' ಎಂದೆ ಬರೆಸಿದ್ದೇನೆ. ನನಗೇನೂ ಅದರಿಂದ ತೊಂದರೆಯಾಗಿಲ್ಲ. ಪ್ರತಿಯೊಬ್ಬರು ಅಂತರಜಾತಿ ವಿವಾಹವಾದರೆ ಜಾತೀಯ ಬೇರು ಸಡಿಲವಾಗಿ ಒಂದಿಲ್ಲೊಂದು ದಿನ ಸತ್ತೆ ಸಾಯುತ್ತದೆ' ಎಂದು ದೃಢವಾಗಿ ಹೇಳುತ್ತಾರೆ ಡಾ|| ಸಂಜೀವಯ್ಯ.

ಹೆಚ್. ಎಸ್. ರಾಜೇಂದ್ರಸಿಂಗ್

(9ನೇ ಪುಟದಿಂದ)

ಸ್ಯರು ತಮಾಷೆಯದೆಂದು ಮರೆತುಬಿಡಲು ಸಿದ್ಧರಿರಬಹುದು. ಇದೊಂದು ಅಪಮಾನಕರ ಘಟನೆಯೆಂದು ಅತ್ತು ಮರೆತುಬಿಡಲು ನಾನು ಸಿದ್ಧಳಿಲ್ಲ. 'ಯತ್ರ ನಾರ್ಯಸ್ತು...." ಎಂದು ಹೇಳುವ ಇದೇ ಸಂಸ್ಕೃತಿ ಸ್ತ್ರೀಯರನ್ನು ಗುಲಾಮಳನ್ನಾಗಿಸಿದೆ, ಸ್ತ್ರೀಗೆ ಎರಡನೇ ದರ್ಜೆಯ ಸ್ಥಾನವನ್ನು ನೀಡಿದೆ. ಸ್ತ್ರೀಯನ್ನು ಪುರುಷರ ಕೈಯಲ್ಲಿರುವ ಭೋಗವಸ್ತುವೆಂದು ಪರಿಗಣಿಸಿದೆ".

"ಜನತೆಯ ಪ್ರತಿನಿಧಿಯಾದ ನಾನು ಸದನದಲ್ಲಿ ನನ್ನ ಕ್ಷೇತ್ರದ ಸಾವಿರಾರು ಜನರ ಪುನರ್ವಸತಿಯಂಥ ಅತ್ಯಂತ ಗಂಭೀರ ವಿಷಯವನ್ನು ಪ್ರಸ್ತಾಪಿಸುತ್ತಿದ್ದಾಗ ಸದಸ್ಯರು ಅಶ್ಲೀಲ ಭಾಷೆಯನ್ನು ಬಳಸಿ ತಮ್ಮ ಹೀನ ನಡವಳಿಕೆಯನ್ನು ತೋರ್ಪಡಿಸಿದ್ದಾರೆ. ಹಾಗಾಗಿ ಇದೊಂದು ಅತ್ಯಂತ ನಾಚಿಕೆಗೇಡಿನ ವಿಷಯವಾಗಿ ಹೋಗಿದೆ. ಸದಸ್ಯರ ಈ ನಡವಳಿಕೆ ಅವರ ಬೇಜವಾಬ್ದಾರಿಯನ್ನೂ ಸಹ ಬಹಿರಂಗಗೊಳಿಸುತ್ತದೆ ; ಪುರುಷ ವರ್ಗದ ಸಾಮಂತಶಾಹಿ ಮನೋಭಾವವನ್ನೇ ಸದನದ ಸದಸ್ಯರು ವ್ಯಕ್ತಪಡಿಸಿದ್ದಾರೆ. ದಾಸಿ–ದೇವದಾಸಿ–ಕಾಲ್‌ಗರ್ಲ್–ವೇಶ್ಯೆಯ ರೂಪದಲ್ಲಿ ಹಾಗೂ ನಾಲ್ಕು ಗೋಡೆಗಳೊಳಗೆ ತಾಯಿ–ಸಹೋದರಿ–ಮಗಳು-ಪತ್ನಿಯ ರೂಪದಲ್ಲಿ ಸ್ತ್ರೀ ಎಂದಿನಿಂದಲೂ ಮಾನಸಿಕ ಹಿಂಸೆಗೆ ಗುರಿಯಾಗುತ್ತಾ ಬಂದಿದ್ದಾಳೆ. 'ನ ಸ್ತ್ರೀ....' ಎಂದು ಉಪದೇಶಿಸಿದ್ದ ಮನಸ್ಸೇ ಇಂದು ರಸ್ತೆಗಳಲ್ಲಿ, ಸಭೆಗಳಲ್ಲಿ, ಸದನಗಳಲ್ಲಿ ಸ್ತ್ರೀಯನ್ನು ಅಪಮಾನಿಸುತ್ತಿದೆ".

"ಸದನದಲ್ಲಿ ಅಂದು ನಡೆದ ಘಟನೆಯಲ್ಲಿ ಅಶ್ಲೀಲತೆಯ ಜೊತೆಗೇ ಅತ್ಯಾಚಾರದ ದುರ್ಗಂಧವೂ ಸಹ ಕೂಡಿದೆ; ಈ ದುರ್ಗಂಧವನ್ನು ಸದನದ ವರದಿಗಾರರು ಮಾಡಿಕೊಳ್ಳಲಾರರು. ಅಂದಿನ ಪ್ರಕರಣವನ್ನು ತಮಾಷೆಯದೆಂದು ಗಣಿಸಿ ಮೇಜು ಗುದ್ದಿ ಗಹಗಹಿಸಿ ನಗುತ್ತಿದ್ದ ಸದಸ್ಯರಲ್ಲಿ ಮದೋನ್ಮತ್ತತೆ ಹಾಗೂ ಕಾಮುಕತೆಗಳು ಹೊರಸೂಸುತ್ತಿದ್ದವೆಂಬುದರ ಅನುಭವ ನಿಮಗೂ ಸಹ ಆಗುವಂಥದ್ದಲ್ಲ ; ಯಾಕೆಂದರೆ ನೀವು ಹೆಣ್ಣಲ್ಲ".

"ಸದನವನ್ನು ರಾಜ್ಯದ ಜನತೆಯ ಹಿತಚಿಂತನೆ ಬಳಸಿಕೊಳ್ಳಬೇಕೆಂಬ ಸದುದ್ದೇಶ ಇರುವುದೇ ನಿಜವಾದಲ್ಲಿ, ಸದಸ್ಯರು ಕುತ್ಸಿತ ಭಾವನೆಯನ್ನು ತ್ಯಜಿಸಿ ಆತ್ಮಶೋಧನೆ ಮಾಡಿಕೊಳ್ಳಬೇಕು. ತಮ್ಮ ವರ್ಗ ಸಂಸ್ಕಾರ—ಕುತ್ಸಿತ ಮನೋವಿಕಾರಿ–ಲಂಪಟತನಗಳನ್ನು ಮೆರೆಸುವ ಶಾಸಕರಿಂದ ಸದನದ ಘನತೆ–ರಾಜ್ಯದ ಘನತೆಗಳಿಗಿರಲಿ, ಪ್ರಜಾಪ್ರಭುತ್ವದ ಘನತೆಗೇ ಕಳಂಕ ಉಂಟಾಗುತ್ತದೆ. ಸದನವೇ ಪ್ರಜಾಪ್ರಭುತ್ವದ ಕೊಲೆಯ ಸ್ಥಾನವಾಗದಂತೆ ನೋಡಿಕೊಳ್ಳುವುದು ಪರಮ ಕರ್ತವ್ಯವಾಗಬೇಕಾಗಿದೆ. ತನ್ನ ಸದಸ್ಯರ ವರ್ತನೆಯನ್ನೇ ನಿಗ್ರಹಿಸದ ಪರಿವರ್ತಿಸದ ಸದನವು ರಾಜ್ಯದ ಜನತೆಯನ್ನು ಹೇಗೆ ಪರಿವರ್ತಿಸಬಲ್ಲದು ?"

"ಸದನದ ಸದಸ್ಯರಿಗೆ ಸೂಕ್ತ ಬೋಧನೆ ಮಾಡಿ ಸದನದ ಗಾಂಭೀರ್ಯವನ್ನು ಕಾಪಾಡದೇ ಹೋದರೆ ಜನತೆಯ ಘನತೆಗೂ ಸಹ ಸಂಬಂಧವಿರುವ ಇಂಥ ವಿಷಯಗಳನ್ನು ಜನತೆಯ ಮಧ್ಯೆ ಕೊಂಡೊಯ್ಯಬೇಕಾಗುತ್ತದೆ ; ಸಾರ್ವಜನಿಕ ಅಭಿಪ್ರಾಯ ಮೂಡಿಸಬೇಕಾಗುತ್ತದೆ".

(ಅಶೋಕ್ ಸೆಕ್ಸೇರಿಯಾ ಅವರ ಬರಹವೊಂದರಿಂದ)

ಪ್ರೀತಿಯ ದಲಿತ ವಿದ್ಯಾರ್ಥಿಗಳಿಗೆ

ಈ ವರೆಗೆ ಸವರ್ಣೀಯ ವಿದ್ಯಾರ್ಥಿಗಳಿಂದ ದಲಿತ ವಿದ್ಯಾರ್ಥಿಗಳು ಹೊಡೆಸಿಕೊಳ್ಳುವಂಥ ಇತಿಹಾಸವನ್ನು ಇಟ್ಟುಕೊಂಡಿದ್ದ ಮೈಸೂರು ನಗರ ಕಳೆದ ವರ್ಷದಿಂದ ಸವರ್ಣೀಯ ವಿದ್ಯಾರ್ಥಿಗಳಿಗೆ ದಲಿತ ವಿದ್ಯಾರ್ಥಿಗಳು ತಿರುಗಿ ಹೊಡೆಯುವ ಹೊಸ ಇತಿಹಾಸವನ್ನು ಕಾಣತೊಡಗಿದೆ. ದಲಿತ ವಿದ್ಯಾರ್ಥಿಗಳ ಒಗ್ಗಟ್ಟಿನಿಂದ ಆಗಿರುವ ಇಂಥ ಬದಲಾವಣೆ ಸ್ವಾಭಾವಿಕವಾದರೂ ಸಹ ಯಾರೂ ಯಾರನ್ನೂ ಹೊಡೆಯದಂಥ ಮಾನವೀಯ ಇತಿಹಾಸ ಸೃಷ್ಟಿಯ ಜವಾಬ್ದಾರಿ ಹೊತ್ತಿರುವ ದಲಿತ ವಿದ್ಯಾರ್ಥಿಗಳ ಇಂಥ ವರ್ತನೆಗೆ ನೊಂದು ಮುಳ್ಳೂರು ನಾಗರಾಜ್ ಇಲ್ಲಿ ಬರೆಯುತ್ತಾರೆ........

ಪ್ರೀತಿಯ ಸ್ನೇಹಿತರೆ,

ದಲಿತ ವಿದ್ಯಾರ್ಥಿಗಳಾದ ನಿಮ್ಮಲ್ಲಿ ನಿಮ್ಮ ಸ್ನೇಹಿತನಾಗಿ ನನ್ನ ಮನವಿ ಇದು. ಕಳೆದ ವಾರ ಮೈಸೂರು ಒಂದು ಸಣ್ಣ ಜಾತಿ ಗಲಭೆ ಕಂಡಿದೆ. ಮಹಾರಾಜಾ ಕಾಲೇಜು ನಿಮ್ಮ ಕೋಪದಿಂದ ತಲ್ಲಣಿಸಿದೆ. ಮನುಷ್ಯನಾದವನ ಪ್ರೀತಿ, ಕೋಪ, ದ್ವೇಷ, ಮತ್ಸರಗಳಂಥ ಸಹಜ ಭಾವನೆಗಳು ಕೂಡ ಜಾತಿಗ್ರಸ್ತವಾಗಿವೆ. ನಮ್ಮ ಪ್ರತಿಯೊಂದು ಚಲನೆ ಕೂಡಾ ಜಾತಿ ವೃತ್ತದಾಚೆಗೆ ಹೋಗದೆ ಸತ್ತುಬಿಟ್ಟಿದೆ. ನಿಮಗೆ ನಾನು ಹೇಳುತ್ತಿರುವುದು ಅರ್ಥವಾಗುತ್ತದೆಂಬ ನಂಬಿಕೆಯೊಂದಿಗೆ ನಾನು ಬರೆಯುತ್ತಿರುವೆ ಮತ್ತು ನಿಮ್ಮ ಆಲೋಚನೆಗಳನ್ನು ಜೀವಂತಗೊಳಿಸುವುದು, ಅಲ್ಲದೆ ನಿಮಗಿರುವ ಗಾಢವಾದ ಸಿಟ್ಟನ್ನು ಜಾತಿವಿರುದ್ಧವಾದ ತಾತ್ವಿಕ ಆಕ್ರೋಶವಾಗಿ ಬದಲಾಯಿಸುವುದು ಈ ಪತ್ರದ ಉದ್ದೇಶ.

ನಾನು ಅಹಿಂಸೆಯ ಪ್ರವಾದಿ ಅಲ್ಲ. ಯಾಕೆಂದರೆ ಗಾಂಧಿಯವರ ಅಹಿಂಸೆಯು ಅವರ ಶತ್ರುಗಳನ್ನು ಅಹಿಂಸಾವರರನ್ನಾಗಿಸಲಿಲ್ಲ. ನಿಮ್ಮಲ್ಲಿ ಚರಿತ್ರೆ ಓದಿರುವ ಕೆಲವರಿಗಾದರೂ ತಿಳಿಯುತ್ತಿದೆ ; ಜಗತ್ತಿನಲ್ಲಿ ಹಿಂಸೆಯಿಂದಲೂ ಅಹಿಂಸೆಯಿಂದಲೂ ಏಕರೀತಿಯ ಅನಾಹುತಗಳು ನಡೆದಿವೆ.

ನಡೆದ ಸಂಗತಿ ತುಂಬ ಸಣ್ಣದು. ಅಸ್ಪೃಶ್ಯ ಹುಡುಗನೊಬ್ಬನಿಗೆ ಮೇಲ್ಜಾತಿಯ ಹುಡುಗನೊಬ್ಬ ಹೊಡೆದ. ತನ್ನ ಜಾತಿಸಹಜವಾದ ಕ್ರೂರತನವನ್ನ ಶಮನಿಸಲು ಆತ ಕತ್ತಲೆಯಲ್ಲಿ ಗೊತ್ತಿಲ್ಲದೆ ಅಸ್ಪೃಶ್ಯತೆಯನ್ನು ಮೀರಿದ. ಕ್ರೂರ ಹಲ್ಲೆಯ ಮೂಲಕ ಆತ ಜಾತಿಕಟ್ಟುಗಳನ್ನು ಕಳಚಿದ. ನೀವು ಅವನಿಗೆ ತಿರುಗಿಸಿ ಹೊಡೆಯುವ ಮೂಲಕ ಅಸ್ಪೃಶ್ಯತೆಯನ್ನು ನಿರಾಕರಿಸಿದ್ದೀರಿ. ಅಂತು ಸ್ಪೃಶ್ಯರು ಅಸ್ಪೃಶ್ಯರು ಅಸ್ಪೃಶ್ಯತೆಯೊಡನೆ ಸ್ಪಂದಿಸುತ್ತಿದ್ದಾರೆ.

ನಾನು ಹೇಳುತ್ತಿರುವುದು ಇಷ್ಟೆ. ನಿಮ್ಮ ಹೊಡೆತ ಕೂಡಾ ತಾತ್ವಿಕವಾಗಿರಬೇಕು. ಅಸ್ಪೃಶ್ಯತೆಯ ನಿಮ್ಮ ನಿರಾಕರಣೆಯು ನಾವು ಕಾಣುತ್ತಿರುವ ಕರಾಳ ಜಾತಿವ್ಯವಸ್ಥೆ ಕುಸಿದು ಬೀಳುವಂತಿರಬೇಕು. ನಿಮ್ಮ ಸಿಟ್ಟು ಮತ್ತು ಅವಮಾನಗಳು ಈ ನಾಡಿನ ನಂಬಿಕೆಯ ಬುಡವನ್ನು ಅಲ್ಲಾಡಿಸುವಂತಿರಬೇಕು. ಅದಕ್ಕಾಗಿ ನೀವೇ ರೂಢಿಸಿಕೊಂಡಿರುವ ಸಾಂಪ್ರದಾಯಿಕ ನಂಬಿಕೆಗಳನ್ನು ಕಿತ್ತು ಬಿಸಾಡಬೇಕು.

ನೋಡಿ ನಿಮ್ಮ ಪೈಕಿ ಬಹುಮಂದಿ ಹಳ್ಳಿಗಳ ಮೂಲದಿಂದ ಬಂದವರು. ನಿಮ್ಮ ಆಧುನಿಕ ಉಡುಪುಗಳ ಒಳಗಡೆ ಸಾಂಪ್ರದಾಯಿಕ ಹೃದಯವಿದೆ. ಪುರಾತನ ಮೌಢ್ಯವಿದೆ. ಜಾತಿವ್ಯವಸ್ಥೆಯನ್ನು ಒಪ್ಪಿಕೊಳ್ಳುವ ದೌರ್ಬಲ್ಯಗಳಿವೆ. ಮೌಢ್ಯವೂ, ಕತ್ತಲೆಯೂ ಅದರೊಡನೆ ಇದ್ದಿರಬಹುದು. ಅಸ್ಪೃಶ್ಯತೆಯನ್ನು ಪ್ರತಿಭಟಿಸಲಾರದ ಅಸಹಾಯಕ ಮಾನಸಿಕ ಸ್ಥಿತಿಯಿದೆ. ಈ ನಿಮ್ಮ ಸ್ಥಿತಿಯನ್ನು ಬದಲಾಯಿಸದೆ ನೀವು ನಡೆಸುವ ಹಲ್ಲೆ ಮೇಲ್ನೋಟಕ್ಕೆ ಸ್ವಾಭಿಮಾನದ ಪ್ರದರ್ಶನದಂತೆ ಕಂಡರೂ, ಅದೊಂದು ತೀವ್ರವಾದ ಮಾನಸಿಕ ಪತನ.

ನೀವು ಪ್ರತಿಯೊಬ್ಬರು ಹೋರಾಟದ ಚೇತನವಾಗಿ ರೂಪುಗೊಳ್ಳುವಂಥ ವಿದ್ಯಾಭ್ಯಾಸ ನಿಮಗೆ ಸಿಗುತ್ತಿಲ್ಲವೆಂದು ಬಲ್ಲೆ. ನಿಮ್ಮನ್ನು ಹೇಡಿಗಳನ್ನಾಗಿ, ಜನವಿರೋಧಿ ಕ್ಲರ್ಕುಗಳನ್ನಾಗಿ, ಕಚಡಾ ಅಧಿಕಾರಿಗಳನ್ನಾಗಿ ಮಾಡಬಲ್ಲ ಯಾಂತ್ರಿಕ ವ್ಯವಸ್ಥೆಯ ಕೈಗೂಸುಗಳು ನೀವೆಂಬುದು ನಿಮಗೆ ಸೂಕ್ಷ್ಮವಾಗಿಯಾದರೂ ಗೊತ್ತಿರುವ ವಿಚಾರ. ಈ ನಾಡಿನ ಬಡವನ ರಕ್ತ ಹಿಂಡುತ್ತಿರುವ ಸೌಕರಶಾಹಿಯ ಒಂದಂಗವಾಗಿ ನೀವು ಎಲ್ಲೆಲ್ಲೋ ಚೆಲ್ಲಿಹೋಗುತ್ತೀರಿ. ಈ ವ್ಯವಸ್ಥೆಯ ನರಕದಲ್ಲಿ ನರರಾಕ್ಷಸರಾಗಿ ಅವತರಿಸಲಿರುವ ನೀವು ಅಸ್ಪೃಶ್ಯತೆಯ ವಿರುದ್ಧ ಸದಾ ಕಾಲ ಸಿಡಿವ ಚೇತನದ ಚಿಲುಮೆಯಾಗಲಾರಿರಿ. ಈ ವ್ಯವಸ್ಥೆಯನ್ನು ಒಪ್ಪಿಕೊಂಡು ಮಾನಸಿಕ ಆತ್ಮಹತ್ಯೆಗೆ ಬಲಿಯಾಗುತ್ತೀರಿ. ನಮ್ಮ ಮೊದಲ ತಲೆಮಾರಿನ ಇತಿಹಾಸವೆ ಇದಕ್ಕೆ ನಿದರ್ಶನ.

ನೀವು ಮರೆಯಬಾರದ ಸಂಗತಿಯೆಂದರೆ ನೀವು ಇತಿಹಾಸವನ್ನು ಬದಲಾಯಿಸುವ ನಿರ್ಣಾಯಕ ಸ್ಥಾನದಲ್ಲಿದ್ದೀರಿ. ಅಸ್ಪೃಶ್ಯ ಜನಾಂಗದ ಎಲ್ಲ ಕಾಲದ ಹಿತಚಿಂತನೆಯ ದಿಕ್ಕಲ್ಲಿ ನೀವು ಹೆಜ್ಜೆಯಿಡುವುದಾದರೆ ನೀವು ಆಕಾಶದಗಲ ಬೆಳೆಯಬಲ್ಲಿರಿ.

ಅದಕ್ಕಾಗಿ ನೀವು ದೇವರು ಧರ್ಮಗಳನ್ನು ಚರಂಡಿಗೆಸೆದು ಮಾನವ ಪ್ರೇಮಕ್ಕೆ ಜೀವ ಕೊಡುವವರಾಗಬೇಕು. ಎಲ್ಲ ಮೌಢ್ಯಗಳ ವಿರುದ್ಧ ನಿಮ್ಮ ಪ್ರತಿಭಟನೆಯ ಧ್ವನಿ ಮೊಳಗುವುದಾದರೆ ಸಮಾನತೆಯ ದಿನಗಳು ದೂರವಿಲ್ಲ. ನಮ್ಮ ಕನಸು ಮತ್ತು ಆಶಯಗಳು ಇಡೀ ಇಂಡಿಯಾ ಬದಲಾಗುವಂತೆ ಮಾಡುವ ಕಾಲ ಹತ್ತಿರವಾಗಬಹುದು.

ಪ್ರೀತಿಯಿಂದ

—ಮುಳ್ಳೂರು ನಾಗರಾಜು

---

7 ನೇ ಪುಟದಿಂದ

ಮಾತ್ರ ಜನತೆಗೆ ತೋರಿಸುತ್ತಾನೆ. ಈ ಕತೆಯಲ್ಲಿ ದಲಿತರ ಬಡವರ ಬದುಕಿಲ್ಲ ಎಂದು ತಿರಸ್ಕರಿಸಲು ಆಗುತ್ತದೆಯೆ ? ಈ ಕತೆಯಲ್ಲಿನ ಜೀವನ ಧೋರಣೆ ದಲಿತ ಪರವಲ್ಲವೆ !

ಕೊನೆಯದಾಗಿ : ದಲಿತ ಸಾಹಿತ್ಯ ಬಳಗವು ಬಂಡಾಯ ಸಾಹಿತ್ಯ ಸಂಘಟನೆಯಿಂದ ಪ್ರತ್ಯೇಕಗೊಳ್ಳದಂತಾ ಎಚ್ಚರಿಕೆಯಿಂದ ಕಾರ್ಯ ರೂಪಿಸಬೇಕಾಗಿದೆ. ದನಿ ಇಲ್ಲದೆ ಮಲಗಿರುವ ದಲಿತ ಬದುಕಲ್ಲಿ ದನಿಗಳನ್ನು ಗುರುತಿಸಲು ಆ ವಾತಾವರಣ ಉಂಟುಮಾಡಲು ದಲಿತ ವರ್ಗ ಕಲಾವಿದ ಬಳಗ ಕೆಲಸ ಮಾಡುವದಕ್ಕಾಗಿ ಇರುತ್ತದೆ ಅನ್ನುವುದಾದರೆ ಒಳ್ಳೆಯದು. ಇದರೊಟ್ಟಿಗೆ ನಮ್ಮ ಸಮಾಜ ಚಲನೆಗೊಳ್ಳಲು ಬಂಡಾಯ ಸಾಹಿತ್ಯ ಸಂಘಟನೆಯ ಅಗತ್ಯವನ್ನು ನಾವು ಮನಗಾಣಬೇಕು.

ಇದಲ್ಲದೆ, ಬಂಡಾಯವು ದಲಿತರಿಗೆ ಹತ್ತಿರದ ಕೈಗೆ ಸಿಗುವ ಸಂಘಟನೆಯಾಗಿರುವುದರಿಂದ ಲೆಫ್ಟ್ ಪ್ರವೃತ್ತಿ ದೆಸೆಯಿಂದಾಗಿ ದಲಿತವು ಬಂಡಾಯಕ್ಕೆ ಹೊಡೆದರೆ ಒಂದೇ ಏಟಿಗೆ ಎರಡು ಕಾಲು ಬೀಳುತ್ತವೆ. ಅದರಲ್ಲಿ ಒಂದು ಬಂಡಾಯದ್ದು, ಇನ್ನೊಂದು ದಲಿತರದ್ದು. ಆದ್ದರಿಂದ ನಮ್ಮ ಸಮಾಜ ಯಥಾ ಪ್ರಕಾರ ತೆವಳುತ್ತದೆ. ಈ ಎಚ್ಚರಿಕೆಯಿಂದ ನಡೆಯೋಣ ಎಂದು ನನ್ನ ಮಾತು ಮುಗಿಸುವೆ.

ಎಪ್ಪತ್ತರ ದಶಕದ ಡಾ|| ಅನಂತಮೂರ್ತಿ ಭ್ರಮೆಗಳು

ಪಂಚಮ-ದಲಿತರು ಮತ್ತು ರೈತ ಚಳವಳಿಯ ವಿಶೇಷ ಸಂಚಿಕೆಯಲ್ಲಿ ಕಾಣಿಸಿಕೊಂಡ ಅಂತರಾಷ್ಟ್ರೀಯ ಲೇಖಕ, ಡಾ. ಯು. ಆರ್. ಅನಂತಮೂರ್ತಿಯವರ 'ಎಪ್ಪತ್ತರ ದಶಕದ ಸಾಹಿತ್ಯ ಮತ್ತು ರಾಜಕೀಯದ ಬಗ್ಗೆ' ಕೆಲವು ಮಾತುಗಳನ್ನು ಇಲ್ಲಿ ಬರೆಯಲಾಗಿದೆ.

1. ಎಪ್ಪತ್ತರ ದಶಕದ ಕೊನೆ ಅನೇಕ ಭ್ರಮೆಗಳ ಕೊನೆ ಎಂದು ಅನಂತಮೂರ್ತಿ ಹೇಳ್ತಾರೆ.

(ಅ) ಭ್ರಮೆ ಎಂದರೆ ಏನು ? ಅವರು ಹೇಳಬಯಸುವುದಿಷ್ಟೆ, ಸೋವಿಯತ್ ಒಕ್ಕೂಟ ಅಥವಾ ಸೋವಿಯತ್ ನಾಡು (ರಷ್ಯಾ ಅಲ್ಲ), ಚೀನಾ ಮತ್ತು ಕ್ಯೂಬಾ ಮಾದರಿ ದೇಶಗಳಾಗಲಿಲ್ಲ ಎಂಬ ಆ ಕಳಕಳಿಯನ್ನು ಒಪ್ಪಿಕೊಳ್ಳೋಣ. ಆದರೂ ಅದನ್ನು ಭ್ರಮೆ ಎಂದು ಕರೆಯಬರುತ್ತದೆಯೇ ? ಹಾಗೆಂದಾಗ ಇಡೀ ಸಮಾಜವಾದೀ ಕಲ್ಪನೆಯೇ ಭ್ರಮೆ ಎಂದಾಗುತ್ತೆ ! ಆ ಬಗ್ಗೆ ಮಾತನಾಡುವುದು ಕೊನೆಗೆ ಅವರ ಭ್ರಮೆಯಾಗುತ್ತೆ !! ಭ್ರಮೆ ಎಂಬೋ ಮಾತು ಶಂಕರಾಚಾರ್ಯರ ಮಾಯೆ ಎಂಬ ಮಾತಿನ ಹಾಗೆ ಸದ್ದು ಮಾಡುತ್ತೆ !!!

ಸಮಾಜವಾದಿ ಕಲ್ಪನೆ ಭ್ರಮೆ ಅಲ್ಲ, ಅದೊಂದು ಸುಂದರ ಕನಸು : ಮಾನವ ಜನಾಂಗದ ಹುಟ್ಟಿನೊಂದಿಗೆ ಬಂದದ್ದೂ, ಅದರ ನರನಾಡೀಲೆಲ್ಲಾ ಹರೀತಿರೋ ಅಂತಾದ್ದೂ. ಸೋವಿಯತ್ ದೇಶದಲ್ಲಿ, ಚೀನಾದಲ್ಲಿ ಸಮಾಜವಾದ ಅರಳಲಿಲ್ಲ ಎಂಬುದು ಭ್ರಮೆಯೂ ಅಲ್ಲ, ಭ್ರಮನಿರಸನವೂ ಅಲ್ಲ, ಹೆಚ್ಚೆಂದರೆ ಅದೊಂದು ಭಗ್ನ ಕನಸು ಅಥವಾ ವಿಫಲ ಯತ್ನ.

(ಆ) ಲೆನಿನ್ ಸೋವಿಯತ್ ದೇಶ ಈಗ ಹೋಗುತ್ತಿರುವ ಜಾಡಿನಲ್ಲೇ ಮುಂದುವರಿದಲ್ಲಿ, ಅದು ಸಮಾಜವಾದೀಯ ಆಗೋದಿಲ್ಲ : ಬದಲಾಗಿ ಅಲ್ಲಿ ಸಮಾಜವಾದದ ಸಮಾಧಿ ಆಗುತ್ತೆ ; ಎಂದು ಪ್ರಥಮವಾಗಿ 1920 ರಲ್ಲೇ ಭಗ್ನ ಕನಸಿನ ದನಿ ಎತ್ತಿದವನು ಬರ್ಟ್ರಾಂಡ್ ರಸಲ್.

(ಇ) 'ತಾನು ನಡೆಸಿಕೊಂಡು ಹೋಗಬೇಕೆನ್ನುವ ದಿಕ್ಕಿನಲ್ಲಿ ಗಾಡಿ ಹೋಗುತ್ತಿಲ್ಲ ಎಂಬ ಅರಿವು ಚಾಲಕನಿಗೆ ಉಂಟಾಗಿದೆ' ಎಂದು ಲೆನಿನ್ ; 1921 ರಲ್ಲೇ ಪಕ್ಷದ ಬಹಿರಂಗ ಸಭೆಯಲ್ಲಿ ಆಡಿದ ಮಾತನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಅದೇ ಲೆನಿನ್ ಕಡೆಯ ಮಾತು. ಆನಂತರದ ಕೆಲವು ದಿನಗಳಲ್ಲಿ ಲೆನಿನ್‌ಗೆ ಲಕ್ವ ಬಡೀತು. ಒಬ್ಬ ರಾಜಕಾರಣಿ ಒಂದು ದೇಶದ ಅಧಿಕಾರ ಕೈಗೆ ತೆಗೆದುಕೊಂಡು ಜಗತ್ತನ್ನೇ ನಡುಗಿಸಿದ ವ್ಯಕ್ತಿ, ಆ ತರಹ ಮಾತಾ

ಪ್ರತಿಕ್ರಿಯೆ

ಡಿದ್ದು ಪ್ರಪಂಚದ ಇತಿಹಾಸದಲ್ಲೇ ಮೊದಲ ಘಟನೆ.

(ಈ) ಬರ್ನಾಡ್‌ಷಾನ 'ಸೇಂಟ್ ಜೋನ್', ಬ್ರೆಕ್ಟನ 'ಗೆಲಿಲಿಯೋ' 1930 ರ ಸಂಕ್ರಮಣಾವಸ್ಥೆಯ ಆವಿಗೆಯ ಹಬೆಯಲ್ಲಿ ಹುಟ್ಟಿಬಂದವು. ಆ ನಾಟಕಗಳಲ್ಲಿ ಚರ್ಚ್, ಸ್ಟಾಲೀನ್ ಪ್ರತೀಕ. ಇಂಗ್ಲಿಷ್ ಮೇಸ್ಟರುಗಳಿಗೆ ಸಾಮಾನ್ಯವಾಗಿ ಅರಿವಿರುವ ಸಂಗತಿ.

(ಉ) ಆನಂತರದಲ್ಲಿ ಆರ್ವೆಲ್, ಕೆಸ್ಲರ್ ಬಂದರು. ಐಸಾಕ್ ಡ್ಯೂಶ್ಚರ್ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯಾಗುತ್ತದೆ. God That fa led ಬಂತು. ಸಮಾಜವಾದಿ God...ಅವರಿಗೆ ಭ್ರಮೆಯಲ್ಲ, That failed ಅಷ್ಟೆ.

(ಊ) 1950 ರ ವೇಳೆಗೆ ಸೋವಿಯತ್ ದೇಶ ಮತ್ತು ಚೀನಾ ನಡುವೆ ಮಲಗಿದ್ದ ವಿವಾದ ಎದ್ದು ಕುಂತು ಬಣ್ಣ ಬಯಲಾಯಿತು. ಕಮ್ಯೂನಿಸಂ ಬಂದಾಗ ಇಡೀ ಜಗತ್ತು ಒಂದು ಕುಟುಂಬದಂತೆ, ಬದುಕುತ್ತೆ. ಸರ್ಕಾರ ಇಲ್ಲ. ಸೈನ್ಯ ಇರೋದಿಲ್ಲ. ಪೋಲೀಸರ ಹೆಸರಿಲ್ಲ ಎಂಬುದು ಮಾರ್ಕ್ಸ್‌ವಾದಿ

ಸುಚೇತನ ಸ್ವರೂಪ

ಗಳ ನಂಬಿಕೆ. ಆದರೆ ಸೋವಿಯತ್ ದೇಶ ಕಂಡರೆ ಚೀನಾಕ್ಕೆ ಆಗೋಲ್ಲ. ಚೀನಾ ಕಂಡರೆ ಸೋವಿಯತ್ ದೇಶಕ್ಕೆ ಆಗೋಲ್ಲ. ಅವರಿಬ್ಬರ ನಡುವೆ ಯುದ್ಧ ಇನ್ನೇನು ಆರಂಭವಾಗುತ್ತೆ ಎಂದು ಬಂಡವಾಳಶಾಹಿ ರಾಷ್ಟ್ರಗಳು ಬಾಯಿ ಬಿಟ್ಕೊಂಡು ಕುಳಿತಿವೆ. ಅಲ್ಲಿಗೆ ಎಲ್ಲ ದಸಕ್ ಅಂತು.

(ಎ) ಕೊನೆಯಾಗಲು, ಭ್ರಮೆ ಆರಂಭವಾದ ಒಂದು ದಶಕವೂ ಇರಲೇಬೇಕು. ಆ ದಶಕ ಯಾವುದು ? ಇದು ಇಲ್ಲಿ ಮೊದಲಾಗಿ ಅಲ್ಲಿ ಕೊನೆಯಾಯಿತು ಎಂದು ಅಷ್ಟೇ ಸಲೀಸಾಗಿ, ಯಾವುದರ ಬಗ್ಗೆಯೂ ಹೇಳಬರುವುದಿಲ್ಲ. ಏಕೆಂದರೆ ಹಾಗಾಗಿರೋದಿಲ್ಲ. ಹಿಟ್ಲರ್ ಹಿಂಸೆಯ ಭಯಂಕರ ನಡೆಸ್ತಾ ಇರಬೇಕಾದರೆ ಈ ಕಡೆ ಗಾಂಧೀಜೀ ಅಹಿಂಸೆ ನಡೀತಿದ್ದರು. ಹಿಟ್ಲರ್ ಹುಟ್ಟಿದಾಗ ಹಿಂಸೆ ಹುಟ್ಟಿ, ಹಿಟ್ಲರ್ ಸತ್ತಾಗ ಸತ್ತಿತು ಎಂದು ಯಾರಾದರೂ ಹೇಳಿದರೆ, ಇತಿಹಾಸ ಓದಿದವರು ಗಹಗಹಿಸಿ ನಕ್ಕುಬಿಡುತ್ತಾರೆ ಅಷ್ಟೆ. ಹೋಗಲಿ ಮೂರ್ತಿಯವರ ಮಾತು ನಿಜವೆಂದೇ ನಂಬೋಣ.

ಭ್ರಮೆ ಕೊನೆಯಾಗಿರುವುದು ನಿಜವಾದಲ್ಲಿ ಮತ್ತೊಂದು ಆರಂಭವಾಗಿರಬೇಕು. ಅದು ಯಾವುದು ? ಬೇರೆಲ್ಲೂ ಅಥವಾ ಬೇರೆ ಯಾರಿಗೂ ಹಾಗಾಗಿಲ್ಲದಿರಬಹುದು. ಆದರೆ ಡಾ|| ಯು. ಆರ್. ಅವರ ವಿಚಾರದಲ್ಲಿ ಮಾತ್ರ ಒಂದು ಕೊನೆಯಾಗಿ ಮತ್ತೊಂದು ಆರಂಭವಾಗಿರುವಂತೆ ತೋರುತ್ತದೆ.

2. ಡಾ|| ಯು. ಆರ್. ಹೇಳ್ತಾರೆ, ಮಾರ್ಕ್ಸ್ ಎರಡು ತಪ್ಪು ಮಾಡಿದ ಎಂದು.

(ಅ) ಒಬ್ಬ ವ್ಯಕ್ತಿ ಒಂದು ಕಾಲದಲ್ಲಿ ತೆಗೆದುಕೊಂಡ ನಿರ್ಣಯ ಅಥವಾ ತೀರ್ಮಾನವನ್ನು ಸರಿ ಅಥವಾ ತಪ್ಪು ತಕ್ಕಡಿಗೆ ಹಾಕಬಹುದು, ಆದರೆ ಚಿಂತನೆ ಅಥವಾ ಸಿದ್ಧಾಂತವನ್ನು ಹಾಕಲಾಗುವುದಿಲ್ಲ. ಉದಾಹರಣೆಗೆ ಆಲ್ಬರ್ಟ್ ಐನ್‌ಸ್ಟೈನ್‌ರ ಸಾಪೇಕ್ಷತಾ ಸಿದ್ಧಾಂತ ಮತ್ತು ಅಣುಬಾಂಬ್ ತಯಾರಿಕೆಗೆ ಸಂಬಂಧಿಸಿದಂತೆ ಅವರು ಬರೆದಿರುವ ಪತ್ರ ತೆಗೆದುಕೋಬಹುದು. ಮೊದಲನೆಯದು ಚಿಂತನೆ ಅಥವಾ ಸಿದ್ಧಾಂತ. ಎರಡನೆಯದು ತೀರ್ಮಾನ ಅಥವಾ ನಿರ್ಣಯ.

(ಆ) ಸಾಪೇಕ್ಷತಾ ಸಿದ್ಧಾಂತ ಮುಂತಾದ ಪರಿಕಲ್ಪನೆಗಳು ಬಂದನಂತರ ಭೌತವಿಜ್ಞಾನದಲ್ಲಿ ಬುಡಮಟ್ಟದ ಬದಲಾವಣೆ ಉಂಟಾಯಿತು. ಅದಕ್ಕೆ ಕಾರಣ ಗುರುತ್ವಾಕರ್ಷಣ ಸಿದ್ಧಾಂತ ಇತ್ಯಾದಿ ಪರಿಕಲ್ಪನೆಗಳು ತಪ್ಪಾಗಿದ್ದವು, ನ್ಯೂಟನ್ ತಪ್ಪು ಮಾಡಿದ್ದ ಐನ್‌ಸ್ಟೈನ್ ಬಂದು ಎಲ್ಲವನ್ನೂ ಸರಿ ಮಾಡಿದ ಎಂದು ಹೇಳಲಾಗುವುದಿಲ್ಲ.

(ಇ) ಏಕೆಂದರೆ ಅಲ್ಲಿ ನಡೆದಿರುವುದು ಕ್ರಮಾಗತ ಬೆಳವಣಿಗೆ ಅಥವಾ ಮಾನವ ಪ್ರತಿಭೆಯ ಅಥವಾ ಮಾನವ ಜನಾಂಗದ ಮನಸ್ಸಿನ ವಿಕಸನ.

(ಈ) ಅಣುಬಾಂಬ್ ತಯಾರಿಸುವಂತೆ ಪತ್ರ ಬರೆದು ತಪ್ಪು ಮಾಡಿದೆ ಎಂದು ಸ್ವತಃ ಐನ್‌ಸ್ಟೈನ್ ಅಂದುಕೊಂಡರು.

ಇದು ಚಿಂತನೆ ಹಾಗೂ ನಿರ್ಣಯಗಳ ನಡುವೆ ಇರುವ ಮೂಲಭೂತ ವ್ಯತ್ಯಾಸ. ಒಂದು ಗಳಿಗೆಯಲ್ಲಿ ಸಾವಿರ ಸಾವಿರ ನಿರ್ಣಯ ತಗೋಬಹುದು. ಚಿಂತನೆ ಮಂಡಿಸುವುದಕ್ಕೆ ಆಗುವುದಿಲ್ಲ. ಆದಕಾರಣ ತಪ್ಪು ಸರಿ ಎಂಬುದು ಪಾದ್ರಿಗಳ ಮಾತಾಗುತ್ತದೆ. ವೈಜ್ಞಾನಿಕ ದೃಷ್ಟಿಕೋನದ ಪರಿಭಾಷೆ ಅಲ್ಲ.

ಸಮಾಜವಾದಿ ವ್ಯವಸ್ಥೆ ನಿರ್ಮಾಣ ಸಾಧ್ಯತೆ ಕುರಿತಂತೆ ಮಾರ್ಕ್ಸ್ ಮಂಡಿಸಿದ್ದು ಚಿಂತನೆ ಅಥವಾ ಪರಿಕಲ್ಪನೆಯನ್ನು ಮಾತ್ರ, ನಿರ್ಣಯವನ್ನಲ್ಲ,

ಆದ್ದರಿಂದ ಆತ ತಪ್ಪು ಮಾಡಿದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

(ಉ) ಮಾರ್ಕ್ಸ್ ನಿರೀಕ್ಷಿಸಿದ್ದಂತೆ ಮುಂದುವರಿದ ಜರ್ಮನಿಯಲ್ಲಿ ಕ್ರಾಂತಿ ಹುಟ್ಟಲಿಲ್ಲ. ಅಭಿವೃದ್ಧಿ ಹಾದಿಯಲ್ಲಿ ತೀರ ಹಿಂದುಳಿದ ರಷ್ಯಾದಲ್ಲಿ ಆನಂತರ ಚೀನಾದಲ್ಲಿ ಕಮ್ಯೂನಿಸ್ಟ್ ಕ್ರಾಂತಿ ನಡೆಯಿತು. ಇದಕ್ಕೆ ಜರ್ಮನ್ ಮಾರ್ಕ್ಸ್‌ವಾದಿಯೊಬ್ಬ 1930ರಲ್ಲೇ ನೀಡಿದ ಕಾರಣ ಈ ರೀತಿ ಇದೆ. ದುಡಿವ ವರ್ಗದ ಜನರ ಚಳವಳಿಯ ನಾಯಕರಲ್ಲಿ ಮತ್ತು ಮುಂದುವರಿದ ಕಾರ್ಮಿಕರು ಮತ್ತು ಕಾರ್ಮಿಕ ಬುದ್ಧಿಜೀವಿಗಳ ಒಳಗೆ ಬೆಳವಣಿಗೆಯಾದ ಬ್ರಾಹ್ಮಣಿಕೆಯಿಂದಾಗಿ ಜರ್ಮನಿಯಲ್ಲಿ ಕ್ರಾಂತಿ ನಡೆಯಲಿಲ್ಲ ಎನ್ನುತ್ತಾನೆ. Brahminism in Labour Movement ಎಂಬುದು ಆತ ಬಳಸಿದ ಪದ.

(ಊ) ಸಾಧ್ಯತೆಗೆ ಹಲವು ಆಯಾಮಗಳಿರುತ್ತವೆ. ಗರ್ಭಾವಸ್ಥೆಯಲ್ಲಿರುವ ಭ್ರೂಣ : ಗಂಡು ಅಥವಾ ಹೆಣ್ಣು ಶಿಶುವಾಗಿ ಹೇಗೆ ರೂಪಗೊಳ್ಳುತ್ತದೆ, ಯಾವ ಕಾರಣಗಳಿಂದಾಗಿ ಖೋಜಾಗಳು ಹುಟ್ಟುತ್ತಾರೆ ಎಂಬುದ ಕುರಿತು ಜೀವವಿಜ್ಞಾನಿಗಳು ನೀಡುವ ಸಿನಿಮಾ ಓದಿದವರಿಗೆ ಪರಿಸ್ಥಿತಿ ಅರ್ಥವಾಗಬಲ್ಲದು.

ಆ ಕುರಿತು ಮಾರ್ಕ್ಸ್‌ವಾದಿಗಳು ಬಹಳಷ್ಟು ಜಿಜ್ಞಾಸೆ ನಡೆಸಿದ್ದಾರೆ.. ಅದೆಲ್ಲ ಇಲ್ಲಿ ಬೇಡ. ಆದರೆ ಸ್ಪೇನ್, ಗ್ರೀಸ್, ಇಟಲಿ ಮತ್ತು ಫ್ರಾನ್ಸ್ ದೇಶಗಳಲ್ಲಿ ಕ್ರಾಂತಿಯು ಗರ್ಭಪಾತವಾದದ್ದು ಈಗ ಕೆಲವರ ನೆನಪಲ್ಲಿ ಉಳಿದಿಲ್ಲ ಎಂದು ತೋರುತ್ತದೆ. ಅಂತೇ ಮಂದಿ ಆಧುನಿಕ ಯುರೋಪಿನ ಇತಿಹಾಸವನ್ನು ಮತ್ತೆ ಓದುವುದು ಒಳ್ಳೆಯದೇನೋ ! ಇದೇ ಸಂದರ್ಭದಲ್ಲಿ ಕೆಲವರಿಗಾದರೂ ತೇಜಸ್ವಿ ಹೆಸರು ಬಹಳ ನೆನಪಾಗಬಹುದು. ಏಕೆಂದರೆ ಇಂತಾದ್ದೇ ಕೆಲವು ಪ್ರಶ್ನೆಗಳನ್ನು ಎತ್ತಿಕೊಂಡು ಅವರು ಮಾರ್ಕ್ಸ್‌ವಾದದ ವಿರುದ್ದ ಹರಿಹಾಯ್ದಿದ್ದರು.

3. ಭೂಮಿ ಒಂದು ಅಕ್ಷಯ ಪಾತ್ರೆ ಎಂದು ಮಾರ್ಕ್ಸ್ ಯಾವತ್ತೂ ತಿಳಿದಿರಲಿಲ್ಲ. ಆತಹೇಳಿದ್ದು ಸಂಪತ್ತಿನ ಸಮಾನ ವಿತರಣೆ ಕುರಿತು ಮಾತ್ರ.

ಮೂರ್ತಿಯವರ ಅಕ್ಷಯ ಪಾತ್ರೆ ಎಂಬ ಸಿದ್ಧಾಂತದ ಹಿಂದಿನ ನಿಜವಾದ ಅರ್ಥ ಇದಾಗಿದೆ.

(ಅ) ಭೂಮಿ ಒಂದು ಅಕ್ಷಯ ಪಾತ್ರೆ ಅಲ್ಲ, ಆ ಕಾರಣ ಭೂಸಂಪತ್ತಿಗೆ ಮಿತಿ ಇದೆ. ಹಾಗಾಗಿ ನೋಡಿ, ಸುಖಸಂಪತ್ತು ಎಲ್ಲರಿಗೂ ಅಲ್ಲ, ಬಡವ ಶ್ರೀಮಂತ ಎಲ್ಲಾ ಅವರವರ ಕರ್ಮ.

(ಆ) ದರೋಡೆಕೋರರಂತೆ ಭೂಮಿಯನ್ನು ಸೂಲಿದು ಕಬಳಿಸುತ್ತಿರುವ ಬಂಡವಾಳಶಾಹಿಗಳ ಮುಖಕ್ಕೆ ರಾಚಬೇಕಾದ ಆ ಮಾತನ್ನು ಅನಂತಮೂರ್ತಿ, ಮಾರ್ಕ್ಸ್ ತಲೆಗೆ ಕಟ್ಟಿದ್ದಾರೆ.

(ಇ) ಸೋವಿಯತ್ ದೇಶದಲ್ಲಿ ಸಮಾಜವಾದ ಬರಲಿಲ್ಲ ಎಂಬುದು ಒಂದು ಸಂಗತಿ ಅಥವಾ ಅಭಿಪ್ರಾಯ. ಅದನ್ನೇ ದೊಡ್ಡದು ಮಾಡಿ, ಆಹ ಓಹೋ ಕೂಗು ಹಾಕುವ ಮನುಷ್ಯ ; ಸಮಾಜವಾದ ಎನ್ನುವುದೇ ಒಂದು ದೊಡ್ಡ ಭ್ರಮೆ, ಅದೊಂದು ಮಹಾಮಾಯೆ ಎಂದು ಹೇಳುತ್ತಾ, ಇಂದಿನ ದುರವಸ್ಥೆಯ ಸಮರ್ಥನೆಗೆ ಅದನ್ನು ಬಳಸಿಕೊಳ್ಳಲು ಹಾತೊರೆಯುತ್ತಾನೆ. ಏಕೆ ಹೀಗಾಯಿತು ಎಂದು ಚಿಂತಿಸುವ ಮನುಷ್ಯ : ಸೋವಿಯತ್ ಪ್ರಯೋಗವನ್ನು ಅನುಭವದ ಒಂದು ಭಾಗ ಎಂದು ತೆಗೆದುಕೊಂಡು ; ಮುಂದೆ ಮಾಡಬೇಕಾದ್ದರ ಕಡೆಗೆ ನೋಡುತ್ತಿರುತ್ತಾನೆ. ಕಮ್ಯೂನಿಸ್ಟರಂತೆ ಸೋವಿಯತ್ ದೇಶದ ಕಡೆಗೆ ಕುರುಡು ಪ್ರೇಮ ಬೆಳೆಸಿಕೋಬೇಕು ಎಂಬುದು ಇದರರ್ಥವಲ್ಲ. ಭ್ರಮೆ ಎನ್ನುವ ಮನುಷ್ಯ, ಕುರುಡು ಪ್ರೇಮದ ಮನುಷ್ಯ, ಇಬ್ಬರೂ ಒಂದೇ ನಾಣ್ಯದ ಎರಡು ಮುಖಗಳು ; ಅಂತಹ ಇಬ್ಬರಲ್ಲೂ ಚಿಂತನ ಶಕ್ತಿ ಮುದಿಗೊಂಡಾಗಿರುತ್ತದೆ.

ಮಾರ್ಕ್ಸ್‌ವಾದಿ ಎಂದು ಹೇಳಿಕೊಳ್ಳುವುದು ಕೆಲವರಿಗೆ ಫ್ಯಾಷನ್ ಆದಂತೆ, ಇನ್ನೂ ಕೆಲವರಿಗೆ ಮಾರ್ಕ್ಸ್‌ವಾದದ ವಿರುದ್ಧ ಮಾತನಾಡುವುದು ಫ್ಯಾಷನ್ ಆಗಿರುವಂತೆ ತೋರುತ್ತದೆ.

4. 'ಇಡೀ ಜಗತ್ತೇ ಆತ್ಮನಾಶದ ಹಾದಿಯಲ್ಲಿರುವಂತೆ ನನಗೆ ತೋರುತ್ತಿದೆ' ಎಂದು ನೆಹರೂ ಹೇಳಿದ ಮಾತನ್ನು ಡಾ॥ ಯು. ಆರ್. ಉದಾಹರಿಸಿದ್ದಾರೆ.

(ಅ) ಜಗತ್ತಿನ ಆತ್ಮನಾಶದ ಅರಿವು ನಿಜವಾಗಲೂ ಆಗಿದ್ದಲ್ಲಿ ನೆಹರೂ, ಚೀನಾ ಜತೆ ಸಮರ ಹೂಡುತ್ತಿರಲಿಲ್ಲ. ಭಾರತ–ಚೀನಾ ಸಮರಕ್ಕೆ ತೊಂಬತ್ತು ಪಾಲು ನೆಹರೂ ಕಾರಣ. ಆ ಸಂದರ್ಭದಲ್ಲಿ ನೆಹರೂ ರಸಲ್‌ಗೆ ಬರೆದ ಪತ್ರ ; ಮತ್ತೊಂದು ಸಂದರ್ಭದಲ್ಲಿ ಪಾಬ್ಲೊ ನೆರೂದ ಜತೆ ಆತ ನಡೆದುಕೊಂಡ ರೀತಿ : ನೆಹರೂಗೆ ಜಗತ್ತಿನ ಆತ್ಮನಾಶದ ಅರಿವು ಖಂಡಿತ ಆಗಿರಲಿಲ್ಲ ಎಂಬುದಕ್ಕೆ ಅತ್ಯುತ್ತಮ ಪುರಾವೆಗಳಾಗಿವೆ ಹಾಗಿದ್ದೂ ನೆಹರೂ ಆ ಮಾತನ್ನು ಏಕೆ ಹೇಳಿದರು ? ನನ್ನ ಪ್ರಕಾರ ಕಾರಣ ಈ ರೀತಿ ಇದೆ.

(ಆ) ನೆಹರೂ ಗಾಂಧೀವಾದಿ ಅಲ್ಲ, ಎಂದು ಹೇಳಲು ಆತ ಎಂದಾದರೂ ಗಾಂಧೀವಾದಿ ಆಗಿದ್ದೇ ಇಲ್ಲ. ಡಾ॥ ಅಂಬೇಡ್ಕರ್ ಅವರಂತೆ ಗಾಂಧೀಜೀ ಎದುರು ಹಾಕಿಕೊಂಡು ರಾಜಾರೋಷ ಬೆಳೆಯುವ ಗುಣ ನೆಹರೂಗಿರಲಿಲ್ಲ. ಹಾಗಾಗಿ ಕಪಟ ಡಾಂಬಿಕತೆ ಆತನ ಒಳಗೆಲ್ಲ ತುಂಬಿಕೋತು. ಜಗತ್ತೇ ಮಾಯೆ ಎಂದು ಹೇಳುತ್ತಲೇ ಪ್ರಪಂಚ ನೀಡುವ ಎಲ್ಲ ಸುಖಸಂಪತ್ತು ಅನುಭವಿಸಿದ ಪರಂಪರೆಯಲ್ಲಿ ಬಂದ ನೆಹರೂ, ಹಿಪಾಕ್ರಿಟ್ ಆಗಲು ಕಷ್ಟಪಡಬೇಕಾದ ಅಗತ್ಯವಿರಲಿಲ್ಲ. ಬಿಳಿ ಜನರ ದೇಶಗಳ ಹಾದೀಲೇ ಭಾರತ ಕರೆದುಕೊಂಡು ಹೋಗುವುದು ಆತನ ಉಜ್ವಲ ಕನಸಾಗಿತ್ತು. ಬ್ರಿಟನ್ನಿನಲ್ಲಿ ತಯಾರಾದ ನೆಹರೂಗೆ ಅದಲ್ಲದೆ ಬೇರೆ ಗೊತ್ತಿರಲಿಲ್ಲ. ಹಾಗೆಂದು ನೇರವಾಗಿ ಹೇಳಲು ನೆಹರೂಗೆ ಧೈರ್ಯ ಇರಲಿಲ್ಲ. ಹಾಗೆ ಹೇಳುವುದು ಎಂದರೆ ಅದಕ್ಕೆ ಸಂಪೂರ್ಣ ವಿರುದ್ಧವಿದ್ದ ಗಾಂಧೀಜೀಯನ್ನು ಎದುರು ಹಾಕಿಕೊಳ್ಳಬೇಕಾಗುತ್ತಿತ್ತು. ಗಾಂಧೀಜಿ ಎದುರು ಹಾಕಿಕೊಂಡಿದ್ದಲ್ಲಿ ಅಷ್ಟು ಸುಲಭವಾಗಿ ಅಧಿಕಾರ ಕೈಗೆ ದಕ್ಕುತ್ತಿರಲಿಲ್ಲ. ಅಧಿಕಾರ ಬೇಕು. ಅಧಿಕಾರಕ್ಕೆ ಬರಲು ಗಾಂಧೀಜಿ ಬೇಕು. ಆ ಕಡೆ ಬಿಳಿ ಜನರ ಹಾದಿ ಹಿಡೀಬೇಕು. ಇತ್ಯಾದಿ ಇಕ್ಕಟ್ಟುಗಳ ಮಧ್ಯೆ ಸಿಕ್ಕ ನೆಹರೂ ಜಗತ್ತಿನ ಆತ್ಮನಾಶದ ಮಾತಿನ ಸೋಗು ಹಾಕಿಕೋಬೇಕಾಯಿತು. ನೆಹರೂ ಹುಟ್ಟಾ ರಾಜಕಾರಿಣಿ ತಾನೇ !

ನಮ್ಮೆಲ್ಲರ ಮನಸ್ಥಿತಿ ನೆಹರೂ ಅವರದ್ದು ಎಂದು ನನಗೆ ಅನ್ನಿಸುತ್ತಿದೆ ಎಂದು ಡಾ. ಯು. ಆರ್. ಹೇಳಿಕೊಂಡಿರುವುದು ಬಹಳ ಅರ್ಥಗಳಲ್ಲಿ ಬೋ ಖರೆಯಾದ ಮಾತು. ಹಿಪಾಕ್ರಿಸಿಯಲ್ಲಿ ಭಾರತದ 90ಪಾಲು ಬುದ್ಧಿಜೀವಿಗಳು ನೆಹರೂನ ಮರಿಗಳು.

5) ಈವತ್ತಿನ ಭಾರತ ರಾಜಾರಾಮ್‌ಮೋಹನ್ ರಾಯ್ ಹಾಗೂ ನೆಹರೂ ಅವರ ಐಕ್ಯದ ಫಲ ಎಂದು ಹೇಳುವ ಅನಂತಮೂರ್ತಿ, ಟಾಲ್‌ಸ್ಟಾಯ್‌ಗಿದ್ದಂತೆ ನಮ್ಮ ಗಾಂಧೀಜಿಗೂ ಪರ್ಯಾಯ ವ್ಯವಸ್ಥೆಯ ಕಲ್ಪನೆ ಇತ್ತು ಎನ್ನುತ್ತಾರೆ.

(ಅ) ಟಾಲ್‌ಸ್ಟಾಯ್ ಪ್ರಕಾರ ಎಲ್ಲರೂ ನಿಜವಾಗಲೂ 'ಕ್ರಿಸ್ತ'ರಾಗಬೇಕು.

(ಆ) ಬದಲಿ ವ್ಯವಸ್ಥೆ ಈವತ್ತಿನ ಜಗತ್ತನ್ನೇ ಕಾಡುತ್ತಿರುವ ಸಮಸ್ಯೆ. ಉತ್ತರ ದೊರೆತ ದಿನ ಜಗತ್ತಿನ ಅರ್ಥ ಕೋಟಲೆಗಳು ಪರಿಹಾರ ಕಾಣುತ್ತವೆ. ಈ ಬಗ್ಗೆ ಅವರಿಗೆ ಸ್ಪಷ್ಟವಾದ ಕಲ್ಪನೆ ಇರಲಿಕ್ಕಿಲ್ಲ. ಇದ್ದಿದ್ದರೆ ಅಷ್ಟು ಸಲೀಸಾಗಿ ಮಾತನಾಡ ಹೋಗುತ್ತಿರಲಿಲ್ಲ. ಆದ್ದರಿಂದ ಏನೋ ತೆವಲಿಗೆ ಮಾತಾಡಿದಾರೆ. ಉದಾಹರಣೆಗೆ, ಡಾ. ಲೋಹಿಯಾ ಭಾರತದ ಪ್ರಥಮ ಪ್ರಧಾನಿ ಆಗಿದ್ದರೆ ಎಂಬ ಪ್ರಶ್ನೆ ಕುರಿತಂತೆ ಡಾ. ಯು. ಆರ್. ತಮ್ಮ ಚಿಂತನೆ ಮಂಡಿಸಿದಾಗ, ಪರ್ಯಾಯ ವ್ಯವಸ್ಥೆ ಬಗ್ಗೆ ಅವರ ಜತೆ ಚರ್ಚೆಗಿಳಿಯಬಹುದು.

6. ಸಮುದಾಯದ ಕಲ್ಪನೆ ಗಟ್ಟಿಯಾಗಿರುವುದು ಈ ಬಡರಾಷ್ಟ್ರಗಳಲ್ಲೇ ಎನ್ನುವ ಡಾ. ಯು ಆರ್. ಮೂರ್ತಿ ಮುಂದುವರಿದು ಬಡವರ ಕೊಪ್ಪ

ಲಿಗೆ ಹೋದರೆ ಅಲ್ಲಿ ಒಂದು ರೀತಿಯ ಸಮಾಜವಾದಿ ವ್ಯವಸ್ಥೆ ಇದ್ದೇ ಇರುತ್ತದೆ ಎನ್ನುತ್ತಾರೆ.

(ಅ) ಭ್ರಮೆ, ತಪ್ಪು, ಅಕ್ಷಯಪಾತ್ರೆ ಇತ್ಯಾದಿ ಮಾತುಗಳನ್ನು ಮನಸೋಇಚ್ಛೆ ಬಳಸಿದಂತೆ, ಸಮುದಾಯ, ಸಮಾಜವಾದ ಪದಗಳನ್ನು ಬಳಸಿದ್ದಾರೆ.

(ಆ) ಸಮುದಾಯದ ಕಲ್ಪನೆ ಇರುವುದು ಬಡ ರಾಷ್ಟ್ರಗಳಲ್ಲೂ ಅಲ್ಲ-ನಾಗ, ಮಿಜೋ, ಸೋಲಿಗ, ಕುಯಿ ಇತ್ಯಾದಿ ಆದಿವಾಸಿ ಜನರಲ್ಲಿ ಮಾತ್ರ. ಆದಿವಾಸಿ ಅಥವಾ ಗುಡ್ಡಗಾಡು ಜನರ ಜೀವನಕ್ರಮಕ್ಕೆ ಮಾತ್ರ ಸಮುದಾಯದಬದುಕು ಎನ್ನಲಾಗುವುದು.

(ಇ) ಬಡರಾಷ್ಟ್ರಗಳ ಜನರ ನಡುವೆ ಇರೋದು ನೆರೆ–ಹೊರೆಯ ಭಾವನೆ.

(ಈ) ಸಮುದಾಯದ ಬದುಕು ನೆರೆ–ಹೊರೆಯ ಭಾವನೆ ಬದುಕು: ಇವುಗಳ ನಡುವೆ ಊಳಿಗಮಾನ್ಯ ಸಂಸ್ಕೃತಿ ಮತ್ತು ಬೂರ್ಜ್ವಾ ಸಂಸ್ಕೃತಿ ನಡುವೆ ಇರುವಷ್ಟೇ ಅಂತರವಿದೆ.

(ಉ) ಜಾತಿ, ಕುಲ, ವರ್ಗ ಇತ್ಯಾದಿ ಅಂತಸ್ತುಗಳಿಂದ ಛಿದ್ರಛಿದ್ರವಾಗಿರುವ ಯಾವುದೇ ಕೊಪ್ಪಲಿನಲ್ಲಿ ಸಮಾಜವಾದ ಇರುವುದಿಲ್ಲ ಎಂಬುದು ಒಂದನೇ ಪಾಠದಲ್ಲೇ ಬರುತ್ತದೆ.

ಮುಕ್ತಾಯ: ಹಾಗೇ ಹೇಳುವ ಮೂಲಕ ಅನಂತಮೂರ್ತಿ ತಲಪುವ ತೀರ್ಮಾನಗಳು ಈ ರೀತಿಯವಾಗಿವೆ.

1. ಕೊಪ್ಪಲಿನಲ್ಲಿ ಸಮಾಜವಾದೀ ವ್ಯವಸ್ಥೆ ಹಾಲಿ ಇದೆ ಎಂದಾದ ಮೇಲೆ, ಅದು ಬದಲಾಗಬೇಕಾದ ಅಗತ್ಯವೇ ಇಲ್ಲ ಎಂದಾಯಿತು.

2. ಏಕೆಂದರೆ ನಾವೆಲ್ಲ ಬಯಸೋದು ಸಮಾಜವಾದಾನೇ ತಾನೇ!

3. ಭಾರತದ ತೊಂಬತ್ತು ಭಾಗ ಕೊಪ್ಪಲೇ ಆಗಿದೆ. ಆದ್ದರಿಂದ ಇದೇ ಭಾರತದಲ್ಲೇ ಬದಲಾವಣೆ ಆಗಬೇಕಾದ ಅಗತ್ಯವಿಲ್ಲ. ಭಾರತ ಈಗ ಹೇಗಿದೆಯೋ ಹಾಗೇ ಇರಬೇಕು. ಅದೇ ಒಂದು ಆದರ್ಶ ಮಾದರಿ.

4. ಆ ಕಾರಣವೇ ಡಾ. ಯು. ಆರ್. ಅವರಿಗೆ ಜಾತಿವ್ಯವಸ್ಥೆ 'ಕ್ರಿಯಟಿವ್' ಆಗಿ ಕಂಡಿದೆ. ವೆಲ್‌ಫೇರ್ ಸಿಸ್ಟಮ್, ಬ್ಯಾಂಕ್ ಎಲ್ಲಾ ಆಗಿದೆ.

ಆ ಮಾತು ಕೇಳಿದ್ದರೆ ದಯಾನಂದ ಸರಸ್ವತಿ ಅಂತವರೂ ಕೂಡ ಗಹಗಹಿಸಿ ನಕ್ಕುಬಿಡುತ್ತಿದ್ದರು. ಆದ್ದರಿಂದ ನಾನು ಆ ಬಗ್ಗೆ ಅವರ ಜತೆ ಚರ್ಚೆಗೆ ಇಳಿಯಲಾರೆ. ಹೊಲೇರು ನಮ್ಮಂತೆ ಮನುಷ್ಯರು. ಆದರೆ ಅವರ ಏಳಿಗೆಗೆ ಮೀಸಲಾತಿ ಸೂಕ್ತ ಮಾರ್ಗವಲ್ಲ ಎಂದು ತಿಳಕೊಂಡವರ ಜತೆ ಚರ್ಚೆ ಸಾಧ್ಯ, ಸ್ನೇಹದಿಂದಲೂ ಇರಬಹುದು. ಆದರೆ ಹೊಲೇರು ಮನುಷ್ಯರೇ ಅಲ್ಲ ಅನ್ನೋರ ಜತೆ (ಸ್ನೇಹ ಇರಲಿ) ಚರ್ಚೆ ಸಾಧ್ಯವೇ? ಅಂತವರ ಜತೆ ಹೇಗೆ ವರ್ತಿಸಬೇಕೋ ಗೊತ್ತಿಲ್ಲ.

ಯಾಂತ್ರೀಕರಣ, ವಿಕೇಂದ್ರೀಕರಣ, ಸಂಸ್ಕೃತೀಕರಣ, ಪಾಶ್ಚಿಮಾತ್ಯೀಕರಣ, ನಂಬಿಕೆಯಿಂದ ನಾಗರಬನ ಸಂರಕ್ಷಣೆ ಇತ್ಯಾದಿ Sugar Coat ಹಿಡಿದ ಮಾರ್ಗ ಹಿಡಿದು ಹೊರಟ ಅನಂತಮೂರ್ತಿ ಕೊನೆಗೆ ಹೇಳೋದು ಇದನ್ನ, ಎಂಬ ಸಂಗತಿಯಿಂದಾಗಿ ಆಶ್ಚರ್ಯಪಡಬೇಕಾದ್ದಿಲ್ಲ.

ಅವರ ಮಾತಲ್ಲೇ ಹೇಳೋದಾದರೆ ಅದೆಲ್ಲ ಭ್ರಮೆ ಎಂದು ಗೊತ್ತಾಗಲು, ಎಪ್ಪತ್ತರ ದಶಕ ಕೊನೆಯಾಗುವವರೆಗೂ ಕಾಯಬೇಕಾಯಿತು. ಇದು ಕೂಡ ಭ್ರಮೆ ಎಂದು ಗೊತ್ತಾಗಲು ಇನ್ನೆಷ್ಟು ದಶಕಗಳ ಕಾಲ ಕಾದು ಕೂತಿರಬೇಕಾಗುತ್ತೋ ಗೊತ್ತಿಲ್ಲ. —

ಡಾ|| ತಿರುಮಲೇಶ್ ಉತ್ತರ

6 ನೇ ಪುಟದಿಂದ

ಯೆಂದೋ ಯಾಕೆ ತಿಳಿಯಬೇಕೆಂದು ಅರ್ಥವಾಗುವುದಿಲ್ಲ. ಹಾಗೆ ತಿಳಿದುಕೊಂಡುದರಿಂದ ನಿಜಕ್ಕೂ ನಮ್ಮ ಅರಿವು ಹೆಚ್ಚುವುದಿಲ್ಲ. (ಈ 'ಸಮತೆ' ಅಥವಾ 'ಔದಾರ್ಯ'ವೆನುವ್ರದು 'ದೇವರು' ಎಂಬ ಕಲ್ಪನೆಯಷ್ಟೇ ನಿಗೂಢವಾದ್ದು.) ಅಷ್ಟೇ ಅಲ್ಲ, ನಮ್ಮ ಪರಿಸ್ಥಿತಿಗೆ ನಾವು ಕಾರಣರಲ್ಲ ಎಂಬ ಉದಾಸೀನತೆಯನ್ನು ತಂದೊಡ್ಡುತ್ತದೆ, ಆದ್ದರಿಂದಲೇ 'ಜೀವ ದಿನ್ನೇ ದಿನೇ ಹೆಚ್ಚು ಹೆಚ್ಚು ವಿಸ್ಮಯವಾಗಿ, ನಮ್ಮನ್ನು ಕ್ಷಣ ಕ್ಷಣಕ್ಕೂ ಅವಾಕ್ಕುಗೊಳಿಸುವಂತೆ ಬೆಳೆಯುತ್ತಿರುವ ಈ ವೈಜ್ಞಾನಿಕ ಸಂದರ್ಭದಲ್ಲಿ' ಕೂಡ ಮನುಷ್ಯ ಸಮಾಜದ ಅವಸ್ಥೆಯನ್ನು ಅರ್ಥ ಮಾಡಿಕೊಳ್ಳಲು ಈ ಸಮಾಜಕ್ಕೆ ಹೊರತಾದ ಪ್ರೇರಣೆಗಳನ್ನು ಹುಡುಕುವುದು ನಿಷ್ಪ್ರಯೋಜಕವೆಂದು ನನಗೆ ಅನಿಸುತ್ತದೆ.

ಆದರೆ ಡಾ॥ ಪೋಲಂಕಿಯವರು ಇದನ್ನು ಅರಿತಿಲ್ಲವೆಂದು ನಿರಾಕರಿಸುವುದಕ್ಕೂ ಸಾಧ್ಯವಾಗುವುದಿಲ್ಲ. ಯಾಕೆಂದರೆ ತಮಗೆ ಬೇಕಾದಕಡೆ 'ಅಲ್ಜೀಬ್ರಾ ಮನಸ್ಸು,' ವಿಶ್ವಾಮಿತ್ರ'-ಎಂಬಿತ್ಯಾದಿ ಮೌಲ್ಯಮಾಪಕ ಪದಗಳನ್ನು ಅವರುಉಪಯೋಗಿಸುವುದು ಕಂಡು ಬರುತ್ತದೆ. ಆದರೆ ಅವರ ದೃಷ್ಟಿಯನ್ನು ಯಥಾರ್ಥವಾಗಿ ತೆಗೆದುಕೊಂಡರೆ ಇಂಥ 'ಅಲ್ಜೀಬ್ರಾ ಮನಸ್ಸು' ಕೂಡ ಸೃಷ್ಟಿಯ ನಿಗೂಢ 'ಔದಾರ್ಯ' ದ ಪ್ರಕಟಣೆಯೇ ಆಗುತ್ತದೆ. ದಲಿತರ, ದೀನರ ಕಲೆಗಳು, ದಲಿತಾವಸ್ಥೆ, ಬಡತನ, ರೋಗರುಜಿನ, ಶೋಷಣೆ ಎಲ್ಲವೂ ಇಂಥದೇ 'ಔದಾರ್ಯ' ದ ಪ್ರಕಟಣೆ. ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ವರ್ಗದಲ್ಲಿ ಇಮ್ಯೂನಿಟಿಯ ಬಗ್ಗೆ ಹೇಳುವ ಡಾ॥ ಪೋಲಂಕಿ ಇದೇ ವರ್ಗಗಳಲ್ಲಿ ಅತಿ ಹೆಚ್ಚಿನ ಅಕಾಲ ಮರಣಗಳು ಸಂಭವಿಸುತ್ತವೆ; ಆ ಕಡಿಮೆ ಆಯುರ್ಮಾನವಿರುವುದೂ ಈ ಜನರಲ್ಲೇ ಎಂಬ ಬಗ್ಗೆ ಹೇಳುವುದಿಲ್ಲ. ಅಥವಾ ಇದು ಕೂಡ (ಡಾ॥ ಪೋಲಂಕಿಯವರ ದೃಷ್ಟಿಯಲ್ಲಿ) ಕಾಸ್ಮೊಸಿನ ಒಟ್ಟಾರೆ 'ಸೌಂದರ್ಯ' ದ, 'ಉದ್ದೇಶ' ದ, 'ಮನಸ್ಸಿ'ನ ಅಥವಾ 'ಔದಾರ್ಯ' ದ ಒಂದು ರೀತಿಯಾಗಿರಬಹುದೆ? ಆಗಿರಲಾರದು ಅಂದುಕೊಳ್ಳುತ್ತೇನೆ.

ರಷ್ಯನ್ ಟ್ಯಾಂಕಿಗಿಂತ ಅಪಾಯಕಾರಿ 'ಜಾತಿವಾದ'

ಪ್ರತಿಕ್ರಿಯೆ

ಆರ್. ವಿ. ಭಂಡಾರಿ

ಮಾನ್ಯ ಅನಂತಮೂರ್ತಿ ಅವರು ಸ್ನೇಹಶೀಲರು. ಸಂದರ್ಭದಲ್ಲಿ ಅವರ ಮಾನವೀಯ ಕಳಕಳಿ ಅವರೆಲ್ಲ ದ್ವಂದ್ವಗಳನ್ನು ಮೀರಿ ಕ್ರಿಯಾಶೀಲವಾಗುತ್ತದೆಂಬ ನನ್ನ ನಿರೀಕ್ಷಣೆಗೆ ಭರವಸೆಯಿದೆ. ಭಿನ್ನಾಭಿಪ್ರಾಯದ ಮಧ್ಯದಲ್ಲೇ ಅವರು ಮಾನವ ಸಂಬಂಧವನ್ನು ಗಾಢವಾಗೇ ಇಟ್ಟುಕೊಳ್ಳುತ್ತಾರೆ. ಆದ್ದರಿಂದಲೇ 'ಪಂಚಮ' ದ ನವೆಂಬರ ವಿಶೇಷಾಂಕದಲ್ಲಿ ಮಂಡಿಸಿರುವ ಅವರ ವಾದವನ್ನು ಕೆಲ ಅಂಶಗಳಲ್ಲಿ ಒಪ್ಪಿಕೊಳ್ಳುತ್ತಲೇ ಒಟ್ಟೂ ಬರಹದ ಮೌಲ್ಯಾರ್ಥವನ್ನು ನಾನು ಅಲ್ಲಗಳೆದಾಗ ಅನಂತಮೂರ್ತಿಗಳ ವ್ಯಕ್ತಿತ್ವವನ್ನೇ ಅಲ್ಲಗಳೆದಂತಾಗುವುದಿಲ್ಲ.

ಅನಂತಮೂರ್ತಿಗಳು ಜಾತಿವಿನಾಶದ ಬಗ್ಗೆ ಕಳಕಳಿ ಉಳ್ಳವರೆ. ಆದರೆ ಅವರ ಬರಹದ ಒಟ್ಟು ಅರ್ಥ ಮಾತ್ರ ಅವರ ವಿರುದ್ಧ ಧ್ರುವಕ್ಕೇ ನಿಲ್ಲುತ್ತದೆ.

ಜಾತಿವಿನಾಶದಲ್ಲಿ ಅತ್ಯಂತ ಪ್ರಭಾವಶಾಲಿ ಆಗಬಲ್ಲ ಕಮ್ಯುನಿಸಂ ಅನ್ನು ಅವರು ಜಾಣ್ಮೆಯಿಂದ ನಿರಾಕರಿಸುತ್ತಾರೆ. ಇದು ಅನೇಕರಿಗೆ ಸಮ್ಮತವೂ ಹೌದು. ಆದರೆ ಅನಂತಮೂರ್ತಿಯವರು ಆ ಕಡೆಯ ಬಾಗಿಲನ್ನ ಮುಚ್ಚಿದ ಮೇಲೆ ವಿಕೇಂದ್ರಿಕರಣ ರಾಜಕೀಯ–ಆರ್ಥಿಕ ವ್ಯವಸ್ಥೆಯ ಬಗ್ಗೆ ಹೇಳುತ್ತಾರೆ.

ಅನಂತಮೂರ್ತಿಯವರೇ ಹೇಳುವ ಹಾಗೆ ಕಮ್ಯುನಿಸಂ ವ್ಯವಸ್ಥೆ ರಷ್ಯದ ಹಾಗೆ ಚೀನಾದಲ್ಲಿ ಇಲ್ಲ. ಅಂದಮೇಲೆ ಅದು ಭಾರತದಲ್ಲಿ ಸಂಭವನೀಯವಾದರೆ ರಷ್ಯ ಅಥವಾ ಚೀನಾದಂತೆಯೇ ಇರಬೇಕಾಗಿಲ್ಲವಲ್ಲಾ ?

ಅದನ್ನುಳಿದರೂ ಮೂರ್ತಿಯವರಿಗೆ ಧರ್ಮಸ್ಥಳದಲ್ಲಿ ಬೋಳು ಕೆತ್ತುಕೊಂಡು (ನಿಜವಾಗೂ ಅಲ್ಲಿ ಬೋಳು ಕೆತ್ತುವುದೆ) ಭಕ್ತಿಯಿಂದ ನಿಂತಭಕ್ತಜನವನ್ನು ನೋಡಿ ವಿಕೇಂದ್ರಿಕರಣದ ವ್ಯವಸ್ಥೆ ಭಾರತ ಲ್ಲಿ ಹೇಗೆ ಹರಿದುಬಂದಿದೆ ಎಂಬಂತೆ ತೋರುತ್ತದೆ. ಇದೇ ಆಲೋಚನೆಯ ಸರಣಿಯಲ್ಲಿ ಜಾತಿ ವ್ಯವಸ್ಥೆ ಹೇಗೆ ವಿಕೇಂದ್ರಿಕರಣದ ಫಲ ಎಂದೂ ಕಾಣುತ್ತದೆ. ಆದ್ದರಿಂದ ಅವರು ಇನ್ನೂ ಬರೆಯುತ್ತಾರೆ, "… ….ಜಾತಿ ಒಂದು ರೀತಿಯ ಬ್ಯಾಂಕ್‌ನ ಹಾಗೆ. ಒಂದು ವೆಲ್‌ಫೇರ್ ಸಿಸ್ಟಮ್‌ನ ಹಾಗೆ ಕೆಲಸ ಮಾಡುತ್ತಾ ಬಂದಿರುವುದು. ಅದು ಇವತ್ತಿಗೂ ಆಯಾಯ ಜಾತಿಗಾದರೂ ಕ್ರಿಯೆಟಿವ್ ಆಗಿ ಉಳಿದುಕೊಂಡಿದೆ"

ಮೂಢನಂಬಿಕೆಗಳನ್ನು ಒಪ್ಪದ ಅನಂತಮೂರ್ತಿ ಧರ್ಮವನ್ನು ಶುದ್ಧರೂಪದಲ್ಲಿ ಪಡೆಯಲಾಗುವುದಿಲ್ಲ ಎನ್ನುತ್ತಾರೆ. ಅಂದರೆ ಅದನ್ನು ಈಗಿರುವ ಸ್ಥಿತಿಯಲ್ಲೇ ಅಂದರೆ ಎಲ್ಲಾ ಮೂಢನಂಬಿಕೆ—ಜಾತಿ ವ್ಯವಸ್ಥೆ ಸಹಿತ–ಒಪ್ಪಿಕೊಳ್ಳಬೇಕು ಎಂದಂತಾಗುವುದಿಲ್ಲವೆ ?

ಈ ಸಂಸ್ಕೃತಿ ಈ ದೇಶದಲ್ಲಿ ಗಾಢವಾಗಿದ್ದಾಗ ಜಗಳಗಳಲ್ಲಿಯೇ ಅದು ಬೆಳೆದು ಬಂದದ್ದು' ಎನ್ನುವುದಕ್ಕೆ ಶಂಕರಚಾರ್ಯ, ರಾಮಾನುಜಾಚಾರ್ಯ ಮೊದಲಾದವರನ್ನು ಉದಾಹರಿಸುತ್ತಾರೆ. ಆದರೆ ಈ ಆಚಾರ್ಯರು ಜಗಳ ಆಡಿದ್ದು ಯಾತಕ್ಕಾಗಿ ? ಇದರಿಂದ ಪರ್ಯಾಯ ಲಾಭ ಪಡೆದವರು ಯಾರು ? ಶಂಕರಾಚಾರ್ಯರಿಗಂತೂ ಆ ಸಂದರ್ಭದಲ್ಲಿ ಬೌದ್ಧಮತ ಹಿಂದೂ ಮತದ ಮೇಲೆ ಮರ್ಮಾಂತಿಕ ಆಘಾತ ಮಾಡಿದ್ದರಿಂದ ಜಾತಿ ವ್ಯವಸ್ಥೆಯನ್ನು ಮೀರಿ ಒಟ್ಟಂದದ ಹಿಂದೂ ಸಮಾಜವನ್ನು ಕಟ್ಟುವ ಅವಕಾಶವಿತ್ತು. ಆದರೆ ಅವರು ಮಾಡಿದ್ದೇನು ? ಅಂದರೆ ನನ್ನ ಅನಿಸಿಕೆ ಇವರೆಲ್ಲ ತಮ್ಮ ಜನಕ್ಕೆ ಅಂದರೆ ಮೇಲುಜಾತಿ ಹಾಗೂ ಮೇಲುವರ್ಗ ಮುಖ್ಯವಾಗಿ ಜಮೀನುದಾರಿ, ವಾಣಿಜ್ಯವರ್ಗದ ಹಿತಾಸಕ್ತಿ ಕಾಪಾಡಲು ಮುಂದಾಗಿ, ಕೆಳಜಾತಿಯವರು ದೀರ್ಘಕಾಲ ಮೇಲೇರದಂತೆ ದೇವರು, ಧರ್ಮ, ಪುರಾಣ, ಕರ್ಮ, ಪುನರ್ಜನ್ಮದ ಸಿದ್ಧಾಂತವನ್ನು ಛೂ ಬಿಟ್ಟರು. ಅವರು ಕಟ್ಟಿದ್ದು ಶೋಷಕ ಸಂಸ್ಕೃತಿ. ಅವರು ಮನುಷ್ಯರಾಗಿದ್ದರೂ ಅಂತ ನನಗೆ ಪ್ರಾಮಾಣಿಕವಾಗಿ ಅನ್ನಿಸುತ್ತಲೇ ಇಲ್ಲ.

ಜಾತಿ ವಿನಾಶದೊಡನೆ ಅಥವಾ ಸಮಾಜವಾದ ಬಂದೊಡನೆ ಮಾನವನ ಸಂಪೂರ್ಣ ದುಃಖ ನಾಶವಾಗಿ, ಸ್ವರ್ಗ ಸೃಷ್ಟಿಯಾಗುತ್ತದೆಂದು ನಾನು ನಂಬಿದವನಲ್ಲ. ಈ ಅತ್ಯಂತಿಕವಾದ ದುಃಖ, ಸೂಕ್ಷ್ಮ ಸಂವೇದಿಯಾದ ಲೇಖಕನಿಗೆ ದ್ವಂದ್ವಯಾವಾಗಲೂ ಇದ್ದೀತು. ಆ ಕಾರಣದಿಂದಲೇ ಜಾತಿ ವ್ಯವಸ್ಥೆ ಇಟ್ಟುಕೊಳ್ಳಲು ವಾದ ಹೂಡುವುದು ಒಂದು ಪಾಪದ ಕಾರ್ಯವಾಗದೇ ಇರದು.

ನಿಶ್ಚಯವಾಗಿಯೂ ಅನಂತಮೂರ್ತಿಗಳು ಜಾತಿಯ ಲಾಭವನ್ನು ಪಡೆಯಲು ಇಚ್ಛಿಸುವುದಿಲ್ಲ. ಆದರೆ ಅವರ ವಾದಕ್ಕೆ ಹೂಂಗುಡುವ ಸಾವಿರ ಸಂಖ್ಯೆಯ ಜನಕ್ಕೆ ಜಾತಿ ವ್ಯವಸ್ಥೆ ಲಾಭದಾಯಕವಾಗಿದೆ. ಅವರು ಹೇಳುವ ತಾಳ್ಮೆ, ಅಹಿಂಸೆ ಎಲ್ಲಾ ಹಸೀ ಬೊಗಳೆಯಲ್ಲದೆ ವೈಚಾರಿಕ ನಿಷ್ಠೆ ಅಲ್ಲ. ವಿಕೇಂದ್ರೀಕರಣವನ್ನು ತರುವುದಕ್ಕಾಗೇ ಜಾತಿಯನ್ನು ಇಟ್ಟುಕೊಳ್ಳಲು ಇಚ್ಛಿಸಲು ಸಾಧ್ಯವಿಲ್ಲ.

ಜಾತಿ ವ್ಯವಸ್ಥೆ ಹಿಂದೂ ಧರ್ಮಕ್ಕೆ ಅವಿಭಾಜ್ಯ ಅಂಗವಾಗಿದ್ದರೆ ಆ ಧರ್ಮವನ್ನು, ಆ ದೇವರನ್ನು, ಆ ಪುರಾಣವನ್ನು ಉಳಿಸಿಕೊಳ್ಳಬೇಕಾದ ಅವಶ್ಯಕತೆಯೇ ಇಲ್ಲ.

ಇಂತಾ ದ್ವಂದ್ವದ ಮಧ್ಯದಲ್ಲಿ ಎಂತಾ ಘನವಾದ ಸಾಹಿತ್ಯ ಹುಟ್ಟುತ್ತದೆ ಎಂಬುದು ಮುಖ್ಯವಲ್ಲ. ಅಂತಾಸಾಹಿತ್ಯದ ಅವಶ್ಯಕತೆಯೂ ಇಲ್ಲ. ನಮಗೆ ಜೀವನ ಮುಖ್ಯ. ಅದನ್ನು ಉದ್ದೀಪನಗೊಳಿಸುವ ಸಾಹಿತ್ಯಬೇಕೇ ಹೊರತು ಈ ಯಥಾಸ್ಥಿತಿಯನ್ನು ಸಾವಿರ ಜಾತಿಯ ಮೇಲಿನ ಸವಾರಿಯನ್ನು ನಡೆಸುವುದು ವೈಚಾರಿಕತೆಯಾಗಲಾರದು. ಪಾಶ್ಚಾತ್ಯ ಸಮಾಜ ವ್ಯವಸ್ಥೆಯ ರೀತಿ ಬೇರೆ. ಜಾತಿನಿಷ್ಠವಾದ ಅದು ವಿಕೇಂದ್ರಿಕರಣದ ಮುಕ್ತ ಫಲಗಳೇ ಆಗಿರಲಿ–ನಮ್ಮಲ್ಲಿ ಸೂಕ್ಷ್ಮಧಾರ್ಮಿಕ ಸಂವೇದನೆಯ ಮನುಷ್ಯ ತನ್ನ ಅನಿಸಿಕೆ, ಅನುಭವಕ್ಕೆ ಚಿಂತನೆಯ ರೂಪ ಕೊಟ್ಟಾಗ ಅನಂತಮೂರ್ತಿಯವರಂತ ನಯವಾದ, ತಾರ್ಕಿಕವಾದ, ಸಭ್ಯವಾದ ವಾದ ಕೂಡ ತುಂಬಾ ಅಂದರೆ ರಷ್ಯನ್ ಟ್ಯಾಂಕಿಗಿಂತ ಅಪಾಯಕಾರಿಯಾಗುತ್ತದೆನ್ನದೆ ಬೇರೆ ವಿಧಿಯಿಲ್ಲ.

ನನಗೆ ಜಾತಿ ಎಂಬ ಕಾರಣದಿಂದ ಎಲ್ಲೂ ಯಾರೂ ಆತ್ಮೀಯರಾದದ್ದು ಇಲ್ಲ. ಅದಕ್ಕೆ ನನ್ನಲ್ಲೇ ಏನೊ ದೋಷ ಇದೆಯೋ ಏನೊ! ಜಾತಿಯವರು ಆತ್ಮೀಯರಾ (?) ದದ್ದು ಏನಾದರೂ ಆಗಿದ್ದರೆ ಅದು ಸ್ವಾರ್ಥಕ್ಕೆ. ನನ್ನ ಮನೆಯಲ್ಲಿ ಯಾರಾದರೂ ಸತ್ತರೆ ಹೆಣ ತೆಗೆಯಲು ಬೇರೆಯವರು ಬರುವುದಿಲ್ಲವಾದ ಅನಿವಾರ್ಯಕ್ಕೆ ಆಗಿರಬಹುದು. ಇನ್ನು ಅನೇಕರಿಗೆ ಜಾತಿಯ ಮನುಷ್ಯ ಆತ್ಮೀಯರಾಗುವುದು ಚುನಾವಣೆಗೆ ನಿಲ್ಲಲು ಮತ್ತು ಬೇರೆ ಜಾತಿಯವರನ್ನು ತುಳಿಯಲೋಸುಗ ಬಲ ಸಿಕ್ಕಲು, ಅಷ್ಟೆ. ನಾವು ಈ ಸ್ವಾರ್ಥಮೂಲವನ್ನು ನಿವಾರಿಸಿಕೊಂಡಾಗಲೇ ಸಂಪೂರ್ಣ ಅಲ್ಲದಿದ್ದರೂ ಹೆಚ್ಚು ಪಾಲು ಮಾನವರಾಗುತ್ತೇವೆ.

ಇಲ್ಲಿ ನಾನು ಬರೆಯುತ್ತಿರುವುದು ಒಂದು ಪ್ರತಿಕ್ರಿಯೆ ಅಷ್ಟೆ. ಅದು ಪ್ರಬುದ್ಧವಾಗಬಾರದು ಎಂದುಕೊಂಡು ಸಂಕ್ಷಿಪ್ತಗೊಳಿಸಿದ್ದೇನೆ. ಮೋಹನರಾಯರ ಇಂಗ್ಲಿಷ್ ವಿದ್ಯೆಯ ಆಯ್ಕೆಯ ಸಂಗತಿ ಹೇಗೇ ಇದ್ದರೂ ಯಂತ್ರನಾಗರಿಕತೆಯ ಬಗ್ಗೆ ಅನಂತಮೂರ್ತಿಯವರೊಡನೆ ಒಪ್ಪಿಕೊಳ್ಳುವ ಅಂಶ ನಮಗೂ ಇದೆ. ಅದನ್ನು ಇಲ್ಲಿ ವಿವರಿಸುವ ಅಗತ್ಯ ಅನ್ನಿಸಲಿಲ್ಲ. ಯಾಕೆಂದರೆ ನನ್ನ ಗಮನ ಇರುವುದು ಅನಂತಮೂರ್ತಿ ಅವರ ಒಟ್ಟೂ ಪ್ರತಿಪಾದಿತ ಅರ್ಥದ ಮೇಲೆ.

ನರಕಯಾತನೆಯ ಒಂದು ವಿದ್ಯಾರ್ಥಿನಿಲಯದ ಕಥೆ

ಮಂಡ್ಯದಲ್ಲಿ ಚೆನ್ನಾಗಿ ಕುಡ್ದು, ತಿಂದು, ತೇಗಿ, ಹಣ ಹೊಡೆಯೊ ತಾಣ ಯವುದು ? ಅಂತ ಯಾರಾದ್ರು ಮಂಡ್ಯಕ್ಕೆಹೊಸದಾಗಿ ಬಂದಕಾಲೇಜ್ ಲೆಕ್ಚರರ್ ಕೇಳಿದ್ರೆ "ಬನ್ನೂರ ರೋಡಿನಾಗೆ ಒಂದು ಹೊಲೇರ ಹೈಕ್ಳ ಕಾಲೇಜ್ ಹಾಸ್ಟೆಲ್ ಇದೆ. ಅಲ್ಗೆ ವಾರ್ಡನ್ ಆಗಿ ಹೋದ್ರೆ, ತನಗಲ್ಲದೆ, ಮನೆಗಲ್ಲದೆ ಮನೆ ಹೆಡ್ತಿ ಮೈತುಂಬಾ ಬಂಗಾರ ಹೊದಿಸುವಷ್ಟು ಹಣ ಗಿಟ್ಟಿಸಬಹುದು" ಎಂದು ಬಹಿರಂಗವಾಗಿ ಬೆಟ್ಟು ಮಾಡಿ ತೋರುವ ಮಂದಿ ಮಂಡ್ಯದಲ್ಲಿ ಎಲ್ಲೆಲ್ಲು ಸಿಗುತ್ತಾರೆ. ಅಂದ್ರೆ ಈ ಹಾಸ್ಟೆಲ್ ಜನರಿಗೆ ಅಷ್ಟು ಚಿರಪರಿಚಿತ.

ಕಳೆದ ತಿಂಗಳು "ಊಟಕ್ಕೆ ಹಲ್ಲಿಬಿದ್ದು ಹುಡುಗರೆಲ್ಲ ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದಾರೆ" ಎಂಬ ಉದ್ದುದ್ದ ಸಾಲುಗಳು ಪೇಪರಿನಲ್ಲಿ ಕಾಣಿಸಿಕೊಂಡವೆ ಹೊರತು ಹಲ್ಲಿ ಯಾಕೆ ಬಿತ್ತು ? ಹೇಗೆ ಬಿತ್ತು ? ಯಾರು ಕೆಡಗಿದ್ರು ? ಇದು ಯಾರ ಕೈವಾಡ ? ಈ ಹಾಸ್ಟೆಲ್‌ನ ಇತಿಹಾಸವೇನು ? ಇದರ ಅಡಿಯಲ್ಲಿ ಏನೇನು ನಡಿತಿವೆ ಅನ್ನುವ ಬಗ್ಗೆ ಯಾರೊಬ್ಬನು ಚಕಾರವೆತ್ತಲಿಲ್ಲ. ಎಲ್ಲ ಸೀರೆಯೊಳಗೆ ಬಚ್ಚಿಟ್ಟುಕೊಂಡತಾಗಿದೆ. ಎಲ್ಲಾ ಘಟನೆಗಳಿಗೂ ಹಾಸ್ಟೆಲ್‌ನ ಹುಡುಗರೆ ಅಪರಾದಿಗಳು ಎಂದು ಬೆಟ್ಟು ಮಾಡಿ ತೋರುವ ಇಲ್ಲಿನ ಡಿ. ಎಸ್ ಡಬ್ಲ್ಯು. ಓ ಆಫೀಸಿನ ಅಧಿಕಾರಿಗಳು ಸೇರಿ ಲಂಚದ ವ್ಯೂಹವನ್ನು ರಚಿಸಿಕೊಂಡಿದ್ದಾರೆ.

ಈ ಲಂಚದ ವ್ಯೂಹದಲ್ಲಿ ಹಾಸ್ಟೆಲ್ ಛೇರ್ಮನಂದ ... ದು ಜಿಲ್ಲಾಧಿಕಾರಿಯನ್ನು ಒಳಗೊಂಡು ... ನಿಸ್ಟರನ್ನು ಕೂಡ ಸೇರಿಸಿಕೊಂಡು ಬಲೆಯನ್ನು ... ದ್ದುಕೊಂಡಿದ್ದಾರೆ. ಮೊನ್ನೆ ತಾನೆ ಬಂದು ... ದ ರಾಜವರ್ದನ್ ಎಂಬ ಸಚಿವ ಆಡಿದ ... ಕು ಪ್ರತಿಯೊಬ್ಬ ದಲಿತ ವಿದ್ಯಾರ್ಥಿ ಎದೆಗೆ ... ದ್ದ ಹಾಗೆ ಆಗಿದೆ. ಈತ ಬಂದಿದ್ದು ಹಲ್ಲಿಬಿದ್ದ ಅನ್ನ ತಿಂದು ಸಾಯುತ್ತಿರುವ ಹುಡುಗರ ಕಷ್ಟ ತಿಳಿಯಲು ಅಲ್ಲ, ಲಂಚದ ವ್ಯೂಹದವರ ಕಷ್ಟಸುಖಗಳನ್ನು ವಿಚಾರಿಸಲು ಮಾತ್ರ.

ಉಪ್ಪು ಹಾಕಿಲ್ಲ ಸಾರ್, ಸಾಂಬಾರ್ ಚೆನ್ನಾಗಿಲ್ಲ ... ರ್, ತರಕಾರಿ ಚೆನ್ನಾಗಿರೋಲ್ಲ ತರ್ಸಿ ಸಾರ್, ... ಯೊಳಗೆ ಹುಳ ಜಾಸ್ತಿ ಸಾರ್, ಪ್ಲೇಟ್‌ಗೆ ... ಕ್ ಕೊಡ್ಸಿ, ಈ ಥರದ ಕಂಪ್ಲೆಂಟ್‌ಗಳನ್ನು ವಾರ್ಡನ್ ಸಾಹೇಬರ ಮುಂದೆ ಇಟ್ಟರೆ ಇವೆಲ್ಲ ತಾಪತ್ರೆ ಯಾಕ್ರಿ ನಿಮಗೆ, ತಿಕ ಮುಚ್ಚಿಕಂಡು ತಿಂದು ಹೋಗ್ರಿ. ಹೆಚ್ಚಿಗೆ ಮಾತಾಡಿದ್ರೆ ಹಾಸ್ಟೆಲ್‌ನಿಂದ ಸಸ್ಪೆಂಡ್ ಮಾಡಿಬಿಡ್ತೀನಿ. ವಿಧೇಯತೆ ಆಯ್ತೀನ್ರಿ ನಿಮಗೆ. ಈ ರೀತಿ ಕೇಳಬಾರ್ದು. ಬಾರಿ ತಪ್ಪು. ಮೂಗಿನ ತುದಿಯಿಂದಲೆ ಕೋಪದಿಂದ ಹಾರಾಡುತ್ತಾ ಬೈಯ್ಯುತ್ತಾರೆ.

ಇನ್ನು ಮೇಲಿನ ಅಧಿಕಾರಿ ಅಂದ್ರೆ ನಮ್ಮ ಸಮಾಜ ಕಲ್ಯಾಣ (ತಿಥಿ) ಮಾಡುವ ದಯಾನಂದ ಎಂಬ ಸಾಹೇಬ ನಮ್ಮ ನೋಡುತ್ತಲೇ, ಅವನಿಗೆ ಉರಿ ಹತ್ತಿಬಿಡುತ್ತೆ, ಕಾಲಿನಿಂದ ತಲೆತನಕ ಜಾತಿ ಗೀತಿ ಎಲ್ಲವನ್ನೂ ಸೇರಿಸಿಕೊಂಡು ತಾರಾಮಾರಾ ಬೈಯ್ದು ಕಳಿಸಿ ಬಿಡ್ತಾನೆ. ಯಾಕ್ ಸಾರ್ ಬೈಯ್ತಿರಿ ನಮ್ ಸೇವೆ ಮಾಡೂಕೆ ಅಲ್ವ ಸಾರ್ ನೀವು ಇರೋದು ಅಂದ್ರೆ, ಕುರ್ಚಿ ಬಿಟ್ ಓಡಿಸ್ಕಂಡೆ ಬರ್ತಾನೆ. 5ಗಂಟೆ ಹೊತ್ಗೆ ಆ ಹುಡುಗನಿಗೆ ನೋಟೀಸ್ "ಹಾಸ್ಟೆಲ್‌ನಿಂದ ಸಸ್ಪೆಂಡ್" ಎಂಬ ಶಿರೊನಾಮೆ ಹೊತ್ತುಕೊಂಡು ಬರುತ್ತೆ.

ಈ ಹಾಸ್ಟೆಲ್‌ಗೆ ಸೇರುವಾಗ ಮುನ್ನೂರ ಮೂವತ್ತು ಮಸೂದೆಗಳು, ಬಹುಶಃ ಪಾರ್ಲಿಮೆಂಟ್ ನಲ್ಲೂ ಕೂಡ ಈ ಮಸೂದೆಗಳನ್ನು ಹುಟ್ಟಿಸುವುದಿಲ್ಲ ಅಂತ ಅನ್ನಿಸುತ್ತೆ. ಸಿಳ್ಳು ಹಾಕಬಾರದು ಕಿರ್ ಅಂತ ಕಿರಚಬಾರದು, ಕೂಗಬಾರದು. ಕಿಟಕಿಯಲ್ಲಿ ನೋಡಬಾರದು, ಸಭೆ ಮಾಡಬಾರದು, ಹಾಡಂತೂ ಹೇಳಲೆಬಾರ್ದು, ಮಾತನ್ನು ಹೆಚ್ಚಿಗೆ ಆಡಬಾರದು, ಉಪ್ಪೊ ಸಪ್ಪೆಯೊ ಮೌನದಿಂದ ಮಾತಾಡದೆ ತಿನ್ನಬೇಕು, ನೀರು ಬರದಿದ್ರೆ ಅಂಗಿಗೆ ಕೈ ಒರಸ್ಕಂಡು ಹೋಗಬೇಕು, ಈ ಬಗ್ಗೆ ವಾರ್ಡನ್‌ರವರಲ್ಲಿ ಕೇಳಬಾರದು, ಯಾವುದೆ ಕಾರಣಕ್ಕು ಹಾಸ್ಟೆಲ್ ನಿಲ್ಲಿಸಿದರೆ ದುಡ್ಡು ಕೇಳಬಾರದು ತಮ್ಮ ಸ್ವಂತ ದುಡ್ಡಲ್ಲೆ ಊಟ ಮಾಡಬೇಕು. ಈ ಖಾಯಿದೆಯನ್ನು ಉಲ್ಲಂಘಿಸಿದವರಿಗೆ, ಈ ಮಸೂದೆಯನ್ನು ಮರೆತ ವಿದ್ಯಾರ್ಥಿಗಳಿಗೆ ಮಣಗಟ್ಟಲೆ ಮೊಕದ್ದಮೆಗಳು. ಈ ಮಸೂದೆ ಸರಿಯೊ ತಪ್ಪೊ ಅಂತ ಚರ್ಚೆ ಮಾಡುವುದಕ್ಕೆ ಇದೇನು ಪಾರ್ಲಿಮೆಂಟಾ ? ವಿರೋಧ ಪಕ್ಷ ಇದೆಯಾ ? ಅಧಿಕಾರಿಗಳು ಆಡಿದ್ದೆ ಆಟ ಮಾಡಿದ್ದೆ ಮಾಟ.

ಅಪ್ಪ ಅವ್ವ ತಾಲಿ ಓಲೆ ಮಾರಿಕೊಟ್ಟ ಅಡ್ವಾನ್ಸ್ ದುಡ್ಡನ್ನೂ ನುಂಗಿ ನೀರು ಕುಡಿದು ರಾಜಿನಾಮೆ ಕೊಟ್ಟು ಮನೆ ಸೇರಿಕೊಂಡ ನಾಗಭೂಷಣ ಎಂಬ ಹಿಂದಿದ್ದ ವಾರ್ಡನ್ ಈ ಹಾಸ್ಟೆಲ್‌ನ್ನು ನರಕಕ್ಕೆ ದೂಡಿದ. ಈ ಹಾಸ್ಟೆಲ್‌ನ ಸಂಪೂರ್ಣ ಒಡಕಿಗೆ ಈತನೆ ಕಾರಣ. ಇವನ ಅಪ್ಪಟ ಶಿಷ್ಯ ಶಂಕರಮೂರ್ತಿ ಎಂಬುವ ಈಗ ವಾರ್ಡನ್. ಈತ ಹಾಸ್ಟೆಲ್‌ಗೆ ಬರುವುದೇ ಅಪರೂಪ. ಸಿದ್ದ ಎಂಬ ಒಬ್ಬ ನರಿಯ ಜೊತೆ ಹಳೆ ಅಕ್ಕಿ ಹುಳಹತ್ತಿರುವ ತರಕಾರಿ ಕೊಟ್ಟು ಕಳಿಸಿ ಸಾವಿರಾರು ರೂಪಾಯಿ ಬಿಲ್ಲು ಅಂಟಿಸಿದ್ದಾನೆ ನೋಟೀಸ್ ಬೋರ್ಡ್ನಲ್ಲಿ. ಇಂದೊ ನಾಳೆಯೊ ಮುಚ್ಚುತ್ತೇನೆ ಹಾಸ್ಟೆಲ್‌ನ್ನು ಎಂದು ಹುಡಗರನ್ನು ಎದುರಿಸುತ್ತಿದ್ದಾನೆ. ಏನಾದರೂ ಮುಚ್ಚಿದರೆ, ಹಸಿದಿರುವ ಹುಡುಗರು ಉಗ್ರ ಚಳುವಳಿಯನ್ನು ಆರಂಭಿಸಬೇಕಾಗುತ್ತೆ ಎಚ್ಚರಿಕೆಯನ್ನು ಕೊಡುತ್ತಿರುವ ವಿದ್ಯಾರ್ಥಿಗಳ ಮಾತಿಗೆ ಅಧಿಕಾರಿಗಳು ಗಮನವನ್ನೆ ಕೊಡುತ್ತಿಲ್ಲ. ಈ ಬಗ್ಗೆ ವಿದ್ಯಾರ್ಥಿಗಳು ಇಷ್ಟರಲ್ಲೇ ಚಳುವಳಿಯನ್ನು ಹೂಡಲು ನಿರ್ಧರಿಸಿದ್ದಾರೆ. ತಕ್ಷಣ ಶಂಕರಮೂರ್ತಿಯನ್ನು ವಜಾಮಾಡಿ, ಹಾಸ್ಟೆಲನ್ನು ಸರಿಮಾಡಿ ಹಸಿದಿರುವ ವಿದ್ಯಾರ್ಥಿಗಳಿಗೆ ಅನ್ನನೀಡಿ ಎಂಬುದೇ ವಿದ್ಯಾರ್ಥಿಗಳ ಬೇಡಿಕೆಯಾಗಿವೆ.

–ಹಿಟ್ನಳ್ಳಿ ಮಹಾದೇವ

ಚರಿತ್ರೆ ಬದಲಿಸಬಲ್ಲ ದಲಿತ ಮತ್ತು ರೈತ ಚಳುವಳಿ

ಕರ್ನಾಟಕದ ಇಂದಿನ ಎರಡು ಪ್ರಮುಖ ಚಳುವಳಿಗಳಾದ ದಲಿತ ಚಳುವಳಿ ಮತ್ತು ರೈತ ಚಳುವಳಿಗಳು ಈವರೆಗೆ ತಮ್ಮ ನಡುವೆ ಇದ್ದ ಮುಖಮುನಿಸುಗಳನ್ನು ತೊರೆದು ಒಂದೇ ವೇದಿಕೆಯ ಮೇಲೆ ಕೂತು ತಮ್ಮ ಬಗ್ಗೆ ವಿಮರ್ಶೆ ಮಾಡಿಕೊಳ್ಳುವಂಥ ಐತಿಹಾಸಿಕ ಘಟನೆ ಇತ್ತೀಚೆಗೆ ಮೈಸೂರಿನ ದಲಿತ ವಿದ್ಯಾರ್ಥಿ ಒಕ್ಕೂಟ ಡಿಸೆಂಬರ್ 3ರಂದು ಏರ್ಪಡಿಸಿದ್ದ ದಲಿತ ಮತ್ತು ರೈತಚಳುವಳಿ ವಿಚಾರ ಸಂಕಿರಣದಲ್ಲಿ ನಡೆಯಿತು.

ದಲಿತ ಸಂಘರ್ಷ ಸಮಿತಿಯಿಂದ ಬಿ. ಕೃಷ್ಣಪ್ಪ ಚಂದ್ರಪ್ರಸಾದ್ ತ್ಯಾಗಿ, ಸಿದ್ದಲಿಂಗಯ್ಯ ಕೆ. ರಾಮಯ್ಯ—ಇವರುಗಳು ಮಾತನಾಡಿ ದಲಿತ ಚಳುವಳಿಯ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನೆಲೆಗಳ ಬಗ್ಗೆ ವಿವರಿಸಿದರು.

ರೈತಸಂಘದಿಂದ ಪ್ರೊ॥ ಎಂ. ಡಿ. ನಂಜುಂಡಸ್ವಾಮಿ, ಮಂಜುನಾಥದತ್ತ ಮತ್ತು ವೆಂಕಟೇಶಮೂರ್ತಿ–ಇವರುಗಳು ಮಾತನಾಡಿ ರೈತಸಂಘದ ಮೇಲಿನ ಆರೋಪಗಳಿಗೆ ಉತ್ತರಿಸಿದರು.

ಎರಡು ಚಳುವಳಿಗಳನ್ನೂ ಹತ್ತಿರದಿಂದ ಭಾಗವಹಿಸಬಲ್ಲ ಕೆ. ರಾಮದಾಸ್, ರವಿವರ್ಮಕುಮಾರ್ ಮತ್ತು ಕೆ. ಟಿ. ಶಿವಪ್ರಸಾದ್– ಇವರುಗಳು ಪ್ರಾಮಾಣಿಕ ವಿಮರ್ಶೆಗಳೊಂದಿಗೆ ನಡೆದರ ಈ ಎರಡು ಚಳುವಳಿಗಳು ಈ ದೇಶದ ಚರಿತ್ರೆಯನ್ನು ಬದಲಿಸಬಲ್ಲವೆಂಬ ಆಶಯವನ್ನು ವ್ಯಕ್ತಪಡಿಸಿದರು.

ಎರಡು ಅಧಿವೇಶನಗಳ ಅಧ್ಯಕ್ಷತೆಯನ್ನು ಖ್ಯಾತ ಸಾಹಿತಿಗಳಾದ ಶ್ರೀ ಚದುರಂಗ ಮತ್ತು ಶ್ರೀ ದೇವನೂರ ಮಹಾದೇವ ಅವರುಗಳು ವಹಿಸಿದ್ದರು.

ಸಂಪಾದಕ, ಪ್ರಕಾಶಕ : ಗೋವಿಂದಯ್ಯ, ವಿನಯ ಪ್ರಿಂಟರ್ಸ್, 2514, ಕೆ. ಜಿ. ಕೊಪ್ಪಲು, ಮೈಸೂರು-14.

ಹಿಂದುಳಿದವರ ಹಿತರಕ್ಷಣೆ

- ಸರ್ವರಿಗೂ ಸಮಾನ ಅವಕಾಶ; ದೌರ್ಜನ್ಯಗಳಿಂದ ದಲಿತ ವರ್ಗದ ರಕ್ಷಣೆ—ಇದು ಸರ್ಕಾರದ ಗುರಿ.

- ಹರಿಜನ-ಗಿರಿಜನರ ಉದ್ಧಾರಕ್ಕಾಗಿ ನೇಮಕಗೊಂಡ ಹರಿಜನ-ಗಿರಿಜನ ಕಾರ್ಪೊರೇಷನ್ ತೀವ್ರ ಕಾರ್ಯನಿರತ.

- ಹಿಂದುಳಿದ ವರ್ಗದವರಿಗೆ ಶಿಕ್ಷಣ ಮತ್ತು ಸರ್ಕಾರಿ ಸೇವೆಯಲ್ಲಿ ಸೂಕ್ತ ಪ್ರಾತಿನಿಧ್ಯ.

- ದ್ವಿತೀಯ ಹಿಂದುಳಿದ ವರ್ಗಗಳ ಆಯೋಗ ಹಾಗೂ ಅಲ್ಪಸಂಖ್ಯಾತ ಆಯೋಗಗಳ ರಚನೆ.

- ದಲಿತರ ಮೇಲೆ ಆಗುವ ದೌರ್ಜನ್ಯಗಳನ್ನು ತಪ್ಪಿಸಲು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹೆಚ್ಚಿನ ಅಧಿಕಾರ.

- ಕೋಮು ಗಲಭೆಗಳನ್ನು ಹತ್ತಿಕ್ಕಿ ಸೌಹಾರ್ದತೆಯನ್ನು ಕಾಯಲು ರಾಜ್ಯ ಹಾಗೂ ತಾಲ್ಲೂಕು ಮಟ್ಟದಲ್ಲಿ ಸಮಿತಿಗಳ ರಚನೆ.

ಪ್ರಕಟಣೆ: 'ಕರ್ನಾಟಕ ವಾರ್ತೆ'